BUDGET ESTIMATES FOR 1963-64—GENERAL DISCUSSION.

(Debate continued.)

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ನಮ್ಮ ಮಾನ್ಯ ಹಣಕಾಸಿನ ಸಚಿವರು ಮಾಡಿದ ಭಾಷಣವನ್ನು ನೋಡಿದರೆ ನನಗನ್ನಿಸುತ್ತದೆ, ಇದು ನಮ್ಮ ದೇಶದ ಸರ್ವತೋಮುಖವಾದ ಬೆಳವಣಿಗೆಗೆ ನಮ್ಮ ದೇಶವನ್ನು ಮುಂದಕ್ಕೆ ತರುವುದಕ್ಕೆ ಹಣಕಾಸಿನ ವಿಚಾರದಲ್ಲಿ ಯಾವು ಯಾವುದಕ್ಕೆ ಯಾವಯಾವರೀತಿ ಹಂಚಿದೆ ಎನ್ನುವ ವಿವರ ಇದರಲ್ಲಿದೆ, ಆ ದೃಷ್ಟಿಯಿಂದ ನೋಡಿದರ ಸಮತೋಲನ ತಪ್ಪಿದೆ ಮತ್ತು ಸತ್ಯಪಿಪಾಸೆ, intellectual honesty ಇಲ್ಲ ಎಂದು ಗೊತ್ತಾಗುತ್ತದೆ. ಆಮೇಲೆ ಇದರಲ್ಲಿ ಸ್ವಲ್ಪ ತಪ್ಪುಗಳಿವೆ ಪ್ರಿಂಟ್‌ನಲ್ಲಿ, ಒಂದನ್ನು ತೋರಿಸುತ್ತೇನೆ. ಪ್ಯಾರ 4ರಲ್ಲಿ ರಾಗಿ ವಿಚಾರ ತೆಗೆದುಕೊಂಡರೆ calculate ಮಾಡಿದ್ಧರೆ increase comes to round about 31 tons per acre. Statistics ಸಂಗ್ರಹ ಮಾಡುವುದರಲ್ಲಿಯೂ ಈತರಹ ತಪ್ಪುಗಳಿವೆ. ಒಟ್ಟಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರಕ್ಕೆ ಬಂದಾಗಿನಿಂದ ಅವರು ಹೇಳುವ ವಾದದ ತಿರುಳನ್ನು ನೋಡಿದರೆ ಎಲ್ಲರೂ ಅನುಕೂಲಸ್ಥರಾಗುವ ಹಾಗೆ ಮಾಡುತ್ತೇವೆ, ಎಲ್ಲರೂ ವಿದ್ಯಾವಂತರಾಗುವ ಹಾಗೆ ಮಾಡುತ್ತೇವೆ. ಜಾತ್ಯಾತೀತ ರಾಷ್ಟ್ರವನ್ನಾಗಿ ಮಾಡುತ್ತೇವೆ, ದೇಶ ಬಹಳ ಮುಂದಕ್ಕೆ ಹೋಗುತ್ತದೆ ಎನ್ನುವುದು ಅವರ claims. ಇವರು ಹದಿನೈದು ವರ್ಷಗಳಿಂದ ರಾಜ್ಯಭಾರ ಮಾಡಿದ್ದಾರೆ. ಆದರೆ ಇವರು ಹೇಳಿಕೊಂಡದ್ದಕ್ಕೂ, ಫಲಿತಾಂಶಗಳಾಗಿರುವುದಕ್ಕೂ ಹೋಲಿಸಿದರೆ ಅದರಲ್ಲಿ ಎಳ್ಳಷ್ಟಾದರೂ ಮಾಡಿದ್ದಾರೆಯೇ, ಸರಿಯಾಗಿದೆಯೇ ಅಥವಾ ಇಲ್ಲವೇ ಎನ್ನುವುದು ಆವಾಗ ಗೊತ್ತಾಗುತ್ತದೆಯೇ ಹೊರತು ಸುಮ್ಮನೆ ಜಿಜ್ಞಾಸೆ ಅಥವಾ ವಾದದಿಂದ ಚೆನ್ನಾಗಿ ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಏನಾಯಿತು ಎಂದರೆ, ಇದಕ್ಕೆ ಒಂದು ಉದಾಹರಣೆ ಯನ್ನು ಕೊಡುತ್ತೇನೆ. 1942, 43, 44, 45ನೆಯ ಇಸವಿಯಲ್ಲಿ ಬ್ರಿಟಿಷರ ಆಳ್ವಿಕೆ ಇದ್ದಾಗ ಯುದ್ಧಕಾಲದಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಭಿಕ್ಷುಕರು ಸತ್ತುಹೋಗುತ್ತಿದ್ದರು. ಮೊನ್ನೆದಿನ ಜನರಲ್ ಹಾಸ್ಪಟಲಿಗೂ ಮೆಡಿಕಲ್ ಕಾಲೇಜ್ ಹಾಸ್ಪಟಲಿಗೂ ಮಧ್ಯೆ ಇರುವ ಜಾಗದಲ್ಲಿ ಒಬ್ಬ ಭಿಕ್ಷುಕ ಸಾಯುತ್ತ ಬಿದ್ದಿದ್ದ. ನಾನು ಫೋನ್ ತೆಗೆದುಕೊಂಡು ಕಾರ್ಪೊರೇಷನ್ನಿಗೆ ಫೋನ್ ಮಾಡಿದೆ. ಇವೊತ್ತು ರಜ ಬಂದಿದೆ, ಅದನ್ನು ಸಾಗಿಸುವುದು ಹೇಗೆ ಎಂದರು. ಕೊನೆಗೆ ನಿಸ್ಸಹಾಯಕನಾಗಿ ಮಾನ್ಯ ಆರೋಗ್ಯ ಮಂತ್ರಿಗಳಾದ ನಾಗಪ್ಪ ಆಳ್ವರವರಿಗೆ ಫೋನ್‌ಮಾಡಿದೆ. ಆವಾಗ ಬಂದು ತೆಗೆದುಕೊಂಡುಹೋದರು. ಅವನು ಬದುಕಿದ್ದಾನೆಯೋ ಅಥವಾ ಸತ್ತುಹೋಗಿದ್ದಾನೆಯೋ ಎನ್ನುವ ವಿವರಗಳು ಇನ್ನೂ ಗೊತ್ತಾಗಿಲ್ಲ.

ಇಷ್ಟು ವರ್ಷಗಳಾದಮೇಲೂ ನಮ್ಮ ಸರಕಾರ ಆಹಾರ ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸಲು ಏನು ಗುರಿ ಮಾಡಬೇಕಾಗಿತ್ತೋ ಅದನ್ನು ಅವರು ಸಾಧಿಸಲಿಲ್ಲ ಎಂದು ಒಟ್ಟಿನಲ್ಲಿ ನಾನು ಹೇಳುತ್ತೇನೆ. ಎಂದರೆ ಎಲ್ಲರೂ ಐಶ್ವರ್ಯವಂತರೇ ಆಗಿದ್ದಾರೆ. ಈ ಐಶ್ವರ್ಯವಂತರನ್ನು ಇನ್ನೂ ಹೆಚ್ಚು ಐಶ್ವರ್ಯವಂತರನ್ನಾಗಿ ಮಾಡುವುದು ಜಾಸ್ತಿಯಾಗುತ್ತಿದೆ. ಮೈಸೂರು ದೇಶದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಕಲ್ಕತ್ತಾದಲ್ಲಿ ಆದಂತೆ ಆಗಲಿಲ್ಲ. ಆ ರೀತಿಯ ಚಿತ್ರ ಇಲ್ಲಿ ಸಿಕ್ಕುತ್ತಿದೆ. ಇದಕ್ಕೆ ಉದಾಹರಣೆಯಾಗಿ ನಡೆದ ಒಂದು ಜೀವನಚರಿತ್ರೆಯನ್ನು ನಿಮಗೆ ಹೇಳುತ್ತೇನೆ. 1943ನೇ ಇಸ್ವಿಯಲ್ಲಿ ಕಲ್ಕತ್ತದಲ್ಲಿ ದಾರಿಯಲ್ಲೆಲ್ಲಾ ಹೆಣಗಳು ಸತ್ತುಬಿದ್ದಿದ್ದರೂ ಜನ ಹಾಗೇ ನೋಡಿಕೊಂಡು ಹೋಗುತ್ತಿದ್ದರು.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು 'ಹೆಣ ಸತ್ತು ಬಿದ್ದಿದ್ದರೂ' ಎಂದು ಹೇಳಿದರು. I don't know,

(ನಗು).

ಶ್ರೀ ವಿ. ಎಂ. ದೇವ್.—Sir, the Finance Minister is very wise. He will use his wisdom towards this beggar problem.

ಈ ದೇಶದ ಉತ್ಪತ್ತಿ ಎಷ್ಟಿರಬೇಕಾಗಿತ್ತು ಮತ್ತು ಆಗಿನ ಜನ ಯಾವರೀತಿ ಕೆಲಸ ಮಾಡುತ್ತಿದ್ದರು ಹೇಗಿತ್ತು, ಎನ್ನುವುದನ್ನು ಇಲ್ಲಿ ಹೇಳಲು ಪ್ರಯತ್ನ ಪಡುತ್ತೇನೆ. ಅಲ್ಲಿ ನಾನು ಮತ್ತು ಇನ್ನೊಬ್ಬರು ಮಿತ್ರರು ನನ್ನೊಡನೆ ಇರುತ್ತಿದ್ದರು ನಾವೆಲ್ಲ ಕೆಲಸವಾದಮೇಲೆ ಊಟಮಾಡಲು ಅವಕಾಶ ಸಿಗುತ್ತಿತ್ತು. ಆ ವೇಳೆಯಲ್ಲಿ ನಾವು ಊಟಕ್ಕೆ ಬರುತ್ತಿರುವಾಗ ದಾರಿಯಲ್ಲಿ ಬಿದ್ದಿರುವ ಹೆಣಗಳನ್ನೆಲ್ಲಾ ನೋಡಿ ಬರುತ್ತಿದ್ದೆವು. ನನಗೇನೋ ಇದು ರೂಢಿಯಾಗಿಬಿಟ್ಟಿತ್ತು, ಆದರೆ ನನ್ನ ಜೊತೆಯಲ್ಲಿ ಬಂದ ಮಿತ್ರರುಮಾತ್ರ ಊಟ ಮಾಡದೆ ನನ್ನನ್ನು ಕೂಗಿ He is a fellow human being who is dead. I cannot eat.

(ಶ್ರೀ ವಿ. ಎಂ. ದೇವ್)

ಅದರಿಂದ ನನಗೆ ಊಟಮಾಡಲು ಆಗಲಿಲ್ಲ ಎಂದು ಹೇಳಿದರು. ನನಗಾದರೋ ಇದು ರೂಢಿಯಾಗಿತ್ತು. ರೂಢಿಯಾಗಿಬಿಟ್ಟ ಮನುಷ್ಯನಲ್ಲಿ ಏನು ಮಾನವತೆ ಇದೆ, ಅದು ಫೈನಲ್ಲಾಗಿ ಬರಬರುತ್ತಾ ಹಾಳಾಗುತ್ತದೆ. ಇದನ್ನು ಹೇಳುವಾಗ ಬೈರನ್ "freedom of chilly"ನಲ್ಲಿ ಒಂದು ಲೈನನ್ನು ಹೇಳಿದ್ದಾರೆ. "Even I quote my freedom as a sign" ಅವನು ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಈತರಹ ಎಲ್ಲೆಲ್ಲಿಯೂ ಹೋಗಿ ಹೊಡೆದಾಡಿ ಸ್ವಾತಂತ್ರ್ಯ ಪಡೆದರು. ಹಾಗೆ ನೀವು ಕಷ್ಟಪಟ್ಟು ಸ್ವಾತಂತ್ರ್ಯ ಬಂದಮೇಲೆ ಎಂತಹ ಪರಿಸ್ಥಿತಿಗೆ ಇಳಿದ ಬಂದಿದ್ದೀರಿ ಎಂದು ಹೇಳಲು ಬಹಳ ದುಃಖವಾಗುತ್ತದೆ. ಬರಬರುತ್ತಾ ನಿಮ್ಮ ನೈತಿಕ ಮಟ್ಟ ಸರಿಯಾಗಿದೆಯೋ ಎನ್ನುವುದಕ್ಕೆ ಎಲ್ಲಿಯಾದರೂ ಇದ್ದರೆ ನಿಜವಾಗಿ ಅದನ್ನು ಒಪ್ಪುತ್ತೇನೆ.

ಇನ್ನು Intellectual Honestyಬಗ್ಗೆ ನೋಡಿದರೆ ನಿಮಗೆ ಸ್ವಲ್ಪ Sense of Justice ಕೂಡ ಇಲ್ಲ. ಎಲ್ಲಿಯೇ ತೆಗೆದುಕೊಳ್ಳಿ. ಈ ಭಾಷಣದಲ್ಲಿರುವಂತೆ Iron and Steel ಅಥವಾ ಯಾವುದನ್ನೇ ತೆಗೆದುಕೊಳ್ಳಿ. ಇಲ್ಲಿ ಹೇಳಿರುವ ಪ್ಯಾರಾ 6ಅನ್ನು ಬೇಕಾದರೂ ನೋಡಬಹುದು. ನೀವು ಕೊಡಬೇಕಾದಂತಹ ಸೂಚನೆಗಳಂತೆ ನೀವು ಹೋಗಲಿಕ್ಕೆ ಆಗಲಿಲ್ಲ. ಇದರಲ್ಲಿ ಹೇಳಿರುವಂತೆ ಇಷ್ಟಿಷ್ಟು ಪ್ರಮಾಣದಲ್ಲಿರಬೇಕೆಂದು ಎಲ್ಲಾ ದೇಶದ ಬಜೆಟ್ಟುಗಳಲ್ಲಿಯೂ ಬಂದೇಬರುತ್ತದೆ. ಇಲ್ಲಿರುವ ಬಜೆಟ್ಟಿನ ಪಟ್ಟಿಯ ಮಟ್ಟ ಇಷ್ಟು ಕೆಳಕ್ಕೆ ಇಳಿಯಬಾರದಾಗಿತ್ತು. ಈ ಸಭೆಯಲ್ಲಿ ರಾಷ್ಟ್ರಪಿತನ ಫೋಟೋ ಒಂದು ಇದೆ. ಅವರು ಹೇಳುತ್ತಿದ್ದ ಸತ್ಯ, ಮತ್ತು ದೇಶದ ಜನಗಳ ಬುದ್ಧಿ ಮತ್ತೆ ಇವುಗಳನ್ನು ಹರಡಿದ್ದರೂ ಕೂಡ ಹೀಗೇಕೆ ಆಯಿತು ಎಂದು ನನಗನ್ನಿಸುತ್ತಿದೆ. ನನಗನ್ನಿಸುವದು ಘೋಡ್ಸೇ ಎನ್ನುವವನು ಮಹಾತ್ಮಾಗಾಂಧಿಯವರನ್ನು ಕೊಂದು ಪಾಪಕ್ಕೆ ಈಡಾಗಲಿಲ್ಲ. ನಮ್ಮ ದೇಶದ ಜನ ಮಾಡಿದ ಪಾಪದಿಂದ ಈ ರೀತಿ ಆಡಳಿತ ನಡೆಯುತ್ತಿದೆ ಎಂದು ಖಂಡಿತವಾಗಿ ಇಲ್ಲಿ ಹೇಳುತ್ತೇನೆ. ಅಲ್ಲದೇ ಇಲ್ಲಿರುವ ಫೋಟೋ ಕೂಡ ತಪ್ಪು ; ಇದು unnatural posture ಇದ್ದ ಹಾಗಿದೆ. ಸ್ವಲ್ಪ ಅವರ ಕಾಲು ಬಗ್ಗಿದೆ. ಯಾರನ್ನಾದರೂ ಹೋಗಿ ಕೇಳಲಿ. ಆದರೆ ಇಲ್ಲಿರುವ ಪಟೇಲರ ಫೋಟೋ ಸರಿಯಾಗಿದೆ. ಆದರೆ ಮಹಾತ್ಮ ಗಾಂಧಿಯವರ ಫೋಟೋದಲ್ಲಿ ಎರಡು ಕಾಲುಗಳೂ ಬಗ್ಗಿರುವುದರಿಂದ ಇದನ್ನು ಸರಿಯಾಗಿ ಯಾರೂ ಇಲ್ಲಿಯವರೆಗೂ ಗಮನಿಸಿಲ್ಲ ಎಂದು ಕಾಣುತ್ತೆ. ಅಲ್ಲದೆ ನಮ್ಮ ಲೈಬ್ರರಿಯೊಳಗೆ Plateu Report ಇಲ್ಲ. Ecafe ಇಲ್ಲ. ನಾನು ಒಂದು ವಾರದಿಂದಲೂ ಲೈಬ್ರರಿಯಲ್ಲಿ ಕೇಳಿದರೂ ಇಲ್ಲ ಎಂದು ತಿಳಿದುಬಂತು, ಶಾಸನ ಮಾಡುವವರು ಶಾಸ್ತ್ರದ ವಿಚಾರವನ್ನು ಓದದೆ ಇಲ್ಲಿಗೆ ಬಂದರೆ ಏನೂ ಮಾಡುವಂತಿಲ್ಲ. ಈ ದೇಶದಲ್ಲಿರುವ ಎಷ್ಟೋ ಜನರು ಎಂ.ಎಲ್.ಎ.ಗಳು ಆಗಿದ್ದರೂ ಅವರಿಗೆ ಯಾವ ಕೆಲಸವೂ ಬರುವುದಿಲ್ಲ. He has come here as a cast resort ಎಂದು ಜನ ತಿಳಿದುಕೊಳ್ಳುತ್ತಾರೆ. ಈ ದೃಷ್ಟಿಯಿಂದ ನಾನು ಹೇಳುವುದು, ಯಾವುದಾದರೂ ಕೆಲಸ ಮಾಡಬೇಕಾದರೆ ಸರಿಯಾದ ಕಾರ್ಯಕ್ರಮ ಮಾಡಿಕೊಂಡು ಮಾಡಿ ಎಂದು ಹೇಳುತ್ತೇನೆ. ಈ ದೇಶದಲ್ಲಿ ಸಮತೋಲನ ಎಲ್ಲಿ ತಪ್ಪಿದೆ ಅದನ್ನು ನಿವಾರಿಸಲು ಮೂಲ ಭೂತ ಪ್ರಶ್ನೆಗೆ ಹೋಗಬೇಕು. ಅಷ್ಟೇ ಅಲ್ಲ ಮಂತ್ರಿಮಂಡಲವಾಗಬೇಕಾಗಿದ್ದರೆ ಮಂತ್ರಿಮಂಡಲದಲ್ಲಿರುವವರೆಲ್ಲಾ ಯೋಗ್ಯರಾದಂತಹವರು, ವಿದ್ಯಾವಂತರಾದವರು ಇರಬೇಕು. ಇಲ್ಲಿಯೂ ಕೂಡ ವಿದ್ಯಾವಂತರೂ ಅನುಭವವುಳ್ಳವರೂ ಇದ್ದಾರೆ. ಜಾತ್ಯಾತೀತ ರಾಷ್ಟ್ರವಾಗಬೇಕಾಗಿದೆ. ಸಂಸ್ಥಾನದಲ್ಲೆಲ್ಲಾ ಎಲ್ಲರೂ ವಿದ್ಯಾವಂತರು ಯೋಗ್ಯತೆಯುಳ್ಳವರು ಬಂದಾಗ ಇದು ಐದನೆಯ ಯುಗದಂತೆ ಬಂದು ನಿಜವಾಗಿಯೂ ಜಾತ್ಯಾತೀತ ರಾಷ್ಟ್ರವಾಗಬಹುದಾಗಿತ್ತು, ಆದರೆ ಇವೊತ್ತು ಇಲ್ಲಿ ಆಗಿರುವುದೇನಿಲ್ಲ. ಇದನ್ನು ತಾವೆಲ್ಲರೂ ಯೋಚಿಸಬೇಕು. ಈತರದಲ್ಲಿ ರಾಷ್ಟ್ರದ ಕೋನೆಕೋನೆಯಲ್ಲೆಲ್ಲಾ ಜಾತೀಯತೆಯ ಮನೋಭಾವ ಬೆಳೆಯಬೇಕಾದರೆ ಇದನ್ನು ಹೇಗೆ ತಡೆಗಟ್ಟುವುದು. ಇದುವರೆಗೆ ನಡೆದಿರುವ ಡಿಬೇಟಿನಲ್ಲೇ ಪ್ರತಿಯೊಬ್ಬರೂ ಇದನ್ನು ಹೇಳುತ್ತಿದ್ದಾರೆ. ಇದನ್ನು ಹೆಚ್ಚಲಿಕ್ಕೆ ಬಿಡುವುದು ತಪ್ಪು. ಮೈಸೂರು ದೇಶದ ಅಭಿವೃದ್ಧಿಯನ್ನು ಮುಂದುವರಿಸಬೇಕೆಂದು ಪ್ರತಿಯೊಬ್ಬ ಮನುಷ್ಯನೂ ಯೋಚನೆ ಮಾಡುತ್ತಾನೆ. ಹಾಗೇ ಈ ಮಂತ್ರಿಮಂಡಲದ ಯೋಚನೆಗೆ ಮೂಲ ಸರಕಾರದ ಡೆವಲಪ್‌ಮೆಂಟು ಪ್ಲಾನುಗಳಿಂದ ಜನರೇಟು ಆಗುತ್ತದೆ. ಇದು ಯಾವತರಹ ಆಗಬೇಕೆಂದು ನಿರ್ಣಯವಿಲ್ಲದಿದ್ದರೆ ಆಗ ಬಾರದ್ದೇ ಆಗುತ್ತದೆ. ನನ್ನ ಸ್ನೇಹಿತರಾದ ಶ್ರೀ ಬಿ. ಎಲ್. ಗೌಡರು ಹೇಳುವಾಗ ಲಿಂಗಾಯತರು ನಮ್ಮ ದೇಶದ ಒಂದು ಡಿಸ್ಟ್ರಿಕ್ಟಿನಲ್ಲಿ ಅಧಿಕಾರಿಗಳೆಲ್ಲಾ ಲಿಂಗಾಯತರೇ ಇದ್ದಾರೆ ; ಇದರಿಂದ ಶಿಷ್ಟಾಚಾರವಾಗುವುದಿಲ್ಲ ; ಇದರಬಗ್ಗೆ ನಾನು ಸ್ವಲ್ಪ ಕ್ರೂರವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳಿದರು. ಆಮೇಲೆ ನನಗೆ ಬರುವ ರಿಪೋರ್ಟುಗಳನ್ನು ನೋಡಿದರೆ ನಿಜವಾಗಿಯೂ ತಾವು ಹೇಳುತ್ತಿರುವ ಇನ್‌ಫರ್‌ಮೇಷನ್ನು ಮತ್ತು ನಿಮ್ಮ ಪ್ಲಾನುಗಳು ಇವುಗಳಲ್ಲಿ ಯಾವತರಹ ಅನ್ಯಾಯಮಾಡಿದ್ದಾರೆ

ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಕ್ಕಣ್ಣಪ್ಪನವರು ಒಂದು ಸಾರಿ ಹೇಳಿದಾಗ ಈ ದೇಶದಲ್ಲಿ ಹಿಟ್ಲರು, ಮುಸೋಲಿನಿಯವರಂತೆ ಇಲ್ಲಿ ಶ್ರೀಮಾನ್ ಜತ್ತಿಯಾವರೂ ಮಾತ್ತು ಕಂಠಿ ಯವರೂ ಇದ್ದಾರೆಂದು ಹೇಳಿದರು. ನಾನು ಹೇಳುವುದು ಈ ರೀತಿಯಾದ ಪ್ಲಾನಿಂಗನ್ನು ಮಾಡಿದರೆ ಆ ಪ್ಲಾನಿಗೆ ಧಕ್ಕೆ ಬರುತ್ತದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ನನಗೆ ತಿಳಿದಮಟ್ಟಿಗೆ, ಜನಗಳಲ್ಲಿ ಅಶಾಂತಿ ಹೆಚ್ಚಾಗಿದೆ ಎಂದು ಹೇಳುವ ಮಾತನ್ನು ಸ್ವಲ್ಪ Analytical ಆಗಿ ಹೇಳಿದ್ದರೆ ಖಂಡಿತ ಎಲ್ಲರೂ ಅದನ್ನು ಚೆನ್ನಾಗಿ ಕೇಳುತ್ತಿದ್ದರು.

ಇದರಲ್ಲಿ ಒಂದು ಮುಖ್ಯವಾದ ಪ್ರಶ್ನೆ ಬರುತ್ತದೆ. ಈಗಿನ ಸರ್ಕಾರದಲ್ಲಿ ತುಂಬಾ ದಕ್ಷರೂ ಬುದ್ಧಿವಂತರೂ ಜೀನಿಯಸ್ ಆದವರೂ ಮಂತ್ರಿಗಳಾಗಿದ್ದಾರೆ. ಮೂರ್ಖರು ಯಾರೂ ಇಲ್ಲ. ಒಂದು ವೇಳೆ ಮೂರ್ಖರು ಆದರೆ ಏನಾಗುತ್ತದೆ ಎಂದರೆ ಪ್ಲಾನಕ್ಕೆ ಬೆಲೆಯಿರುವುದಿಲ್ಲ. ಇವರಲ್ಲಿ ಕಪಟಿಗಳು ಯಾರು ಯೋಚನೆ ಮಾಡಬೇಕಾಗಿಲ್ಲವೆ ? ಒಂದು ಸರಿಯಾದ ಪ್ಲಾನ್ ತೋರಿಸಿದರೆ ಬೆಲೆ ಕೊಟ್ಟ ಹಾಗೆ ನಟನೆ ಮಾತ್ರ ಮಾಡುತ್ತಾರೆ. ಆದರೆ ಅಂಥಾದ್ದಕ್ಕೆ ನಿಜವಾಗಿಯೂ ಬೆಲೆ ಕೊಡು ವುದಿಲ್ಲ. ಇವರಿಗೆ flesh is too much for them. ಈ ಸಭೆಯಲ್ಲಿ ಒಂದು ಮಾತು ಹೇಳ ಬೇಕಾಗಿದೆ. ರಾಜ್ಯದ ಸುರಕ್ಷಿತತೆಯು ಹೊರಟು ಹೋಗಿದೆ. ಇದಕ್ಕೆ ಕಾರಣ ಹೇಳುತ್ತೇನೆ. ಎಷ್ಟೋ ಸಾರೆ ಮನುಷ್ಯನ ಮನಸ್ಸಿನಲ್ಲಿ ಒಂದು ಅಜ್ಞಾತ ಭಯವಿರುತ್ತದೆ. ಅದಕ್ಕೆ fear of unknown ಎಂದು ಹೇಳಬಹುದು. ಇದು ಎಲ್ಲರ ಮನಸ್ಸಿನಲ್ಲಿಯೂ ಇರುತ್ತದೆ. ಇದನ್ನು ಕೆಲವು ಕಡೆ ನೋಡಬಹುದು. ನಮ್ಮ ಮಂತ್ರಿಗಳು ಹಿಂದೇಟು ಕೊಡುವುದಕ್ಕೆ ಈ ಅಜ್ಞಾನ ಭಯವೇ ಕಾರಣ ಎಂದು ನನಗೆ ಅನಿಸುತ್ತದೆ. ಖಂಡಿತವಾಗಿ ನಮ್ಮ ಮಂತ್ರಿಗಳಲ್ಲಿ ಮೂರ್ಖರು ಯಾರೂ ಇಲ್ಲ.

Mr. SPEAKER.—Which part of the Budget the Hon'ble member is commenting upon ?

ಶ್ರೀ ವಿ. ಎಂ. ದೇವ್.—ಸ್ವಲ್ಪ ಸಾವಧಾನದಿಂದ ನಾನು ಹೇಳುವುದನ್ನು ಕೇಳಬೇಕು. ಈ ಬಜೆಟ್ ಏತಕ್ಕೋಸ್ಕರ ಮಾಡಿದ್ದಾರೆ ? ದೇಶ ಸರ್ವತೋಮುಖ ಅಭಿವೃದ್ಧಿಯಾಗಲಿ ಎಂದು ಇದನ್ನು ಮಾಡಿದ್ದಾರೆ. ನೇಣು ಹಾಕಿಕೊಳ್ಳಲು ಯಾರೂ ಮೂರ್ಖರಲ್ಲ. ಗ್ಯಾರಂಟೀಯಾಗಿ ಹೇಳುತ್ತೇನೆ. ಇವರು ಪೂರ್ತಿ ಕಪಟಿಗಳು ಅಲ್ಲ ಎಂದು ನನ್ನ ಮನಸ್ಸಿಗೆ ಅನಿಸುತ್ತದೆ. ಇವರು ಇಟ್ಟುಕೊಂಡಿರುವ ಧ್ಯೇಯ ಚೆನ್ನಾಗಿದೆ. ಆದರೆ ಎಲ್ಲರಿಗೆ ಇರುವ ಹಾಗೆ fear of unknown ಮೂಲಕ ದೇಶವನ್ನು ಈ ಮಟ್ಟಕ್ಕೆ ತಗೆದುಕೊಂಡು ಬಂದಿದ್ದಾರೆ. ಈ ಎರಡು ಕಾರಣಗಳಿಗೋಸ್ಕರ ಈ ರೀತಿಯಾಗಿದೆ. ಆದುದರಿಂದ ಮೂಲ ಭೂತವಾದ ಇದಕ್ಕೆ ಸರಿಯಾದ ವಿವರಣೆಯೊಂದಿಗೆ ಸಲಹೆ ಕೊಡೋಣ ಎಂದು ಅನಿಸುತ್ತದೆ. ಸರಿಯಾಗಿ ವಿವರಣೆ ಬರುತ್ತದೆ. ಇಲ್ಲವೋ ಅದು ಸಭಾಪತಿಗಳ ಮೇಲೆ ಅವಲಂಬಿಸಿದೆ. ಯಾಕೆಂದರೆ ಅವರನ್ನು ನೋಡಿ ಗಾಬರಿಯಾಗುತ್ತದೆ.

Mr. SPEAKER.—The Hon'ble Member had the fullest co-operation from me for free expression.

ಶ್ರೀ ವಿ. ಎಂ. ದೇವ್.—ನಮ್ಮ ದೇಶ ಮುಂದುವರಿಯಬೇಕಾದರೆ ಯಾವ ಯಾವ ಐಟೆಮ್ಸ್ ಇವೆ, ಲೆಕ್ಕಾಚಾರ ಏನು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ದೇಶ ಮುಂದುವರಿಯ ಬೇಕಾದರೆ ವ್ಯವಸಾಯ, ಕೈಗಾರಿಕೆ, ವಿದ್ಯುಚ್ಛಕ್ತಿ, ವಿದ್ಯೆ ಈ ಐಟೆಮ್ಸ್ ಮುಖ್ಯ. ಇದಕ್ಕೂ ಅತಿ ಮುಖ್ಯವಾಗಿ economics of agriculture ಗೊತ್ತಿರಬೇಕು. ಕೈಗಾರಿಕೆಗಳ ಲೆಕ್ಕಾಚಾರ ಗೊತ್ತಿರಬೇಕು. ತೆರಿಗೆ ಹಾಕುವ ಎಕನಾಮಿಕ್ಸ್ ತಿಳಿದುಕೊಂಡಿರಬೇಕು. ಅದರಂತೆ ವಿದ್ಯೆಯ ಲೆಕ್ಕಾಚಾರ ಸಹ ಗೊತ್ತಿರಬೇಕು. ಈ ನಾಲ್ಕು ದೃಷ್ಟಿಯಿಂದ ಪ್ರಯತ್ನ ಮಾಡಬೇಕಾಗುತ್ತದೆ. ಹಳೇ ಮೈಸೂರು ಸಂಸ್ಥಾನವನ್ನು ಮಹಾರಾಜರು ಬಿಟ್ಟು ಕೊಡುವಾಗ್ಗೆ 30 ಕೋಟಿ ರೂಪಾಯಿ ಶಿಲ್ಕು ಬಿಟ್ಟು ಕೊಟ್ಟಿದ್ದಾರೆ. ಆ ಹಣದ devaluation ಇಂದು ಮಾಡಿದರೆ ಅದು 300 ಕೋಟಿ ರೂಪಾಯಿ ಆಗುತ್ತದೆ. ಆ ಹಣ ಖರ್ಚಾಗಿ ಇಂದು ಇನ್ನೂ ಹೆಚ್ಚಿನ ಹೊರೆ ರಾಜ್ಯದ ಬೊಕ್ಕಸದ ಮೇಲೆ ಬಂದಿದೆ ಎಂಬುದು ಬಜೆಟ್ಟಿನಿಂದ ಗೊತ್ತಾಗುತ್ತದೆ. ಕೈಗಾರಿಕೆಗೆ ಜಾಸ್ತಿ ಮಾಡಲು ಹೋಗುತ್ತಾರೆ. ಸಕ್ಕರೆ ಕಾರ್ಖಾನೆ ಜಾಸ್ತಿ ಮಾಡಲು ಹೋಗುತ್ತಾರೆ. ಆದರೆ ಸಕ್ಕರೆಯು ದೊರೆಯುತ್ತಿಲ್ಲ. ಕಡಲೇಕಾಯಿ ಫ್ಯಾಕ್ಟರಿ ಮಾಡಲು ಹೋಗುತ್ತಾರೆ. ಹಾಲಿನ ಕೇಂದ್ರ ಪ್ರಾರಂಭ ಮಾಡಿದ್ದಾರೆ. ಆದರೆ ಹಾಲು ಇಲ್ಲ. ಈ ರೀತಿ ವ್ಯವಸ್ಥೆ ನಡೆದಿದೆ. ಈ ರೀತಿ ಮಾಡದೆ ಮುಖ್ಯ ವಾಗಿ ವ್ಯವಸಾಯದ ಕಡೆ ಗಮನ ಕೊಡಬೇಕಾದುದು ಅಗತ್ಯ. ನಾನು ತಿಳಿದುಕೊಂಡ ಮಟ್ಟಿಗೆ ವ್ಯವಸಾಯ ವಿಚಾರದಲ್ಲಿ ಒಂದು ಪ್ಲಾನ್ ಕೊಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ನನ್ನ ಪ್ಲಾನ್ ವಿಚಾರದ ಬಗ್ಗೆ ಅಲಕ್ಷ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನಾನು ಹೇಳಿದ ಈ ನಾಲ್ಕು ದೃಷ್ಟಿಯಿಂದ ಈ ಪ್ಲಾನ್ ಅರ್ಥಮಾಡಿ ಕೊಳ್ಳಬೇಕು. ಇದಲ್ಲದೆ ಆದಾಯದ ಮೂಲ

(ಶ್ರೀ ಪಿ. ಎಂ. ಶೇಖ್)

ಯಾವುದು ತಿಳಿದುಕೊಳ್ಳುವುದು ಅವಶ್ಯಕ, ಆದಾಯದ ಮೂಲ ಎರಡು ಇವೆ. ಮೊದಲನೆಯದಾಗಿ ತೆರಿಗೆ. ದೇಶದಲ್ಲಿ ಈಗಾಗಲೇ ತೆರಿಗೆ ಜಾಸ್ತಿಯಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಉಂಟಾಗಿರುವ ತೊಂದರೆ ಹೇಳಕೂಡದು. ಸೀಮೆಎಣ್ಣೆ ಬೆಲೆ ಜಾಸ್ತಿಯಾಗಿದೆ. ಇದನ್ನು ಕಡಿಮೆ ಮಾಡಬೇಕು. ಇನ್ನು ಎರಡನೆಯದಾಗಿ ಸಾರ್ವಜನಿಕ ಕೈಗಾರಿಕೆಗಳು; ಸಾರ್ವಜನಿಕ ಕೈಗಾರಿಕೆಯ ವಿಚಾರದಲ್ಲಿ ನಾಲ್ಕು ಮಾತು ಹೇಳಲಿಚ್ಛಿಸುತ್ತೇನೆ. ಎಲ್ಲ ದೇಶಗಳಲ್ಲಿ ಏನೇನು ಮಾಡಿದ್ದಾರೆ ಅದನ್ನು ಹೇಳುತ್ತೇನೆ. ಇಂಥ ತುರ್ತುಪರಿಸ್ಥಿತಿಯಲ್ಲಿ ಎಲ್ಲ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕಾದದು ಅಗತ್ಯ. ಫಾಸಿಸ್ಟ್ ಸರ್ಕಾರದವರು ಈ ಪರಿಸ್ಥಿತಿಯಲ್ಲಿ ಸಹಾಯ ಮಾಡಲು ಬಂದಿದ್ದಾರೆ. ಆದರೆ ನಾನು ಒಂದು ಸಲಹೆ ಕೊಡುತ್ತೇನೆ. ಈ ತುರ್ತು ಪರಿಸ್ಥಿತಿಯಲ್ಲಿ ದೇಶ ರಕ್ಷಣೆಗಾಗಿ ಹಣ ಬೇಕಾಗಿದೆ, ಹಣ ಕೊಡಬೇಕೆಂದು ಎಲ್ಲ ಇಂಡಸ್ಟ್ರಿಯಲಿಸ್ಟರಿಗೆ ಅಪೀಲ್ ಮಾಡಬೇಕು. ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ತಿಳಿಸಬೇಕು.

ಈ ತುರ್ತು ಪರಿಸ್ಥಿತಿ ದೃಷ್ಟಿಯಿಂದ ಪ್ರತಿಯೊಂದು ಗವರ್ನಮೆಂಟ್ ಕೈಗಾರಿಕೆಯಲ್ಲಿಯೂ ಮತ್ತು ಇಲಾಖೆಯಲ್ಲಿಯೂ ಆದಾಯ ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಪ್ರತಿದಿನ ಮೂರು ಸಾವಿರ ರೂಪಾಯಿ pilfer ಆಗುತ್ತಿದೆಯೆಂದು ಕನಬುದಾರರು, ಕೆಲಸಗಾರರು, ಮತ್ತಿತರರು ಹೇಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಪ್ರತಿಯೊಂದು ತಾಲ್ಲೂಕು ಮತ್ತು ಡಿಸ್ಟ್ರಿಕ್ಟಿನಲ್ಲಿ ಚೆಕಿಂಗ್ ಇನ್ಸ್‌ಪೆಕ್ಟರುಗಳ ಜೊತೆಗೆ, ಅನುಭವವಿರುವ ಬೇರೆ ನೌಕರರುಗಳನ್ನು ಐಡೆಂಟಿಟಿಕಾರ್ಡ್ ಕೊಟ್ಟು, ಅವರ ಕೆಲಸದ ಜೊತೆಗೆ ಚೆಕಿಂಗನ್ನು ಮಾಡಿ ಎಂದು ಹೇಳುವುದು ಒಳ್ಳೆಯದೆಂದು ಜನಗಳು ಮಾತನಾಡುತ್ತಿದ್ದಾರೆ. ಆದ್ದರಿಂದ ಈ ಒಂದು ಸಲಹೆಯನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ.

2-30 P.M.

Poultry farming ಅಭಿವೃದ್ಧಿ ಪಡಿಸುವುದಕ್ಕೆ ಬೇಕಾದಷ್ಟು ದುಡ್ಡು ಖರ್ಚು ಮಾಡಿ ಪ್ರಯತ್ನ ಮಾಡಿದರೂ, ಏನೂ ಉಪಯೋಗವಾಗಿಲ್ಲ. Foreign vested interests ಕಾಪಾಡುವುದಕ್ಕೆ ಈ ಫಾರ್ಮನ್ನು ಮೈಂಟೇನ್ ಮಾಡುತ್ತಿರುವ ಹಾಗೆ ಕಾಣುತ್ತಿದೆ. ದೇವರೇ ಕಾಪಾಡಬೇಕು ಈ ಯೋಜನೆಯನ್ನು;

ಸ್ಟೀಲ್ ಮತ್ತು ಇತರ ಫ್ಯಾಕ್ಟರಿಗಳಲ್ಲಿ ಮಾಡುತ್ತಾ ಇರುವುದು ಏನು ? ಈ ತುರ್ತು ಪರಿಸ್ಥಿತಿಯಲ್ಲಿ ಕೆಲಸ ಬಹಳ ವೇಗದಿಂದ ನಡೆಯಬೇಕಾಗಿತ್ತು. ಕೆಲವು ರಾಷ್ಟ್ರಗಳು ತಮ್ಮ ರಾಷ್ಟ್ರಕ್ಕೆ ಅಪಾಯ ಒದಗಿದಾಗ ದೊಡ್ಡ ಬದಲಾವಣೆಗಳನ್ನು ತೆಗೆದುಕೊಂಡು ಬಂದು, ಎಂತಹ ಪರಿಸ್ಥಿತಿಯನ್ನಾದರೂ ಎದುರಿಸುತ್ತೇವೆ. ಎಂಬ ಮನೋಭಾವ ಇಟ್ಟುಕೊಂಡಿರುತ್ತವೆ. ಅಂಥ ಮನೋಭಾವ ನಮ್ಮ ದೇಶದಲ್ಲಿಯೂ ಬರಬೇಕು. ಇದ್ದ ಕಡೆಯೋ ಎಂಬ ಮನೋಭಾವ ಪ್ರಗತಿಯನ್ನು ತರುವುದಿಲ್ಲ.

ಕೃಷ್ಣ ಗೋದಾವರಿ ನೀರಿನ ಹಂಚಿಕೆ ವಿವಾದದ ಬಗ್ಗೆ comprehensive ಆಗಿ, ಸಂಪೂರ್ಣವಾದ ಒಂದು ವಿವರ ಕೊಡಬೇಕು. ನಾವು ಈಗಲೇ ಆಸಕ್ತಿ ವಹಿಸದಿದ್ದರೆ ಮುಂದೆ ಎಡಹುವುದು ಖಂಡಿತ, ಎನ್ನುವುದು ಪ್ರಶ್ನೋತ್ತರ ಕಾಲದಲ್ಲಿ ಮತ್ತು ಇನ್ನಿತರ ಸಂದರ್ಭಗಳಲ್ಲಿ ನನಗೆ ವ್ಯಕ್ತಪಟ್ಟಿತು. ಇದರಲ್ಲಿ ಆಂಧ್ರದವರ ಆಸಕ್ತಿ ಬಹಳ ಜಾಸ್ತಿ ಇದೆ. ಕೇಂದ್ರದವರನ್ನು, ನಮಗೆ ನ್ಯಾಯವಾಗಿ ನೀರಿನಲ್ಲಿ ಎಷ್ಟು ಷೇರು ಬರಬೇಕೋ ಅಷ್ಟನ್ನು ಕೊಡಿಸಿ ಎಂದು ಕೇಳಿದರೂ, ನಮ್ಮ ಕೈಬಿಟ್ಟು ಬಿಟ್ಟಿದ್ದಾರೆ. ಆ ಕಡೆಯಲ್ಲಿ ಹಾಗಾಗಿದೆ. ಇನ್ನೊಂದು ಕಡೆಯಲ್ಲಿ ಇರುವ ದುಡ್ಡನ್ನು ನಾವು ಯದ್ವಾ ತದ್ವಾ ಖರ್ಚು ಮಾಡುತ್ತಿದ್ದೇವೆ. ಶರಾವತಿ ಯೋಜನೆಗೆ 40 ಕೋಟಿ ರೂಪಾಯಿ ಅಂದಾಜಾಗಿದ್ದುದು 100 ಕೋಟಿ ರೂಪಾಯಿಗೆ ಏರಿದೆ. ನಾನು ಮೊದಲೇ ಹೇಳಿದ ಹಾಗೆ ಆಂಧ್ರದವರು ನಮ್ಮ ಪಾಲು ಕೊಡುವುದಿಲ್ಲ; ಮದ್ರಾಸಿನವರು ತಮ್ಮ ಪ್ರಭಾವ ಬೀರಿ ಜಾಸ್ತಿ ಪಾಲು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ದುಡ್ಡು ಕೇಳಿದರೆ ದುಡ್ಡು ಇಲ್ಲದಿರುವಾಗ, ದುಡ್ಡು ಅನ್ಯಾಯವಾಗುತ್ತಿದೆ. ಈಗ ನಮ್ಮಲ್ಲಿರುವ ದುಡ್ಡಿನಲ್ಲಿಯೇ ಒಂದಕ್ಕೆ ನಾಲ್ಕರಷ್ಟು ಹೆಚ್ಚು ಸಾಧನೆ ಮಾಡಿದ ದೇಶಗಳಿವೆ. ಇಷ್ಟೇ ಸಂಪನ್ಮೂಲಗಳಲ್ಲಿ ಬೇರೆ ದೇಶಗಳಲ್ಲಿ ಮಹತ್ತರ ಸಾಧನೆ ಮಾಡಿದ್ದಾರೆಂದು ನನಗೆ ಇಂಜನಿಯರುಗಳು ಹೇಳಿದ್ದಾರೆ. ಆದ್ದರಿಂದ ನಾವು ಎಷ್ಟು ಸಾಧನೆ ಮಾಡಬೇಕಾಗಿತ್ತು, ಅಷ್ಟು ಸಾಧನೆ ಮಾಡಿದ್ದೇವೆಯೇ, ಏಕೆ ಮಾಡಿಲ್ಲ. ಹೇಗೆ ಮಾಡಬಹುದು ಎಂಬುದರ ಬಗ್ಗೆ ಸರ್ಕಾರದವರು ಆಳವಾಗಿ ಆಲೋಚನೆ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಒಂದು ಕೆರೆ, ಕಟ್ಟೆ, ಅಣೆಕಟ್ಟು ಕಟ್ಟಬೇಕೆಂದರೆ, ಸಿಮೆಂಟ್ ಇರುವುದು ನಿಮ್ಮ ಹತ್ತಿರ, ಕಬ್ಬಿಣ ಇರುವುದು ನಿಮ್ಮ ಹತ್ತಿರ, ಎಸ್ಟಿಮೇಟ್ಸ್ ಎಲ್ಲಾ ಇರುವುದು ನಿಮ್ಮ ಹತ್ತಿರ. ಆದರೆ

ಕಂಟ್ರಾಕ್ಟರುಗಳ ಹತ್ತಿರ ಓಡಿ ಹೋಗುತ್ತೀರ; ಓಡಿ ಹೋದರೆ ಏನಾಗುತ್ತದೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿದ ಹಾಗೆ, ಎಸ್ಟಿಮೇಟು ನೂರು ರೂಪಾಯಿ ಇದ್ದರೆ, 120-170 ರೂಪಾಯಿವರೆಗೂ ಕೊಡುತ್ತಾರೆ. ನನ್ನ ಸ್ವಂತ ಅನುಭವದಿಂದ ಮಾತನಾಡುತ್ತಾ ಇದ್ದೇನೆ. ನೀವು ಹೇಗೆ ಮಾಡಬೇಕೆಂದರೆ, local engineer ಯಾವ ನಿರುತ್ತಾನೆಯೋ ಆ ಮನುಷ್ಯನಿಗೆ ಅಷ್ಟೂ ಜವಾಬ್ದಾರಿ ಕೊಡಬೇಕಾಗುತ್ತದೆ. ಅತ ಎಲ್ಲಾ ಕಂಟ್ರಾಕ್ಟರಿಗೇ ಕೊಡಲಿ, ಅಥವ ಪೀಸ್‌ವರ್ಕ್ ಆಗಿ ಮಾಡಿಸಲಿ, ಅಥವ ಡಿಪಾರ್ಟ್‌ಮೆಂಟಲ್ಲಾಗಿಯೇ ಮಾಡಲಿ full authority ಅವನಿಗೆ ಕೊಡಬೇಕು. ಆವಾಗ ಒಬ್ಬರ ability ಜಜ್ ಮಾಡುತ್ತೇವೆ. ಬಹಳ ಕಡಿಮೆ ಹಣದಲ್ಲಿ, ಯಾರು ಕೊಟ್ಟ ಹಣದಲ್ಲಿಯೇ ಬಹಳ ಹೆಚ್ಚಿನ ಕೆಲಸವನ್ನು ಬಹಳ ಕಡಿಮೆ ಟೈಮಿನಲ್ಲಿ ಮಾಡುತ್ತಾರೆಯೋ, ಅದರ ಮೇಲೆ ನಿಮ್ಮ ಹಣೇ ಬರಹ ಬರೆಯುತ್ತೇವೆ. (ನಗು).

Mr SPEAKER.—Please use good language.

Sri V. M. DEO.—Our future is dependent on that, Sir. It is a good language. ಡಯಲೆಕ್ಟ್ಸ್ ಬೇರೆ ಇರುವುದರಿಂದ, ತಮ್ಮ ಕಡೆ ಇದು ಬೇರೆ ಅಭಿಪ್ರಾಯ ಕೊಡಬಹುದು.

Mr. SPEAKER.—Please continue the speech and conclude early.

ಶ್ರೀ ವಿ. ಎಂ. ದೇವ್.—Stainless steelಗೆ permission ಕೊಡುವುದರಲ್ಲಿ ವ್ಯತ್ಯಾಸವಿದೆ. Industries Ministerಗೆ ಹೇಳಿದರೂ ಪ್ರಯೋಜನವಾಗುವುದಿಲ್ಲ; ಆ ವಿಚಾರ ಬಿಟ್ಟು ಬಿಡುತ್ತೇನೆ.

ತುಮಕೂರಿನ ಡಿ. ಇ. ಜ. ಟ್ರಾನ್ಸ್‌ಫರ್ ಮಾಡಿದ್ದಾರೆ. ಅದರಲ್ಲೂ ಹೇಳಬೇಕಾಗಿತ್ತು. ಅದರೂ ಅಷ್ಟಕ್ಕೇ ಬಿಡುತ್ತೇನೆ.

ನಿಮ್ಮನ್ನು ನೋಡಿ ಏಕೆ ಇಷ್ಟು ನಗುತ್ತಾ ಇದ್ದಾರೆ? ನಿಮ್ಮ ಹಾಗೆ ನಾನೂ ನಗುಪಾಟ್ಲಿಗೆ ತುತ್ತಾಗಿದ್ದೆ. ಒಂದು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಯಾಗಿದ್ದೆ. ಇದ್ದಕ್ಕಿದ್ದ ಹಾಗೆ ಬಿಟ್ಟು ಹಳ್ಳಿಗೆ ಬಂದು ಬಿಟ್ಟೆ. ಪಾಪರ್ ಆಗಿ ನನ್ನ ತಾಲ್ಲೂಕಿಗೆ ಹೋದೆ. ನಮ್ಮ ತಾಯಿ ಇದ್ದರು. 25 ಆಳುಗಳನ್ನು ಇಟ್ಟುಕೊಂಡು ಜಮೀನು ಮಾಡುವುದರಲ್ಲಿ ತೊಡಗಿದೆ. ಪ್ರತಿಯೊಬ್ಬ ಆಳಿಗೂ ಒಂದು ರೂಪಾಯಿ ಕೂಲಿ ಕೊಡುತ್ತಾ ಇದ್ದೆ; ಮನಸ್ಸಿನಲ್ಲಿ ಈ ಸಂಬಳ ಜಾಸ್ತಿ ಎಂದು ಕಾಣುತ್ತಿತ್ತು, ಆದರೆ ಇನ್ನೊಬ್ಬರಿಗೆ ಹೇಳುವಹಾಗಿಲ್ಲ. ಗಾಭರಿಯಾಗುತ್ತಿದ್ದರೂ ಬೇರೆಯವರನ್ನು ಕೇಳಿದರೆ ಏನೆಂದು ಕೊಳ್ಳುತ್ತಾರೋ ಎಂಬ ಸಂಕೋಚ. ಆಮೇಲೆ ಬರಬರುತ್ತಾ ನಾನೇ ಕೆಲಸ ಮಾಡಿ ನನ್ನ ಜೀವನ ಹೊರೆಯಬೇಕಾಯಿತು. ಎಂಥ ಪರಿಸ್ಥಿತಿ ಬಂದಿತು ಎಂದರೆ ಇಲ್ಲ ಮುಳುಗಬೇಕು, ಇಲ್ಲ ಈಜಬೇಕು. ಆವಾಗ ನನ್ನ ಹೊಟ್ಟೆಗೆ, ನನ್ನ ಬುದ್ಧಿ ಬಲ ಮತ್ತು ನನ್ನ ತಲೆ ಬಲ ಇವೆರಡನ್ನೂ ಸೇರಿಸಿದೆ.

Mr. SPEAKER.—Please deal with the Budget.

Sri V. M DEO.—Sir, what is wrong with you is that you are very intelligent (*laughter*). You got first class in all examinations and all that. You are also very handsome (renewed laughter). With the result, in life you have got easy victories and you are ambitious. You are spoiled in spite of yourself. It is not your fault. (More laughter.)

ನಾನು ಏಕೆ ಹೇಳುತ್ತಿದ್ದೇನೆಂದರೆ, ಚೆನ್ನಾಗಿ ಓದಿ ನನ್ನ ಬುದ್ಧಿ ಶಕ್ತಿಯನ್ನು ಬೆಳಸಿಕೊಂಡೆ. ಈ ದಿವಸ ವ್ಯವಸಾಯ ಕ್ಷೇತ್ರದಲ್ಲಿಯೇ ಆಗಲಿ, ಪ್ಲಾನಿಂಗ್ ಕ್ಷೇತ್ರದಲ್ಲಿಯೇ ಆಗಲಿ, ಇಡೀ ಇಂಡಿಯಾ ದೇಶದಲ್ಲಿ ತಜ್ಞ ಎಂಬ ಒಂದು ಹೆಸರುಗಳಿಸಿದ್ದೇನೆ. ವ್ಯವಸಾಯ ಕ್ಷೇತ್ರದಲ್ಲಿ ಎರಡು ಮುಖ್ಯವಾದ ರಿಸರ್ಚುಗಳನ್ನು ಮಾಡಿದ್ದೇನೆ. ನಿಮ್ಮ ಗತಿ ಏನಾಗಿದೆಯೆಂದರೆ, ಸಂಬಳ ತೆಗೆದುಕೊಂಡು ತಿಂದು, ತಿಂದು, ತಿಂದು, ನಿಮಗೆ ಕೆಲಸ ಮಾಡುವುದೇ ಗೊತ್ತಿಲ್ಲ; ಬುದ್ಧಿ ಹಾಳಾಗಿ ಹೋಗಿದೆ. ನೀವು ಹಾಳಾದರೆ ಪರವಾಗಿಲ್ಲ. ದೇಶ ಹಾಳು ಮಾಡುತ್ತಾ ಇದ್ದೀರಿ. ಇದು ಏಕೆ ಹೀಗಾಗುತ್ತಿದೆಯೆನ್ನುವುದು ಮುಖ್ಯ ಪ್ರಶ್ನೆ; ಇದನ್ನು ಯೋಚನೆ ಮಾಡಬೇಕಾಗಿದೆ. ವ್ಯಕ್ತಿ ದೋಷ ರಾಷ್ಟ್ರದ ಮೇಲೆ ಬೀಳುತ್ತದೆ; ರಾಷ್ಟ್ರದ ದೋಷ ವ್ಯಕ್ತಿ ಮೇಲೆ ಬೀಳುತ್ತದೆ. ಆ ದೋಷಗಳು ಕೆಲಸದಲ್ಲಿ ಇರುತ್ತವೆ. ಆ ದೋಷದ ಪ್ರಭಾವ ನಮ್ಮ ಮೇಲೆ ಆಗುತ್ತದೆ.

ಇನ್ನು ಅವರು ಹೇಳಿದರು 'ಥೂ, ಇವರ ಮನೆ ಹಾಳಾಗಿಹೋಗ, ಎಲ್ಲಾ ಇವರಿಂದಲೇ ಆಗುತ್ತಿದೆ' ಎಂದು (ನಗು!) ಇದರ ಮೂಲ ಎಲ್ಲಿ? ನೀವೆ, ನಿಮ್ಮ ಕೆಲಸದಿಂದ ತಾನೆ! ನಾನು

(ಶ್ರೀ ವಿ. ಎಂ. ದೇವ್)

ಯೋಚನೆ ಮಾಡುತ್ತಾ ಕುಳಿತೆ. ನಮ್ಮ ತಂದೆಗೆ ೪-೫ ಎಕರೆ ಮಾತ್ರ ಇತ್ತು. ಅರ್ಧ ಎಕರೆ ತೋಟ ಇತ್ತು, ಯಾವನಾದರೂ ಕೆಲಸಕ್ಕೆ ಬರುತ್ತೇನೆ ಎಂದರೆ ಅವರು 'ಇಲ್ಲ' ಎಂದು ಅನ್ನುತ್ತಾ ಇರಲಿಲ್ಲ. ಈಗ ಯೋಚನೆ ಮಾಡುತ್ತೇನೆ, ಅದಕ್ಕೆ ಮಹಾನುಭಾವರು ಹೇಳಿರುವುದು there is something like surplus labour' ಅಂತ. ಆ ರೀತಿ ಯಾರು ಕೆಲಸಕ್ಕೆ ಬಂದರೂ ತೆಗೆದುಕೊಳ್ಳುತ್ತಾ ಇದ್ದುದರಿಂದ ನಮ್ಮ ಮನೆತನ ಉಳಿಯಿತು. ಇಲ್ಲದೇ ಇದ್ದರೆ ಉಳಿಯುತ್ತ ಇತ್ತೇ? ಇದನ್ನು ಕಳೆ ಕಳೆಯಿಂದ ಬಹಳ serious matter ಅಂತ ಹೇಳುತ್ತಾ ಇದ್ದೇನೆ.

ಈ ದಿನ ನಿಜವಾಗಿಯೂ, ದುಡ್ಡು ಯಾವಾಗ ಬರುತ್ತದೆ? ಉತ್ಪಾದನೆಗೆ ತೊಡಗಿಸಿದಾಗ ದುಡ್ಡು ಬರುತ್ತದೆಯೇ ಹೊರತು ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟರೆ ಆಗುವುದಿಲ್ಲ. ಅಥವಾ ನಮಗೆಲ್ಲಾ ಹಂಚಿದರೆ ಒಂದು ಸಿಗರೇಟ್ ಜಾಸ್ತಿ ಕೊಡಬಹುದು. ಆಗ ಒಂದು ಸಿಗರೇಟ್ ತೆಗೆದುಕೆಳ್ಳಬೇಕಾದರೆ ೫೦ ರೂಪಾಯಿ ಆಗುತ್ತದೆ. ಆದ್ದರಿಂದ ದುಡ್ಡು ಎಂದರೆ ಸರಿಯಾಗಿ ಯೋಚನೆ ಮಾಡಬೇಕು. ಕೈ ಕೆಲಸ ಅದು, ಆದ್ದರಿಂದ ಡಿಪಾರ್ಟ್‌ಮೆಂಟಲ್ ಆಗಿ ನೀವೆ ಮಾಡಿಸಿ. ಪೀಸ್ ವರ್ಕ್ ಬೇಸಿಸ್ ಮೇಲೆ ಮಾಡುವುದಕ್ಕೆ ನಿಮಗೆ ಹೆದರಿಕೆಯಾಗುತ್ತದೆ. ಏಕೆಂದರೆ ನಿಮಗೆ ಯಾವಾಗಲೂ ಸಂಬಳ ತೆಗೆದುಕೊಂಡು ಅಭ್ಯಾಸ. ನೀವು ಸಂಬಳ ತೆಗೆದುಕೊಂಡು ತಿನ್ನುವವರೇ ಹೊರತು ಕಷ್ಟಮಾಡಿ ಕೆಲಸಮಾಡಿದವರಲ್ಲ. ಇದುವರೆಗೂ ೧೫-೧೬ ವರ್ಷದಿಂದ ಏನೊಂದು ಮನೋಭಾವ ನಿಮ್ಮಲ್ಲಿ ಹುಟ್ಟಿದೆ ಎಂದರೆ ನಿಮಗೆ ನೀವೆ ಕುತ್ತು ಆಗಿದ್ದೀರಿ, ದೇಶಕ್ಕೂ ಕುತ್ತು ಆಗಿದ್ದೀರಿ. ಈ ದೃಷ್ಟಿಯಿಂದ ನೀವು ಈಗಲಾದರೂ ಪಟ್ಟಾಗಿ ಕುಳಿತುಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—Two minutes more.

ಶ್ರೀ ವಿ. ಎಂ. ದೇವ್.—ಒಬ್ಬ ಮನುಷ್ಯನನ್ನು ಮಾಡಬೇಕಾದರೆ ಕಿವಿ, ಕಣ್ಣು, ಮೂಗು ಇರಬೇಕು. ನಿಮ್ಮ ಕಡೆ ತಿರುಗಿಕೊಂಡು ಮಾತನಾಡುತ್ತಾ ಇದ್ದೇನೆ. ಮಂತ್ರ ಮಾಡುವವರು ಏನು ಮಾಡುತ್ತಾರೆ? ಕಣ್ಣು ಇರುವಕಡೆ ಕಿವಿ ಇಡುತ್ತಾರೆ ಕೇಳಿದರೆ ಸಾಕು ಅಂತ. The meaning of my life is agriculture and I have not started on that point. ಆ ವಿಷಯ ಮಾತನಾಡಬೇಕಾದರೆ ಅದಕ್ಕೆ inter related ಆಗಿರತಕ್ಕ ಅಂಶ ಹೇಳಿದೆ ಅಷ್ಟೆ.

Mr. SPEAKER.—If that is all, I will give the Hon'ble Member a chance afterwards to speak the subject of Agriculture. Please conclude in two minutes.

ಶ್ರೀ ವಿ. ಎಂ. ದೇವ್.—ಒಟ್ಟಿನಲ್ಲಿ ನಮ್ಮ ದೇಶ ಹೀಗೆ ಆಗಬೇಕಾಗಿದ್ದರೆ, ಸೆಂಟರ್‌ನವರು ನಮಗೆ ಏಕೆ ದುಡ್ಡು ಕೊಡುವುದಿಲ್ಲ ಎಂಬುದು ನಿಮಗೆ ಗೊತ್ತೇನು? ನಿಮ್ಮಲ್ಲಿ ಪ್ರತಿಭೆ ಇಲ್ಲ, ಪ್ರತಿಭೆ ಇದ್ದಿದ್ದರೆ out of the congress ಇರುತ್ತಾ ಇದ್ದಿರಿ.

Mr. SPEAKER.—If that is the kind of argument the Assembly members is advancing, how can I give him 5 minutes? I have committed myself to give him a chance to speak on the subject of 'Agriculture' again.

ಶ್ರೀ ವಿ. ಎಂ. ದೇವ್.—ಒಂದು ಬೇಸ್‌ಗೆ ತೆಗೆದುಕೊಂಡು ಬರೋಣ ಎಂದರೆ ಅವಕಾಶ ಕೊಡುವುದಿಲ್ಲ, ಹೋಗಲಿ ನಾನು ಸದ್ಯಕ್ಕೆ ಹಾಯಾಗಿ ಕುಳಿತುಕೊಳ್ಳುತ್ತೇನೆ. (*The member resumed his seat*)

Mr. SPEAKER.—Sri J. P. Serwesh.

(Sri V. M. Deo again commenced to speek.) (*Laughter*)

ಶ್ರೀ ವಿ. ಎಂ. ದೇವ್.—ನೀವೇನು ತಿಳಿದುಕೊಂಡಿರಿ ಎಂದರೆ It is a good joke ಅಂತ ತಿಳಿದುಕೊಂಡಿರಿ. ಇಲ್ಲ ಸ್ವಾಮಿ. ನಮ್ಮ ದೇಶ ಮುಂದುವರಿಯಬೇಕಾದರೆ, ಬೇಸಿಕ್ ಇಂಡಸ್ಟ್ರೀಸ್, ಕೀ ಇಂಡಸ್ಟ್ರೀಸ್, ಅಗ್ರಿಕಲ್ಚರ್ ಮತ್ತು ವಿದ್ಯುಚ್ಛಕ್ತಿ ಇವು ಸ್ವಾತಂತ್ರ ಬರುವುದಕ್ಕೆ ಮುಂಚೆ ಎಷ್ಟಿತ್ತು! ಈಗ ಎಷ್ಟಿದೆ? Take off ಅಂತ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಬಂದಿದೆ. ಅದು ಎಷ್ಟರವರೆಗೂ ಆಗುತ್ತದೆ? ಇಂಡಿಯಾ ದೇಶದ ಇತರ ಭಾಗಗಳಂತೆ ಇಂಡಸ್ಟ್ರಿಯಲೈಸ್ ಮಾಡುವುದಕ್ಕೆ ಎಂದೋ ಶುರು ಆಗಬೇಕಿತ್ತು, ಅದು ಏಕೆ ಆಗಲಿಲ್ಲ? ನಿಮ್ಮಲ್ಲಿ ಪ್ರತಿಭೆಗೆ ಕೊರತೆ ಇದ್ದಿದ್ದರೆ.........

If you cannot get the inspiration from within, can you not take it from outside–atleast from other members of the Opposition ?

ಇದರಲ್ಲಿ ಒಂದು ಪ್ರಶ್ನೆ ಇದೆ. ಕೇಂದ್ರದವರ ಹತ್ತಿರ ಹೋಗಿ ನಮ್ಮ ಭಾಗದ್ದು ಕೊಡಿ ಎಂದರೆ ಅವರು ಏನು ಹೇಳುತ್ತಾರೆ ? ದೊಡ್ಡ ದೊಡ್ಡ ನೀರಾವರೀ ವಿದ್ಯುಚ್ಛಕ್ತಿ ಪ್ರಾಜೆಕ್ಟುಗಳು ಆಗುತ್ತಾ ಇವೆ ಸುಮ್ಮನೆ ಇರಿ ಎಂದು ಹೇಳುತ್ತಾರೆ. ನಾವು ಬೇಸಿಕ್ ಇಂಡಸ್ಟ್ರೀಸ್ ಪ್ರಾರಂಭ ಮಾಡಿದ್ದೇವೆ. ಬೇಕಾದಷ್ಟು ಜನ ಇಂಜಿನಿಯರುಗಳು ಇದ್ದಾರೆ. ಆ ದೃಷ್ಟಿಯಿಂದ 'take off position' ಬಹಳ ಕಡಿಮೆ ಎಂದು ಹೇಳಬೇಕಾಗಿದೆ. ಖರ್ಚು ಬಹಳ ಬೇಗ ಆಗುತ್ತದೆ. ಅದನ್ನು ಉಳಿಸಿಕೊಳ್ಳಬೇಕಾದರೆ ಡಿಪಾರ್ಟ್‌ಮೆಂಟಲ್ ಆಗಿ ಮಾಡಿ. ಬರಬರುತ್ತಾ ಪ್ಲಾನ್ ಕೋಟಿ ಜಾಸ್ತಿಯಗುತ್ತಾ ಇರುವುದರಿಂದ ತೆಗೆದುಕೊಂಡು ಬಂದ ಮಷಿನರಿ ಪ್ಲಾನ್ ಮುಗಿದ ಮೇಲೆ ಹಾಳಾಗುವುದಿಲ್ಲ. ಮುಂದೆ ಒಳ್ಳೆಯದಾಗುತ್ತದೆ. ಆ ದೃಷ್ಟಿಯಿಂದ ಕೆಲಸ ಮಾಡಬೇಕು.

ಚೀಫ್ ಮಿನಿಸ್ಟರು ಹೇಳುತ್ತರಲ್ಲಾ. ನಾವು ಮಾಡುತ್ತೇವೆ ಎಂದು. ಆ ಕಡೆಯಿಂದ ದುಡ್ಡು ಬರುವುದಿಲ್ಲ. ಕೇಂದ್ರದವರು ಕೊಟ್ಟರೂ ಕೂಡ ಇವತ್ತು ನಮ್ಮ ಬಡ್ಜೆಟ್ ನಲ್ಲಿ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಂಬುದು ನಿಮಗೂ ಗೋತ್ತು, ನಮಗೂ ಗೊತ್ತು. ಕರಪ್ಷನ್‌ಗೇ ಇದ್ದಬದ್ದ ದುಡ್ಡೆಲ್ಲಾ ಹೋಗುತ್ತದೆ. ಹೀಗೆ ಏಕೆ ಆಗುತ್ತದೆ ಎಂದರೆ ನೀವು, ನಿಮ್ಮ ಬುದ್ಧಿ ಬಲ, ತೋಳುಬಲ ಒಂದನೆಯದು, ಎರಡನೆಯದು ರಚನಾತ್ಮಕವಾಗಿ ರಾಷ್ಟ್ರ ಕಟ್ಟುವಂಥ ಕೆಲಸದಲ್ಲಿ ಅನುಭವದಿಂದ ಕೆಲಸ ಮಾಡುತ್ತಿಲ್ಲ. ಆ ದೃಷ್ಟಿಯಿಂದ ಹೀಗಾಗಿದೆಯೇ ಹೊರತು ಇನ್ನೇನೂ ಅಲ್ಲ.

ಕೊನೆಯದಾಗಿ ಒಂದೇ ಒಂದು ಅಂಶವನ್ನು ಹೇಳಿ ಕುಳಿತುಕೊಳ್ಳುತ್ತೇನೆ. ಏನೆಂದರೆ ಇಷ್ಟು ಯೋಜನೆ ಮಾಡಿ, ಒಂದೊಂದು ಯೋಜನೆ ಮಾಡಿದರೂ, ಪ್ರತಿಯೊಂದು ಯೋಜನೆಯ ಕೆಲಸ ಮಾಡುವಾಗಲೂ ಎರಡು ಮುಖ ಇರುತ್ತದೆ. ಒಂದು ತಾಂತ್ರಿಕ—technical feasibility—ಇನ್ನೊಂದು policy orientation. ಈ ಎರಡು ಹೇಗೆ ಸಮ್ಮಿಲನವಾಗಬೇಕು ಎನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನೋಡಿ ಇಷ್ಟು ದುಡ್ಡು ಖರ್ಚುಮಾಡುತ್ತೀರಲ್ಲಾ ಏನಾಗುತ್ತದೆ? ರೈತರಿಗೆ ಬಾವಿ ತೆಗೆಸಿಕೊಡುತ್ತೇವೆ ಎನ್ನುತ್ತೀರಿ ; ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಸಹಾಯ ಮಾಡುತ್ತೇವೆ ಎನ್ನುತ್ತೀರಿ. ನೀರಾವರೀ ಯೋಜನೆಗಳನ್ನು ಮಾಡುತ್ತೇವೆ ಎನ್ನುತ್ತೀರಿ. ಎಲ್ಲಾ ಸರಿ. ನಿಮ್ಮ ವರ್ಗದವರಿಗೆ ಸ್ವಲ್ಪ ಅನುಕೂಲಸ್ಥರು ದುಡ್ಡು ಕೊಡಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಅವರಿಗೆ ದುಡ್ಡು ಕೊಡುತ್ತೀರಿ. ಅವನು ಏನು ಮಾಡುತ್ತಾನೆ? ಅದನ್ನು ಸಾಹುಕಾರರಿಗೆ ಕೊಡುತ್ತಾನೆ. ಅವರು ಬಾವಿ ಕಟ್ಟಿಸಿ ಕೊಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಈ ಹಣ ತೆಗೆದುಕೊಂಡವರು ಏನೂ ಮಾಡದೇ ಅವರೇ ಸ್ವಲ್ಪ ಬಲವಾದದ್ದು ಇದೆ. ಇದು ಬಹಳ ಚೆನ್ನಾಗಿ ಎಲ್ಲಿ ಕಾಣುತ್ತದೆ ಎಂದರೆ ಡಾಕ್ಟರ್ ಅಂಬೇಡ್ಕರ್‌ರವರಿಗೆ ಪುರಸ್ಕಾರ ಕೊಟ್ಟರು. ಅವರು ಅದು ಮಾಡಬೇಕು, ಇದು ಮಾಡಬೇಕು ಅಂತ ಹೇಳುತ್ತ ಇದ್ದು ಕೊನೆಗೆ ಬುದ್ಧರಾದರು. ಅದು ರಾಚಯ್ಯನವರಿಗೆ ಜ್ಞಾನೋದಯವಾಗಬೇಕು ಒಂದೆರಡು ಪ್ಲಾನ್‌ಗಳಿಗಾದರೂ ಅವರು ಪುರಸ್ಕಾರ ಕೊಡಬೇಕು ಇಲ್ಲದೇ ಇದ್ದರೆ ವಿಧಾನ ಸೌಧದ 2 ಅಥವಾ 3 ನೇ ಮಹಡಿಯಿಂದ ಕೆಳಕ್ಕೆ ಬೀಳುತ್ತಾರೆ. ಏಕೆ ಹೇಳುತ್ತೇನೆ ಎಂದರೆ ನಿಮ್ಮ ಪ್ಲಾನ್‌ನಲ್ಲಿ ಸಾವುಕಾರರು, ಬಡವರು ಅಂತ ಇರುವುದಿಲ್ಲ. ಸಾಹುಕಾರರನ್ನು ಜಾಸ್ತಿ ಮಾಡಿ ಬಡವರನ್ನು ಯಾವ ಸ್ಥಿತಿಗೆ ತಂದಿದ್ದೀರಿ ಎಂದರೆ ಅವರು ಹೊಟ್ಟೆಗೆ ಇಲ್ಲದೆ ಧರೆಗೆ ಬೀಳುತ್ತ ಇದ್ದಾರೆ. ಅ ದೃಷ್ಟಿಯಿಂದ ಹೇಳುತ್ತ ಇದ್ದೇನೆ. ಯಾವ ಪ್ಲಾನ್ ಮಾಡಬೇಕಾದರೂ ಕೂಡ technical feasibility ಇದೆಯೇ ಎಂಬುದು ಒಂದು. ಇನ್ನೊಂದು ಪಾಲ ಸಿ ರೀಒರಿಯೆಂಟೇಷನ್ ಈ ವಿಚಾರ ಸರ್ಕಾರದವರಿಗೆ ಗೊತ್ತಿಲ್ಲದೆ ಹೋದರೆ ಇನ್ನಾರಲ್ಲಾದರೂ ಹೋಗಿ ಅವರು ತಿಳಿದುಕೊಳ್ಳಬೇಕು. ಎಲ್ಲಿಯವರಿಗೆ ಈ ಬುದ್ಧಿ ಹುಟ್ಟುವುದಿಲ್ಲವೊ. ಅಲ್ಲಿಯವರಿಗೆ ಅವರಿಗೆ ಈ ಆಡಳಿತ ನಡೆಸತಕ್ಕ ಅರ್ಹತೆ ಬರುವುದಿಲ್ಲ. ಇವರು ನಡೆಸತಕ್ಕ ವಿತರಣೆ ನೋಡಿದರೆ ನಮ್ಮ ಹಳ್ಳಿಯಲ್ಲಿ ಆಡತಕ್ಕ ಆ ಕಾಳಿದಾಸನ ನಾಟಕದಲ್ಲಿ ಮದಕ್ರಪ್ಪನ ಪಾತ್ರ ಜ್ಞಾಪಕಕ್ಕೆ ಬರುತ್ತದೆ. ಈ ಸಭೆಯಲ್ಲಿ ನಾವೆಲ್ಲರೂ ಎಷ್ಟೋ ಸಲಹೆಗಳನ್ನು ಕೊಡುತ್ತೇವೆ. ಪ್ಲಾನುಗಳನ್ನು ಕೊಡುತ್ತೇವೆ. ಈ ಮಂತ್ರಿಗಳಿಗೆ ಅಧ್ಯಕ್ಷರಾದರೂ ಸ್ವಲ್ಪ ಇವರು ಮುಂದೆ ಸಾಗುವಂತೆ ತಿಳುವಳಿಕೆ ಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†**Sri J. P. SARWESH** (Serum).—Sir, supporting the Budget, first of all I wish to congratulate the Government, particularly the Hon. Chief Minister for selecting a veteran Congress leader of the State Sri R. Chennigaramaiah as Chairman of the Public Service Commission.

Mr. SPEAKER.—How does it come under the Budget ?

Sri J. P. SARWESH.—It is a policy matter, Sir. And also he was a member of this House and he is a member belonging to the Scheduled Caste. Sir, I must say that he has been selected not merely because he belongs to Scheduled Caste but also because of his efficiency and ability and because he deserves it by merit. I hope that the Government will consider also the question of selecting a person belonging to Scheduled Caste to fill the High Court bench.

Sir, regarding the I.A.S. and I.P.S. raising the retirement age to 58, I beg to say, Sir, that Government should not discriminate. This kind of enhancement of retiring age should be extended to all cadres—non-gazetted, gazetted, as well as engineers, doctors and even to the fourth class servants. This kind of extension should be given to them all, because now we are in an emergency and we cannot afford to lose the services of experienced officers and we have to continue these officers in service. I hope the Government will take into consideration this point and enhance the retirement age in the case of personnel of all cadres.

Sir, I wish to say a few words regarding S.C. and backward classes. The maximum age for entry into service in the case of these classes is 30 years and in the case of forward class people it is 25 years. The retirement age is kept at 55 for both. This means the S.C. people will serve only for 25 years whereas the forward class people will have the opportunity of serving for full 30 years. The S.C. who serve five years less, will proportionately get lesser benefits on retirement. This point will have to be taken into consideration and I request the Government to kindly enhance the age of retirement up to 60 or 65 in such cases. Otherwise, the concession that is shown at the time of recruitment will lose its significance and will prove a handicap by the time he reaches his superannuation. I therefore request that the same concession should be shown to these people even when they retire so that they may also get proportionately equal benefits of retirement.

Regarding the minimum wages to agricultural labourers, I regret to say that the wages given to agricultural labourers is very less; in some parts they get 12 annas and in some parts they get Re. 1/-. Particularly in dry areas the farmers take only one crop and in such areas the agricultural labourers with great difficulty earn Rs. 60 and his wife earns something like Rs. 30 per year. You can best imagine how a family of five can manage to live on a bare Rs. 90/- earned for the whole year. How they should pull on all the 365 days in the year. It is indeed very difficult for them to maintain their family with that meagre earnings. There is no possibility for the farmers of the dry areas to give enhanced wages because it depends upon the crop harvested and the crops depend upon the uncertain monsoons. What I suggest to the Government is that the lands that are reserved for cattle grazing may be given to these people for cultivation. It often happens that the lands which are reserved for grazing hardly contain grass and the cattle being sensitive to this, resort to other places for grazing. I therefore, suggest that the Government should take away these gomal lands and distribute them among the harijans and other landless labourers by forming co-operative

societies. In each village they may form one such co-operative society where the farmers will collectively work.

Sir, I should like to say a few words about Gulbarga division. Gulburga is a very backward area. We have no roads, no communications. We cannot say that Gulbarga has any communications at all. There are no major projects, no medium projects in Gulbarga. It is therefore necessary for Government to double funds to that Division and Government should try to bring up that Gulbarga Division to the level of the other districts. If not, there is no possibility of Gulbarga of improving at all. There are many dispensaries in taluks and villages but there are no doctors. The doctors who are posted from other areas, do not desire to work in these areas. The reason is that they have not got any kind of facilities. It is, therefore, necessary that as the Health Minister was pleased to state the other day, the claims of Gulbarga will have to be considered for locating a medical college at that place. This point should be seriously considered if there should be any possibility of the Gulbarga people getting any kind of medical facilities.

Last year, unfortunately the Social Welfare Department could not do much on the side of the economic upliftment of the Scheduled Castes and when we asked them, they said that they were paying more attention to education. We have got compulsory education. Along with others, the S.C. students also can get education facilities and spending money on the construction of hostels is no good. Because in a few years time, the hostels will become general hostels. Why should any money be spent out of this allotment for building hostels. I request the Government to take into consideration this aspect and see that houses are provided to the harijans and draw up schemes for this purpose for which help may be given.

Regarding the M.S.K. Mills, the Finance Minister has said in his budget speech that loan would be granted to them to see that the mill works properly. Sir, the workers of the mill are suffering and the unemployment problem is creating a very serious situation. I request the Government to pay more attention to this question and see that this industry is improved so as to be of great help to the people of that place. The roads and other things should also be improved. Thank you, Sir.

MR. SPEAKER.—Now it is 3 o'clock. Shall we continue without tea break ?

SRI SANJEEVANATH AIKALA (Suratkal).—No, Sir; let us have some break; we would become refreshed after tea.

MR. SPEAKER.—Then, the House will rise now and meet after half an hour.

The House adjourned for recess at Five Minutes past Three of the Clock and reassembled at Thirty five Minutes past Three of the Clock.

[MR. DEPUTY SPEAKER in the Chair]

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಈ ರಾಜ್ಯದ ಆರ್ಥಿಕಮಂತ್ರಿಗಳು ಹೊಸ ತೆರಿಗೆಗಳಿಲ್ಲದೆ ಆದಾಯಕ್ಕಿಂತ 40 ಲಕ್ಷ ರೂಪಾಯಿ ಹೆಚ್ಚು ಖರ್ಚಾಗತಕ್ಕ 1963-64ನೆ ಇಸವಿಯ ಆಯವ್ಯಯ ಅಂದಾಜನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಹೊಸ ತೆರಿಗೆ ಈ ರಾಜ್ಯದಲ್ಲಿಲ್ಲವೆಂದು ಸಂತೋಷಪಡತಕ್ಕದ್ದೇನೂ ಇಲ್ಲ. ಈ ಮೊದಲೇ ಕೇಂದ್ರಸರ್ಕಾರದ ಆರ್ಥಿಕ ಮಂತ್ರಿಗಳು ಸಾಮಾನ್ಯವಾಗಿ ಬೇಕಾಗಿರತಕ್ಕ ದಿನಸಿಗಳಮೇಲೆ, ಸೀಮೆಎಣ್ಣೆ, ಸಿಗರೇಟು, ಇಂಥವುಗಳ ಮೇಲೆ ತೆರಿಗೆಗಳನ್ನು ವಿಧಿಸಿದ್ದರಿಂದ ಬೆಲೆಗಳೆಲ್ಲ ಏರಿವೆ. ಸೀಮೆಎಣ್ಣೆ ಧಾರಣೆ ಮೂರು ರೂಪಾಯಿ ಹೆಚ್ಚಾಗತಕ್ಕ ಪರಿಸ್ಥಿತಿ ಬಂದಿದೆ. ಸಿಗರೇಟಿನ ಬೆಲೆ ಮೂರರಿಂದ 31 ನಯೇಪೈಸೆಯವರೆಗೂ ಹೆಚ್ಚಾಗುತ್ತದೆ. ಇದೇರೀತಿ ಅನೇಕ ದಿನಸಿಗಳ ಬೆಲೆಗಳು ಏರುತ್ತಿರುವುದರಿಂದ ಹೊಸ ತೆರಿಗೆಗಳಿಲ್ಲವೆನ್ನುವುದರಲ್ಲಿ ಅರ್ಥವಿಲ್ಲ. ನಮ್ಮರಾಜ್ಯದಲ್ಲಿಲ್ಲದೇ ಇದ್ದರೂ ಕೂಡ ಕೇಂದ್ರದವರು ವಿಧಿಸಿರುವ ತೆರಿಗೆಗಳನ್ನಾದರೂ ಕೊಡಲೇಬೇಕು.

ಈ ರಾಜ್ಯದಲ್ಲಿ ಸರ್ಕಾರದ ಧೋರಣೆ ಹಾಗೂ ನಿಯಮಗಳ ಬಗ್ಗೆ ಈಗಿರತಕ್ಕ ಮಂತ್ರಿಗಳು ಹೇಳಿಕೆಯನ್ನು ಕೊಡದೆ ಮಾಜಿ ಮಂತ್ರಿಗಳು ಹೆಚ್ಚುಹೆಚ್ಚಾಗಿ ಇವೊತ್ತು ಹೇಳಿಕೆಗಳನ್ನು ಕೊಡುತ್ತಿರುವ ಪರಿಸ್ಥಿತಿ ಕಂಡುಬರುತ್ತಿದೆ. ಉದಾಹರಣೆಗೆ ಹೇಳಬೇಕೆಂದರೆ ಮೊನ್ನೆದಿವಸ ಮೈಸೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹಿಂದೆ ಲೋಕೋಪಯೋಗಿಶಾಖೆ ಮಂತ್ರಿಗಳಾಗಿದ್ದ ಶ್ರೀಮಾನ್ ಚನ್ನಬಸಪ್ಪನವರು, ಅದೂಅಲ್ಲದೆ ಅಲ್ಲಿಯ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ, ಮಾತನಾಡುತ್ತ ಕೃಷ್ಣಾ ಗೋದಾವರಿ ನೀರಿನ ಬಗ್ಗೆ ಸರ್ಕಾರ ಆಸ್ಥೆ ವಹಿಸಿಲ್ಲವೆಂದು ಆಪಾದನೆ ಮಾಡಿದ್ದರಿಂದ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡುವ ಪರಿಸ್ಥಿತಿ ಬಂತು. ಆದರೆ ಆ ರೀತಿ ಆಗಿಲ್ಲವೆಂದು ಮೊನ್ನೆದಿವಸ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹೇಳಿಕೆ ಕೊಡುವಾಗ ಹೇಳಿದರು: ನಮ್ಮ ಹಕ್ಕುಬಾಧ್ಯತೆಗಳು ಏನೇನಿದೆಯೋ ಅವುಗಳ ಬಗ್ಗೆ ಕೇಂದ್ರಸರ್ಕಾರದೊಡನೆ fight out ಮಾಡಿ ನಿವಾರಣೆ ಮಾಡುತ್ತೇವೆಂದು. ಈ ತರನಾದ ಸ್ಟೇಟ್‌ಮೆಂಟ್ ವಗೈರೆ ಕೊಡುವುದಕ್ಕೆ ಸೂಕ್ತಕ್ರಮವನ್ನು ತೆಗೆದುಕೊಂಡ ಹೊರತು ಎಲ್ಲರೂ ಮೇಲಿಂದ ಮೇಲೆ ಹೇಳಿಕೆಗಳನ್ನು ಕೊಟ್ಟರೆ ಅಲ್ಲೋಲ ಕಲ್ಲೋಲ ಪರಿಸ್ಥಿತಿಯುಂಟಾಗುತ್ತದೆಂದು ಈ ಸಮಯದಲ್ಲಿ ಹೇಳುತ್ತೇನೆ.

ಶರಾವತಿ ಯೋಜನೆ ಬಗ್ಗೆ ಹಿಂದೆ ಎಲ್ಲ ಸದಸ್ಯರೂ ಕೆಲವೊಂದು ದೋಷಾರೋಪಣೆಗಳನ್ನೂ ಹೊರಿಸಿ ಪತ್ರಗಳನ್ನು ಸರ್ಕಾರಕ್ಕೆ ಕಳಿಸಿದೆವು. ಅವುಗಳನ್ನು ವಿಚಾರಮಾಡಿದರೋ ಇಲ್ಲವೋ ಎನ್ನುವುದು ಇನ್ನೂವರೆಗೆ ತಿಳಿಯಲಿಲ್ಲ. ಅದನ್ನು ಉತ್ತರ ಹೇಳುವಾಗ ಯಾವಯಾವ ಅಪವಾದಗಳು ಬಂದಿದ್ದುವು, ಯಾವರೀತಿ ಅವುಗಳ ನಿವಾರಣೋಪಾಯ ಕೈಕೊಂಡರು ಎಂದು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶರಾವತಿ ಯೋಜನೆ 1964ನೆ ಇಸವಿಯಲ್ಲಿ ಮುಗಿಯುತ್ತದೆಂದು ಸ್ಪಷ್ಟವಾದ ಉತ್ತರ ಹಿಂದೆ ಸಿಕ್ಕಿತ್ತು. ಆದರೆ, ಇವೊತ್ತಿನ ದಿವಸ ಆರ್ಥಿಕ ಮಂತ್ರಿಗಳ ಭಾಷಣದಿಂದ ಅಂತಿಮವಾಗಿ 1967-68ನೇ ಇಸವಿ ಆದರೂ ಇದು ಮುಗಿಯುವ ಭರವಸೆ ಇಲ್ಲವೆಂದು ತಿಳಿಯುತ್ತದೆ. ಇವೊತ್ತು ನಮ್ಮ ದೇಶದಲ್ಲಿ ಉದ್ಯೋಗ ಹಾಗೂ ವ್ಯವಸಾಯ ವಿದ್ಯುಚ್ಛಕ್ತಿಯನ್ನು ಅವಲಂಬಿಸಿದೆ. ಶರಾವತಿ ಯೋಜನೆ ಪೂರ್ತಿಯಾಗದ ಹೊರತು ನಮಗೆ ಸಾಕಷ್ಟು ವಿದ್ಯುಚ್ಛಕ್ತಿ ಸಿಕ್ಕುವುದಿಲ್ಲ. ವಿದ್ಯುಚ್ಛಕ್ತಿ ಸಿಕ್ಕದೆ ಇದ್ದರೆ ಔದ್ಯೋಗಿಕ ಪ್ರಗತಿ ಮಾಡಲಿಕ್ಕೆ ಹೇಗೆ ಸಾಧ್ಯ ?

ಅದೇ ರೀತಿ ನಮ್ಮ ರಾಜ್ಯದಲ್ಲಿ ವ್ಯವಸಾಯ ಪ್ರಾಮುಖ್ಯವಾದ ವೃತ್ತಿ. ಆದುದರಿಂದ ಹೆಚ್ಚಿಗೆ ವ್ಯವಸಾಯದ ಉತ್ಪಾದನೆ ಮಾಡಿದ ಹೊರತು ಆರ್ಥಿಕ ಸ್ಥಿತಿ ಭದ್ರವಾಗುವುದಿಲ್ಲ. ಕಠಿಣಪರಿಸ್ಥಿತಿಯಾಗುತ್ತದೆ. ಆದಷ್ಟುಬೇಗ ಶರಾವತಿ ಯೋಜನೆಯನ್ನು ಪೂರ್ಣಗೊಳಿಸಿದರೆ ಆಗಮಾತ್ರ ಉತ್ಪಾದನೆಯನ್ನು ಬೆಳೆಸಬಹುದು. ನಿನ್ನೆಯ ದಿವಸ ಪತ್ರಿಕೆಗಳಲ್ಲಿ ಓದಿದೆ. ಶ್ರೀಮಾನ್ ಟಿ. ಟಿ. ಕೃಷ್ಣಮಾಚಾರಿಯವರೊಡನೆ ಶರಾವತಿ ಯೋಜನೆಗೆ ಸಾಕಷ್ಟು ಹಣ ಬೇಕೆಂಬ ವಿಚಾರ ಮಾಡಲಾಯಿತೆಂದು ನಮೂದಿಸಿದೆ. ಅದು ಸಂತೋಷದ ಸಂಗತಿ. ಆದಷ್ಟು ತೀವ್ರ ಈ ಯೋಜನೆಯನ್ನು ಮುಗಿಸಿ ಆ ಯೋಜನೆಯ ಉಪಯೋಗವನ್ನು ಎಲ್ಲರಿಗೂ ಮಾಡಿಕೊಡಬೇಕೆಂದು ಕೇಳುತ್ತೇನೆ.

ಮೂರನೆಯದಾಗಿ ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಬಂಗಾರದ ನಿಯಂತ್ರಣದಿಂದ ಅಕ್ಕಸಾಲಿಗರು ಇವೊತ್ತಿನ ದಿವಸ ಅನ್ನವಿಲ್ಲದೆ ನಿರ್ಗತಿಕರಾಗಿ ದಾರಿಯಲ್ಲಿ ತಿರುಗಾಡತಕ್ಕ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಹಳ್ಳಿಗಳಲ್ಲಿ ಯಾವುದೇ ತರಹ ವೃತ್ತಿ ಬಾರದೆ ಇದ್ದು, ಬಂಗಾರದ ಸಾಮಗ್ರಿಗಳನ್ನು ಮಾಡುವುದಕ್ಕೆ ಕೊಡದೆ ಇರುವುದರಿಂದ ಹೆಂಡಿರು ಮಕ್ಕಳನ್ನು ಬಿಟ್ಟು ಪಲಾಯನವಾದ ಸಂಗತಿ ಸದ್ಯದಲ್ಲಿಯೇ ಬರುವ ಸ್ಥಿತಿ ಇದೆ. ಅದರ ಸಲುವಾಗಿ ಕೆಲಸವಿಲ್ಲದೆ ನಿರ್ಗತಿಕರಾಗಿ ತಿರುಗಾಡತಕ್ಕ ಅಕ್ಕಸಾಲಿಗರಿಗೆ ಏನಾದರೂ ಕೆಲಸವನ್ನು ಒದಗಿಸುವ ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರಕ್ಕೆ ಹೇಳುತ್ತೇನೆ.

ನಮ್ಮ ಅರ್ಥಿಕಮಂತ್ರಿಗಳು ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದರೂ, ಹಣದ ಅಭಾವವಿದ್ದರೂ, ನೌಕರದಾರರಿಗೆ ಹೆಚ್ಚಿಗೆ Dearness Allowance ಕೊಟ್ಟಿರುತ್ತೇವೆಂದು ಹೇಳಿದ್ದಾರೆ. ಆದರೆ ಒಂದು ವಿಷಯವನ್ನು ತಿಳಿಸಿದ್ದಾರೆ ಏನೆಂದರೆ ಹೆಚ್ಚಿನ ತುಟ್ಟಿಭತ್ಯವನ್ನು 1-4-1963 ರಿಂದ ಜಾರಿಯಲ್ಲಿ ಬರತಕ್ಕದ್ದು ಎಂದು. ನೌಕರದಾರರ ಬೇಡಿಕೆ ಬಹಳ ದಿವಸಗಳಿಂದ ಇದ್ದುದರಿಂದ ಆದಷ್ಟು ಬೇಗನೆ ಅದನ್ನು ಜಾರಿಯಲ್ಲಿ ತರಬಹುದಾಗಿತ್ತು. ಅದು ಆಗದೆ ತುರ್ತುಪರಿಸ್ಥಿತಿ ಇದ್ದರೂ ಕೂಡ ಈ ರೀತಿಯಾಗಿ ಅವರು ಮಾಡಿದ್ದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಸಂಬಂಧಪಟ್ಟ ಸಂಘ ಗಳ ಮುಖಾಂತರವಾಗಿ ಬಂಧಿರತಕ್ಕ ಅರ್ಜಿಗಳನ್ನು ವಿಚಾರ ಮಾಡಿ, ತುರ್ತುಪರಿಸ್ಥಿತಿಯಲ್ಲಿ ಇದ್ದರೂ ಕೂಡ retrospective effect ಎಂದರೆ 1-4-1961 ರಿಂದ ಜಾರಿಗೆ ತಂದು ಈ ಸಮಯ ದಲ್ಲಿ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸೀನಿಯಾರಿಟಿ ಪಟ್ಟಿಯ ಬಗ್ಗೆ ಈ ಸಭೆಯಲ್ಲಿ ಮೇಲಿಂದ ಮೇಲೆ ಪ್ರಶ್ನೆಗಳು ಉದ್ಭವಿಸುತ್ತಿರು ತ್ತವೆ. ಅದನ್ನು ಆದಷ್ಟು ತೀವ್ರದಲ್ಲಿ ಕೊನೆಗಾಣಿಸಬೇಕು. ಬೇಕಾದರೆ ಇದಕ್ಕೆ ಒಂದು ಕಮಿಟಿ ಯನ್ನು ಮಾಡಿ, ಅವರು 15 ದಿವಸ ಅಥವಾ ಒಂದು ತಿಂಗಳೊಳಗಾಗಿ ಸೀನಿಯಾರಿಟಿ ಪಟ್ಟಿಯನ್ನು ತಯಾರಿಸಿ ಅದನ್ನು ಕೊನೆಯದಾಗಿ ನಿರ್ಧರ ಮಾಡಬೇಕೆಂದು ಹೇಳುತ್ತೇನೆ.

ತುರ್ತು ಪರಿಸ್ಥಿತಿ ಇದ್ದರೂ ಕೂಡ ವ್ಯವಸಾಯಕ್ಕೆ ಹೆಚ್ಚು ದುಡ್ಡನ್ನೊದಗಿಸಿ ವ್ಯವಸಾಯದ ಉತ್ಪಾದನೆಯನ್ನು ಹೆಚ್ಚುಮಾಡಬೇಕೆಂದಿರುವುದು ಸಂತೋಷದ ಸಂಗತಿಯಾಗಿದೆ. ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯ ಎಂದರೆ ನಮಗೆ ನೀರಾವರಿ ಸೌಲಭ್ಯ ಬೇಕು. ಆದನ್ನೇ ಅಲಕ್ಷ್ಯ ಮಾಡಿ ದ್ದಾರೆ. ನೀರಾವರಿಗೆ ಪ್ರಾಶಸ್ತ್ಯವಿಲ್ಲ. ನಮ್ಮ ರಾಜ್ಯದಲ್ಲಿ ನೋಡಿದರೆ ಕೇವಲ ನೂರಕ್ಕೆ 7.3 ರಷ್ಟು ನೀರಾವರಿ ಸೌಕರ್ಯವಿದೆ. ಪಕ್ಕದ ರಾಜ್ಯಗಳಲ್ಲಿ ನೋಡಿದರೆ, 20ರಿಂದ 40ರ ವರೆಗೂ ಇದೆ. ನೀರಾವರಿ ಬಾವಿಗಳಿಗಾಗಲೀ, ಕೆರೆಗಳಿಗಾಗಲೀ, ಹೆಚ್ಚು ಪ್ರೋತ್ಸಾಹ ಕೊಟ್ಟು ಅದರ ಮುಖಾಂತರ ನೀರಾವರಿ ಮಾಡಬೇಕೆಂದು ಏನೊಂದು ಯೋಜನೆಯನ್ನು ಕೈಗೊಂಡಿದ್ದಾರೆಯೋ ಅದು ಬಹಳ ಸ್ತುತ್ಯವಾದುದು. ಈಗ ಹೆಚ್ಚಾಗಿ ಬಾವಿಗಳನ್ನು ತೋಡಿಸಲಿಕ್ಕೆ ಪ್ರಯತ್ನ ಮಾಡು ತ್ತಿದ್ದಾರೆ. ನೀರಾವರಿ ಬಾವಿಗಳಿಗಾಗಿ ಹೆಚ್ಚು ಹೆಚ್ಚು ಜನರು ಮುಂದೆ ಬಂದು ಅದರ ಉಪ ಯೋಗವನ್ನು ಪಡೆಯುತ್ತಿರುವುದರಿಂದ ಹೆಚ್ಚಿಗೆ ಉತ್ಪತ್ತಿಯಾಗುತ್ತದೆ. 1961-62 ಮತ್ತು 1962-63ರಲ್ಲಿ ಸ್ವಲ್ಪ ಹೆಚ್ಚು ಉತ್ಪಾದನೆಯಾಗಿದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ.

ಇದು ಒಂದು ಒಳ್ಳೆಯ ಯೋಜನೆ. ಇನ್ನೂ ಇದರ ಜೊತೆಗೆ ಬೀಜ, ಗೊಬ್ಬರ ಮತ್ತು ವ್ಯವ ಸಾಯಕ್ಕೆ ಬೇಕಾದ ಉಪಕರಣಗಳು ಇವನ್ನೆಲ್ಲಾ ಒದಗಿಸಿಕೊಡತಕ್ಕದ್ದು ಆವಶ್ಯವಿದೆ. ಬೀಜದ ಬಗ್ಗೆ ನಾನು ಹೇಳುವುದು ಕೆಲವೆಡೆಗಳಲ್ಲಿ seed farms ಎಂದೇನು ಮಾಡಿದ್ದಾರೆ, ಅಲ್ಲಿಂದ ಆದ ಬೀಜವನ್ನು ಬೇರೆ ಕಡೆಗೆ ಕೊಟ್ಟು ಅದು failure ಆಗುತ್ತೆ ಎನ್ನುವ ಸಂಗತಿ ಮೇಲಿಂದ ಮೇಲೆ ನಮಗೆ ಕಾಣಬರುತ್ತಿದೆ. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು seed farm ನಂತೆ ಆಯಾ ಭಾಗದಲ್ಲಿರುವ ಮಣ್ಣು, ಹವಾ, ನೀರು ಇವುಗಳನ್ನು ನೋಡಿಕೊಂಡು ಬೀಜಗಳನ್ನು ತಂದು ಹಂಚಿ ದರೆ ಒಳ್ಳೆಯದಾಗುತ್ತದೆ, ಬೇರೆ ಕಡೆಯಿಂದ ಬೀಜವನ್ನು ತರಿಸಿ ಹಂಚಿ ಒಂದು ತಾಲ್ಲೂಕಿನಲ್ಲಿ ರೈತರು ಉಪಯೋಗಿಸಿದಾಗ ಅದರಿಂದೇನೂ ಅನುಕೂಲವಾಗದೆ ಬಹಳ ಕಷ್ಟದ ಪರಿಸ್ಥಿತಿಗೆ ಸಿಕ್ಕಿದರು. ನಮ್ಮ ಧಾರವಾಡ ಜಿಲ್ಲೆಯಲ್ಲಿಯೂ ಕೂಡ ನಮ್ಮ ಅನುಭವಕ್ಕೆ ಬಂದಂತೆ, ಲಕ್ಷ್ಮಿ ಹತ್ತಿಯ ಬೀಜವನ್ನು ಹಂಚಿದ್ದರೂ ಸರಿಯಾದ ಬೆಳೆ ಬರದೆ ನಷ್ಟಪಟ್ಟರು ಎಂದು ಇಲ್ಲಿನ ಅಗ್ರಿಕಲ್‌ಚರ್ ಇಲಾಖೆಯ ಅಧಿ ಕಾರಿಗಳ ಬಗ್ಗೆ ಇದರ ಪಾಲಿಸಿ ಏನು ಎಂದು ಅವರ ಕಡೆಗೆ ಪರಿಶೀಲನೆಗಾಗಿ ಕಳುಹಿಸಿದ್ದೆವು. ಈ ತರಹದ ಕಷ್ಟಗಳು ಲಕ್ಷ್ಮಿಹತ್ತಿ ಮತ್ತು ಜವಾರಿಯ ಬೆಳೆಗೆ ಬಂದಿದ್ದವು. ಸಿರಹಟ್ಟಿ ಬಳಿ ಈಗ್ಗೆ 5-6 ವರ್ಷಗಳಿಂದಲೂ ಲಕ್ಷ್ಮಿ ಹತ್ತಿಯ ಬೆಳೆ ಸರಿಯಾಗಿ ಆಗಿಲ್ಲ, ಇದಕ್ಕೆ ಕಾರಣವೇನು ಎಂದು ಮೇಲಿಂದ ಮೇಲೆ District Development Council ಮತ್ತು District Agricultural ಅಧಿಕಾರಿ ಗಳ ಬಗ್ಗೆ ಕೂಡ ಕಳುಹಿಸಿಕೊಟ್ಟಿದ್ದರೂ ಸಹ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ. ಆದಷ್ಟು ಮಟ್ಟಿಗೆ ಆಯಾ ತಾಲ್ಲೂಕಿನಲ್ಲೇ ಒಂದೊಂದು seed farm ನ್ನು ಮಾಡಿ ಅಲ್ಲಿಂದ ಬಂದ ಬೀಜ ಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಅನುಕೂಲಮಾಡಿಕೊಳ್ಳಬಹುದು.

ಗೊಬ್ಬರದ ಬಗ್ಗೆ ಹೇಳುವಾಗ ಸೈಂಟಿಫಿಕ್ ಆಗಿ ಮಾಡಿ ಅದನ್ನು ಸಕಾಲದಲ್ಲಿ ಉಪಯೋಗಿಸದೇ ಇರುವುದರಿಂದ ಕಷ್ಟವಾಗಿದೆ. Wet lands ಗಳಿಗೆ ಸರಿಯಾದ ಕಾಲದಲ್ಲಿ ಬೀಜವನ್ನು ಒದಗಿಸಿ ರೈತಾಪಿ ಜನಕ್ಕೆ ಸಹಾಯ ಮಾಡುವುದು ಅಗತ್ಯ. ಮುಖ್ಯವಾಗಿ ರೈತರಿಗೆ ಬೇಕಾದ ವ್ಯವಸಾಯದ ಉಪಕರಣಗಳು ಸಾಕಷ್ಟು ಸಿಗುತ್ತಿಲ್ಲ. ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಇಲ್ಲಿ ಗಾಡಿಗಳಿಗೆ ಬೇಕಾಗುವ ಚಕ್ಕಡಿ, ಹಲಗೆಗಳು ಎರಡು ಮೂರು ವರ್ಷಗಳಿಂದಲೂ ಸಿಗುತ್ತಿಲ್ಲ. ಅಲ್ಲದೆ ರೆಂಟ್‌ಗಳು ಜಿಂಕುಶೀಟು ವಗೈರೆ ಯಾವುದೂ ಬರುತ್ತಿಲ್ಲ. ಆದಷ್ಟುವ ಟ್ಟಿಗೆ ಇಂತಹ ಉಪಕರಣಗಳನ್ನು ಧಾರವಾಡ ಜಿಲ್ಲೆಗೆ ಕಳುಹಿಸುವುದು ಅವಶ್ಯವಾಗಿದೆ. ಏಕೆಂದರೆ ಈ ಜಿಲ್ಲೆಗೆ ಮೂರು ವರ್ಷದಿಂದಲೂ

(ಶ್ರೀ ಸಿದ್ದಯ್ಯ ಕಾಶೀಮಠ)

ಜಿಂಕ್‌ಷೀಟುಗಳನ್ನು ಕಳುಹಿಸಿಲ್ಲ ಅದರಿಂದ ಈ ಭಾಗಕ್ಕೆ ರೆಂಟೆಗಳು, ಗಾಡಿ ಹಳಿಗಳು ಇತ್ಯಾದಿ ಗಳನ್ನು ಆದಷ್ಟು ಮಟ್ಟಿಗೆ ಕಳುಹಿಸಿದರೆ ವ್ಯವಸಾಯಮಾಡುವ ಪ್ರತಿಯೊಬ್ಬ ರೈತನಿಗೂ ಅನುಕೂಲ ವಾಗುತ್ತದೆ.

ಇನ್ನು ಸಹಕಾರ ಸಂಘಗಳ ಮುಖಾಂತರ ರೈತರಿಗೆ ಸಾಲ ಕೊಡುವ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ. ರೈತರಿಗೆ ಸಹಕಾರ ಸಂಘಗಳಲ್ಲಿಯೂ ಸಾಲ ಸಿಕ್ಕುತ್ತದೆ. ಅಷ್ಟೇ ಅಲ್ಲದೆ, ತಾಲ್ಲೂಕು ಆಫೀಸಿನಲ್ಲಿಯೂ ತಕಾವಿ ಸಾಲ ಸಿಗುತ್ತೆ. ಈ ರೀತಿ ಬೇರೆ ಬೇರೆಯಾಗಿ ಸಾಲವನ್ನು ಕೊಡುವುದಕ್ಕೆ ಒಂದೇ ಏಜನ್ಸಿಯ ಮೂಲಕ ಸಹಾಯಕೊಡುವಂತಹ ಯೋಜನೆ ಮಾಡಿದರೆ, ಇದ ರಿಂದ ಎಲ್ಲರಿಗೂ ಹೆಚ್ಚಿನ ಸೌಕರ್ಯಗಳು ಸಿಗುತ್ತವೆ. ಸಹಕಾರ ಸಂಘಗಳ ಮುಖೇನ ಸಾಲ ಗಳನ್ನೂ ಬೇಕಾದಷ್ಟು ಕೊಡುತ್ತಿದ್ದಾರೆ. ಮತ್ತೆ ತಾಲ್ಲೂಕು ಆಫೀಸಿನಲ್ಲಿ ತಕಾವಿ ಸಾಲ ಬೇರೆ ಕೊಡುತ್ತಿದ್ದಾರೆ. ಹೀಗೆ ಬೇರೆ ಬೇರೆ ರೀತಿಯಿಂದ ಕೊಡುವುದಕ್ಕೆ ಬದಲಾಗಿ ಒಂದೇ ಏಜೆನ್ಸಿ ಮಾಡಿ ಸಹಾಯವನ್ನು ಕೊಡುವಂತೆ ಮಾಡುವುದು ಚೆನ್ನಾಗಿರುತ್ತದೆ.

ವಿದ್ಯಾಖಾತೆಯ ವಿಚಾರವಾಗಿ ಒಂದು ವಿಚಾರ ಹೇಳಬೇಕಾಗಿದೆ. ಕಡ್ಡಾಯವಾದ ವಿದ್ಯಾ ಭ್ಯಾಸವನ್ನು ಸರ್ಕಾರದವರು ಜಾರಿಗೆ ತಂದರು. ಜಾರಿಗೆ ತರುವ ಮುನ್ನ ಎಷ್ಟು ಹುಡುಗರ ಸಂಖ್ಯೆ ಶಾಲೆಗಳಲ್ಲಿದ್ದುವೋ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಈಗ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಆದರೆ ಇದಕ್ಕೆ ತಕ್ಕಂತೆ ಟೀಚರುಗಳ ಸಂಖ್ಯೆಯ ಬಗೆಗೆ ವಿಚಾರಮಾಡಿಲ್ಲ. ನಮ್ಮ ಧಾರವಾಡ ಜಿಲ್ಲೆ ಯಲ್ಲೇ ನೋಡಿದರೆ ನಮ್ಮಲ್ಲಿ ಹುಡುಗರು ಹೆಚ್ಚಾಗಿದ್ದರೂ ಆ ಹುಡುಗರ ಸಂಖ್ಯೆಗೆ ತಕ್ಕಂತೆ ಶಾಲೆ ಗಳಲ್ಲಿ ತೆಗೆದುಕೊಳ್ಳಲು ಅವಕಾಶವಿಲ್ಲದೇ ಇರುವ ಸ್ಥಿತಿಯಲ್ಲಿದೆ. ಈಗಿರುವ ಮಕ್ಕಳಿಗೆ ಸ್ಥಳವಿಲ್ಲದೆ ಶಾಲೆಗಳನ್ನು ಗುಡಿಯಲ್ಲಿ, ಮಸೀದಿಯಲ್ಲಿ, ಮರದ ಕೆಳಗೆ ಶಾಲೆಗಳನ್ನು ಮಾಡುವ ಪರಿಸ್ಥಿತಿ ಬಂದಿದೆ. ನಮ್ಮ ಡಿಸ್ಟ್ರಿಕ್ಟು ಬೋರ್ಡಿನ ಶಾಲೆಯಲ್ಲಿ ಒಂದು ಸಾವಿರ ಹುಡುಗರಿಗೆ ನೂರು ಜನ ಮಾಸ್ತರಿರಬೇಕು ಎಂದಿತ್ತು. ಯಾವ ರೀತಿ ಹುಡುಗರ ಸಂಖ್ಯೆ ಹೆಚ್ಚುತ್ತಿರುವುದೋ ಅದಕ್ಕೆ ತಕ್ಕಂತೆ ಹೆಚ್ಚಿಗೆ ಮಾಸ್ತರರನ್ನು ಕೊಡಲು ಪ್ರಯತ್ನಮಾಡಬೇಕೆಂದು ಕೋರುತ್ತೇವೆ.

ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಎಲ್ಲರಿಗೂ ಕೊಡಬೇಕೋ ಅಥವಾ ಧಾರವಾಡ ಜಿಲ್ಲೆಯೊಂದಕ್ಕೇ ಕೊಡಬೇಕೋ ?

ಶ್ರೀ ಸಿದ್ದಯ್ಯ ಕಾಶೀಮಠ.—ಎಲ್ಲ ಕಡೆಗಳಲ್ಲಿಯೂ ಕೊಡಬೇಕು. ಇನ್ನು ಇಂಜನೀಯರಿಂಗು ಮತ್ತು ಪಾಲಿಟೆಕ್ನಿಕ್ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ನಮ್ಮ ಹುಡುಗರಿಗೆ ಸೀಟುಗಳು ಸಿಕ್ಕದೆ ಎಷ್ಟೋ ಮಂದಿಗೆ ನಿರಾಸೆಯಾಗಿದೆ. ಆದಷ್ಟು ಮಟ್ಟಿಗೆ ವಿದ್ಯಾಭ್ಯಾಸಮಾಡುವ ಹುಡುಗರಿಗೆ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವ ವ್ಯವಸ್ಥೆಯನ್ನು ಸರಿಪಡಿಸಬೇಕು. ಹೆಚ್ಚಿನ ಸೀಟುಗಳನ್ನು ಕೊಡುವುದಕ್ಕಾಗದೇ ಹೋದರೆ ಹೆಚ್ಚಾಗಿ ಕಾಲೇಜುಗಳನ್ನಾದರೂ ತೆರೆದು ಇದರ ಬಗ್ಗೆ ತಕ್ಕ ವ್ಯವಸ್ಥೆಮಾಡಿ ಈ ಕಷ್ಟವನ್ನು ನಿವಾರಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇಂಡಸ್ಟ್ರೀಸಿನ ಬಗ್ಗೆ ಹೇಳುವುದಾದರೆ, ಆಯಾ ಭಾಗಗಳಲ್ಲಿ ಯಾವ ಅನುಕೂಲತೆಗಳು ಸಿಗುತ್ತೋ ಅದಕ್ಕೆ ತಕ್ಕಂತಹ ಇಂಡಸ್ಟ್ರಿಗಳನ್ನು ಸ್ಥಾಪಿಸಬೇಕು. ನಮ್ಮ ಇಂಡಸ್ಟ್ರಿಗಳಿಗೆ ಮುಖ್ಯವಾಗಿ ಪವರು ಬೇಕು. ಅದು ಶರಾವತಿ ಯೋಜನೆ ಪೂರ್ತಿಯಾದ ಮೇಲೆ ಇಂಡಸ್ಟ್ರೀಸ್ ಗಳಿಗೆಲ್ಲಾ ಪವರು ಸಿಗುತ್ತೆ. ಅಲ್ಲದೆ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕೊಡುವಾಗ ಎಲ್ಲೆಲ್ಲಿ ಅದಕ್ಕೆ ತಕ್ಕ ಸೌಕರ್ಯಗಳು ಸಿಗುತ್ತದೋ ಅಂತಹ ಜಾಗದಲ್ಲಿ ನೋಡಿ ಇದನ್ನು ತೆಗೆದುಕೊಳ್ಳು ವುದು ಯೋಗ್ಯವೆಂದು ಕಾಣಿಸುತ್ತದೆ.

ಪಿ. ಡಬ್ಲ್ಯು. ಡಿ. ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿರುವಂತೆ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ಒಂಭತ್ತು ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದರು, ಅದರಿಂದ ಆಗಬೇಕಾಗಿರುವ ಕೆಲಸಗಳು ಮೂವತ್ತು ಕಡೆ ಗಳಲ್ಲಿ ಆಗಬೇಕಾಗಿತ್ತು. ಎಷ್ಟೋ ಕೊಂಚ ಎಂದರೂ ಇದಕ್ಕೆ ಇನ್ನೂ ಒಂದು, ಒಂದೂವರೆ ಕೋಟಿಯಷ್ಟಾದರೂ ಕೊಡಲು ಈ ಪುರವಣಿಯಲ್ಲಿ ಸೇರಿಸಬಹುದಾಗಿತ್ತು. ತುರ್ತುಪರಿಸ್ಥಿತಿ ಸಂಸ್ಥಾನಕ್ಕೆ ಪೂರ್ತಿಯಾಗಿ ಬಂದಿದ್ದರೂ ಹೆಚ್ಚಾಗಿ ಧಾರವಾಡ ಜಿಲ್ಲೆಯಲ್ಲಿರುವ ಎಲ್ಲ ಕೆಲಸಗಳನ್ನೂ ತುರ್ತಿನ ಪರಿಸ್ಥಿತಿಗಾಗಿ ನಿಲ್ಲಿಸಿದ್ದಾರೆ. ಆದರೆ ನಮ್ಮ ಧಾರವಾಡ ಜಿಲ್ಲೆಗೆ 1963-64 ನೇ ಸಾಲಿನಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಂಡಿದ್ದರೋ ಅವನ್ನೆಲ್ಲಾ ಮಾಡುತ್ತೇವೆಂದು ಮಾನ್ಯ ಲೋಕೋಪ ಯೋಗಿ ಖಾತೆಯ ಮಂತ್ರಿಗಳು ನಮ್ಮ ತಾಲ್ಲೂಕು ಬೋರ್ಡಿನ ಸದಸ್ಯರಿಗೆ ಇಲ್ಲಿ ಬಂದಿದ್ದಾಗ ಭರವಸೆ ಕೊಟ್ಟಿದ್ದರು. ಈ ಹಿಂದೆ ಇದ್ದ ಯಾವದೇ ಮಂತ್ರಿಗಳಾಗಿರಲಿ ಅವರು ನಡೆಸುತ್ತೇವೆಂದು ಹೇಳಿದ ಕೆಲಸಗಳನ್ನು ಮೊದಲು ತೆಗೆದುಕೊಂಡು ಮಾಡುವುದು ಅವಶ್ಯಕ. ಹಿಂದೆ ನಮ್ಮ ಭಾಗದಲ್ಲಿ

ಸುಮಾರು 50-60 ಕೆಲಸಗಳಾಗಬೇಕೆಂದು ಮಂತ್ರಿಗಳು ಅಸ್ತಿಭಾರಕೂಡ ಹಾಕಿದ್ದರು. ಈ ಕೆಲಸಗಳೆಲ್ಲಾ ಇನ್ನೂ ಆಗದೇ ಹಾಗೇ ನಿಂತಿವೆ. ಆರೇಳುವರ್ಷಗಳಿಂದಲೂ ಈ ರೀತಿ ಕೆಲಸ ಗಳಾಗದೇ ಉಳಿದಿವೆ. ಆದ್ದರಿಂದ ಹಿಂದೆ ಇದ್ದ ಮಂತ್ರಿಗಳು ಏನು ಮಾತನ್ನು ಹೇಳಿದ್ದರೋ ಅದಕ್ಕೆ ತಕ್ಕಂತೆ ಅಂಟಿಕೊಂಡು ಹೋಗುವುದು ಒಳ್ಳೆಯದು. ಇಂತಹ ಕೆಲಸಗಳನ್ನು ಮಾಡದೇ ಇರುವುದ ರಿಂದ ಇಲ್ಲಿನ ಜನಕ್ಕೇನೂ ಪ್ರಯೋಜನವಾಗಲಿಲ್ಲ. ನಮ್ಮ ತಾಲ್ಲೂಕಿಗಾಗಿ ನಮ್ಮಲ್ಲಿ ಒಂದು ದೊಡ್ಡ ಡ್ಯಾಮನ್ನು ಮಾಡಲು ಮಂಜೂರಾಗಿತ್ತು. ಇದರ ಬಗ್ಗೆ ಪ್ರಶ್ನೆ ಕೇಳಿದಾಗ ಇದನ್ನು ತೆಗೆದು ಕೊಳ್ಳುವುದರಲ್ಲಿದ್ದೇವೆ ಎನ್ನುವುದೂ ಸರ್ಕಾರದಲ್ಲಿತ್ತು. ಅಲ್ಲದೆ ಈ ಕೆಲಸವನ್ನು ಈ ವರ್ಷದ ಲಿಸ್ಟಿನಲ್ಲಿ ಸೇರಿಸಲಿಲ್ಲ. ಹಾಗೇ ಇದೆ. ಇದನ್ನು ಮಾಡಿದ್ದರೆ ಸುಮಾರು 2,400 ಎಕರೆಗಳಷ್ಟು ಭೂಮಿಗೆ ನೀರುಸಿಕ್ಕಿ ನಮ್ಮ ಜನಕ್ಕೆ ಎಷ್ಟೋ ಸೌಕರ್ಯಗಳಾಗುತ್ತಿತ್ತು. ಈಗಲಾದರೂ ಈ ಒಂದು ಡ್ಯಾಂಗೆ ಪ್ರಾತಿನಿಧ್ಯ ಕೊಡಬೇಕು. ಇದರ ಕೆಲಸವನ್ನು ಮುಂದುವರಿಸಲು ಮಂಜೂರಾತಿ ಯನ್ನು ಕೊಟ್ಟು ನಮ್ಮ ಭಾಗದ ಜನಕ್ಕೆ ಸಹಾಯ ದೊರೆಯುವಂತೆ ಮಾಡಬೇಕು.

ರೂರಲ್‌ಕಮ್ಯೂನಿಕೇಷನ್ನಿನ ವಿಚಾರವಾಗಿ ನಮ್ಮ ಲೋಕೋಪಯೋಗಿ ಖಾತೆಯ ಮಂತ್ರಿಗಳು ಯಾವ ಯಾವ ತಾಲ್ಲೂಕಿನಲ್ಲಿ 50 ಮೈಲಿಗಿಂತ ಕಡಿಮೆ ರಸ್ತೆಗಳಿದ್ದರೆ ಈ ಐವತ್ತು ಮೈಲಿಗಳಷ್ಟು ರಸ್ತೆಯನ್ನು ಪೂರ್ತಿ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ಈ ಸಾರಿ ಬಡ್ಜೆಟ್ಟಿನಲ್ಲಿ ಅದು ಯಾವ ರೀತಿಯಾಗಿ ಪುರವಣಿಯಾಗಿದೆ ಎನ್ನುವುದು ಕಾಣುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ಪ್ರತಿ ಯೊಂದು ತಾಲ್ಲೂಕು 5-6 ಮೈಲಿಗಳ ದೂರಕ್ಕಿಂತ ಹೆಚ್ಚಿಲ್ಲ. ಇನ್ನು 30-34 ಮೈಲಿಗಳಷ್ಟು ರೋಡುಗಳು ಎಲ್ಲಿಯೂ ಇಲ್ಲ. ಇದರಲ್ಲಿ merged area ಗಳಿಂದ ಬಂದಿರುವ ಹಳ್ಳಿಗಳು ಇವೆ. ಹದಿನೈದು ವರ್ಷಗಳಿಂದಲೂ ಇದರ ಬಗೆಗೆ upliftment ಆಗಿಲ್ಲ. ಹದಿನೈದು ವರ್ಷಗಳಿಂದಲೂ ಇಲ್ಲಿ ಯಾವ ರೋಡುಗಳಾಗಲೀ, ಬ್ರಿಡ್ಜ್‌ಗಳಾಗಲೀ ಆಗಿಲ್ಲ. ತುರ್ತಿನ ಪರಿಸ್ಥಿತಿಯಿಂದಾಗಿ ಎಲ್ಲವನ್ನೂ ಮಾಡುತ್ತಿಲ್ಲ ಎನ್ನುವುದಕ್ಕಿಂತ ಈ ದೇಶದಲ್ಲಿ ಅಗತ್ಯವಾಗಿರುವ ಕೆಲಸಗಳಲ್ಲಿ ಶೇಕಡಾ ಇಪ್ಪತ್ತೈದ ರಷ್ಟು ಕೆಲಸಗಳನ್ನಾದರೂ ಮಾಡಿದರೆ ಕಮ್ಯೂನಿಕೇಷನ್ನುಗಳು ಅಭಿವೃದ್ಧಿಯಾಗಿ ನಮ್ಮ ಜನರ ಅಭಿವೃದ್ಧಿಯಾಗುತ್ತದೆ. ನಮ್ಮ ಭಾಗದಲ್ಲಿ ಒಂದು ತಾಲ್ಲೂಕಿಗೆ C. D. Block ಇಲ್ಲದೆ ಇದೆ. ಇದಕ್ಕೆ ಎಸ್ಟಿಮೇಟು ಸ್ಯಾಂಕ್ಷನಾಗಿತ್ತು. ಇದನ್ನು ಈಗಲಾದರೂ ಕಟ್ಟಿಸಲಿಕ್ಕೆ ಪ್ರಯತ್ನ ಮಾಡಬೇಕು.

ಪಬ್ಲಿಕ್ ಹೆಲ್ತ್ ವಿಚಾರದಲ್ಲಿ ಡಾಕ್ಟರರ ಅಭಾವವಿದೆ. ನರ್ಸು ದಾದಿಗಳ ಕೊರತೆಯಿದೆ. ಹಳ್ಳಿ ಗಳಿಗೆ ಡಾಕ್ಟರರು ವಿಜಿಟ್ ಕೊಟ್ಟಾಗ ಚಾವಡಿಯಲ್ಲಿ ಕುಳಿತು ಜನರನ್ನು ಅಲ್ಲಿಗೇ ಕರೆಸಿ ಪರೀಕ್ಷಿಸು ವುದರ ಬದಲು ಡಾಕ್ಟರರು ಹರಿಜನರ ಕಾಲೋನಿಗೆ ಭೇಟಿಕೊಟ್ಟು ಅಲ್ಲಿ ನೋಡಬೇಕು. ಹರಿಜನ ಕೇರಿಗೆ ಭೇಟಿ ಕೊಟ್ಟು ಜನರ ಯೋಗಕ್ಷೇಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕೋಆಪರೇಷನ್ ವಿಚಾರ ಪವರ್ ಲೂಮ ಹ್ಯಾಂಡ್ ಲೂಮ ಇವುಗಳಿಂದ ಸರಿಯಾಗಿ ಕೆಲಸ ಆಗುತ್ತಿದೆಯೇ ಇಲ್ಲವೇ ಎನ್ನುವುದನ್ನು ಗಮನದಲ್ಲಿ ತೆಗೆದುಕೊಳ್ಳಬೇಕು. ಪವರ್ ಲೂಮ ಏಳಿಗೆಗೆ ಬಂದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಸೊಸೈಟಿಗಳಲ್ಲಿ ಹಣ ದುರುಪಯೋಗವಾಗು ತ್ತಿಯೆಂದು ಸ್ಪೆಷಲ್ ಆಫೀಸರರಿಂದ ವರದಿ ಬಂದಿದ್ದರೂ ಕೂಡ ಯಾವ ಕ್ರಮ ತೆಗೆದುಕೊಂಡಿಲ್ಲ. ಈ ರೀತಿಯಾದರೆ ಸೊಸೈಟಿಗಳು ಉದ್ಧಾರವಾಗುವುದು ಹೇಗೆ? ವಿಲೀನವಾದ ಸಂಸ್ಥಾನಗಳಿಂದ ಬಂದಿರುವ ಪ್ರದೇಶದಲ್ಲಿ 14 ವರ್ಷಗಳಾಗಿದ್ದರೂ ಕೂಡ ಯಾವ ತರದ ಪ್ರಗತಿ ಕಂಡು ಬಂದಿಲ್ಲ. ನಾಲೆಗಳ ದುರಸ್ತಿಯಾಗಿಲ್ಲ, ರಸ್ತೆ ರಚನೆ ಯಾಗಿಲ್ಲ, ಜನರಿಗೆ ತೊಂದರೆಯಾಗುತ್ತಿದೆ. ಈ ಪರಿಸ್ಥಿತಿ ಯನ್ನು ಬೇಗನೆ ಕೊನೆಗಾಣಿಸಬೇಕೆಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಲಕ್ಷ್ಮೇಶ್ವರ ಎಂಬ ದೊಡ್ಡ ಪಟ್ಟಣವಿದೆ. 18,000 ಜನಸಂಖ್ಯೆ ಇದೆ. ಕಳೆದ 15 ವರ್ಷಗಳಿಂದ ಈ ನಗರಕ್ಕೆ ಯಾವ ಸಹಾಯ ದೊರೆತಿಲ್ಲ, ಯಾವ ಪ್ರಗತಿಯೂ ಆಗಿಲ್ಲ, ಅಲ್ಲಿ ಒಂದು ಕೋರ್ಟು ಇದ್ದರೂ ಸಹ ಒಂದು ಸರಿಯಾದ ಬಿಲ್ಡಿಂಗ್ ಇಲ್ಲ. ಪೋಲೀಸ್ ಸ್ಟೇಷನ್, ಜೈಲು, ಕಟ್ಟಿಸುವುದಕ್ಕೆ ಸ್ಯಾಂಕ್ಷನ್ ಆಗಿದ್ದರೂ ಕೂಡ ಕೆಲಸವನ್ನು ಕಾರ್ಯಗತ ಮಾಡುವುದು ವಿಳಂಬವಾಗುತ್ತಿದೆ. ಈ ನಗರಕ್ಕೆ ಇನ್ನೂ ವಿದ್ಯು ಚ್ಛಕ್ತಿ ಒದಗಿಸಿಲ್ಲ. ಏಕೆ ವಿಳಂಬವಾಗುತ್ತಿದೆ? ಇದೊಂದು ದೊಡ್ಡ ಪಟ್ಟಣ; ವ್ಯಾಪಾರದ ಕೇಂದ್ರ ವಾಗಿದೆ. ಆದುದರಿಂದ ಲಕ್ಷ್ಮೇಶ್ವರ ನಗರದಲ್ಲಿ ಒಂದು ಪ್ರವಾಸಿ ಮಂದಿರ (Travellers' Bungalow) ಪೋಲೀಸ್ ಸ್ಟೇಷನ್, ಕೋರ್ಟು ಬಿಲ್ಡಿಂಗ್ ಇಷ್ಟು ಕೆಲಸ ಜರೂರಾಗಿ ಮಾಡಿಸ ಬೇಕೆಂದು ಈ ಸಮಯದಲ್ಲಿ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸು ತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಇಷ್ಟು ಜನ ಮಂತ್ರಿಗಳು ಸಭೆಯಲ್ಲಿ ಇದ್ದರೂ ಕೂಡ ಹರಿಕಥೆ ನಡೆದಾಗ್ಗೆ ಹರಿಕಥೆ ಕೇಳುವಹಾಗೆ ಕೇಳುತ್ತಾರೆ. ಸಭೆಗೆ ಬರುತ್ತಾರೆ ಬೇಕಾದಾಗ್ಗೆ ಎದ್ದು ಹೋಗುತ್ತಾರೆ. ಮಾನ್ಯ ಸದಸ್ಯರು ಭಾಷಣದಲ್ಲಿ ಹೇಳುವುದನ್ನು ಗುರುತು ಹಾಕಿ ಕೊಳ್ಳುವುದಿಲ್ಲ, ಹರಿಕಥೆ ಕೇಳಿದಹಾಗೆ ಕೇಳುತ್ತಾರೆ. ಇದೇನು ಸ್ವಾಮಿ ?

Sri K. S. SURYANARAYANA RAO (Mysore City).—Sir, I stand to support the budget and while doing so, I would like to offer a few remarks about the several provisions in the budget. We must congratulate the Finance Minister for having presented, if not a surplus budget, atleast a balanced budget. I for one would feel satisfied with it but I only feel that the budget could have been a little more dynamic in the sense of making some more provision for some of the itemes I am going to detail now.

I would refer to the closing balance for 1961-62. The year is to close with a cash balance of 8.34 crores, including the ways and means advance of 5.50 crores. There is also a revenue deficit of 4.67 crores. I fail to understand how there could be a deficit when there is a heavy closing cash balance. There could be a defecit if there is an excess of expenditure over income, whereas after meeting expenditure, at the end of the year we have 8.34 crores. Even taking away this 5.50 crores for the ways and means advance, the year is to close with atleast a deficit of a crore and odd and not more. Our experience all these years is that though we frame a deficit budget, at the end of the year we almost have reached a position of either a balanced budget or a little surplus and at no time had we faced a real deficit. Of course, a deficit of a crore of rupees may not be very much in a budget of over 100 crores. Looking that way I feel the Finance Minister should have taken courage to have been more liberal with regard to certain items of expenditure. As a matter of fact, if we see the budgets of different States introduced to their legislatures, we find almost every State presenting a deficit budget. A deficit budget is no defect by itself. Of course in a dynamic and developing economy, deficit budgets would be there, and we need not trouble ourselves very much over it. If I understand the figures correctly, I believe if we take into account receipts from Centre—possibly our budget was prepared before the Centre's budget was made known—particularly now that there has been heaviest taxation measures, we should get a greater share from the Centre. The State's share given in the appendix does not show much variation in the State's share in matters of income tax, excise duty, additional excise duty in lieu of sales-tax, etc. As a matter of fact, the Central Sales Tax has been amended making it 2 per cent from 1 per cent and naturally the State's share will be much more. The State's additional excise duty is 165.73 lakhs and for the current year 169.90 is proposed. Therefore there is scope to believe that our share from the Central pool will be larger and taking that into account, possibly we could spend a little more on some of the progressive projects. Of course for education 18.7 crores have been allocated, which ought to be the case, whereas for industry it is only 2.85 crores.

The industrial development of the State cannot stagnate till so many conveniences become available. We must find a way to develop our industries If I remember correct, the P.W.D. Minister once made a statement that before the year is out, we are going to have a few more Thermal Stations. What has happened to it? I believe he has said it on the floor of the House "that during the financial year 1962-63 we are likely to have one or two Thermal Power Stations." If that had come up, possibly the shortage of power might not have been there and the argument that there is power shortage would not have arisen as the reason for stagnation in industrial sphere.

4.00 P.M.

† SRI VEERENDRA PATIL.—The State Government had a proposal to import Oil-find Gas Turbine Sets from the foreign countries and it requested the Government of India to allow us to import these sets and to grant us import licence and the required foreign exchange. After much persuasion, we were successful in getting two Oil-find Gas Turbines from foreign countries. The Government of India, in the Ministry of Irrigation and Power, have already placed orders and we expect to get these sets in the month of May or June 1963, each having a capacity of 10,000 kw. When these sets come and are installed, to some extent power shortage will be solved.

SRI K. S. SURYANARAYANA RAO.—Taking that assurance of the Hon'ble Minister, the industrial development of the State possibly could have gone a little quicker.

Sir, it is gratifying to see from reports that some of the suggestions we made during the last Session regarding the reorganisation of the Department of Industries are being implemented, *i.e.*, the Directorate is reorganised giving more powers to the units and allowing the Director more time for policy and programming. That is a good thing in itself, but by itself it will not suffice. I would like to impress upon the Government, that looking at the Budget there is no prospect of any new industry coming up during the current year. In page 10, there is a reference about industries. Except the Electric Factory, there is absolutely no industry that is mentioned and to that extent we can say, the industrial growth of the State is stagnate for the year 1963-64. May be, that there is power shortage and according to the Minister it is a short-lived one. What I have been trying to impress upon the Government is that if the Government make a survey of the available potential in the State, raw materials and other things which are considered important in starting an industry and if plans and programmes are ready if a master plan is there, whenever power is made available and raw materials are available, it can go into the programme. We should lose no time in planning because if we begin to plan when power is available, when water is available, when land is available, then it is no planning. We must plan ahead. Plan a particular thing to a particular place. try to find out the requirement of that industry of that particular

(SRI K. S. SURYANARAYANA RAO)

place with all the resources available at the command of the Government. Sir, I have been impressing that the Industries Department is not a Revenue Department, but it is a specialised Department where they should be more active in matters of industrial production. We know that the neighbouring States are making much headway in this regard. Our State is lagging behind because there is no proper planning. I only impress that they should look to these things in matters, of planning and we must be prepared and ready with an hand-out as to the technical details of raw material available in a particular District and the nature of facilities available there. This is a thing that the Government could do in advance and notify to the private industries to come and start an industry. What is the incentive that we have given to private industries? I have been mentioning, on this House that it is the private industries that are progressing well and it is they who provide incentive and data to Government to start industries. It should be the other way about. The policy of the Government should be to make everything available and notify to the private industrialists: "All right-we have prepared everything for you. Please go ahead. We will give you facilities. You will have the technical know-how". That should be the way and I hope that atleast for the coming year with the re-organisation of the industrial units, they will take up this matter on an important basis.

While referring to the shortage of power, the main reason given is that there is delay in the execution of the Sharavathi Valley Hydro Electric Project. The delay in Sharavathi is attributed for three reasons, (1) unprecedented rain, (2) considerable delay in procuring mild steel and (3) is about something else.

HON'BLE MEMBERS.—What is that third reason?

Sri K. S. SURYANARAYANA RAO.—I will search out and give you the third reason also. The third reason is "the change in the design of the R. C. C. work of the Linganamakki dam for masonry" for which an explanation is already given to the House. I am only particular about the delay in the supply of minld steel and high tensile steel for fabricating penstocks, etc. This is a commodity controlled by the Government of India and the production is also controlled by them. I fail to understand how they did not get this steel in time. If it is an item to be imported, I can understand. They say that for want of steel, the work is held up. I only appeal to the Government that atleast henceforth such reason should not hold up the work.

Sir, so far as the Hydel projects are concerned, it is stated that the State Government propose to take up for implementation of short-term projects at an economical cost and necessary action is being taken to approach the Government of India for taking up the schemes in the Third Plan itself. It is also mentioned once or twice on the floor of the House that Cauvery Hydel Scheme is already under contemplation. Sharavathi Power might suffice atleast for the period of the Fourth and

Fifth Plans or atleast for the Fourth Plan. For the Fourth Plan, we must plan out other projects and work out the details. They say that Kali River Hydro-Electric Scheme is under investigation. I wish they take up this Scheme on a priority basis.

They say that Cauvery Hydel scheme is also under consideration. Sir, it may not be redundant if I say that Cauvery project is a thing for which the State Government should give a second thought. Because of 1924 agreement between the State of Mysore and Madras, I was told that the Madras Government found fault with us for having developed 5,000 acres extra and they are taking extra water from us as penalty. That is the attitude of the Madras Government. I was told even the KRS dam had to be prolonged because of the attitude of the Madras Government at that time. I only say this because, we must see how jealous Madras Government are regarding the sharing of waters. That should be our attitude also. We also know that the State of Madras has utilised the waters of Cauvery much more than they are entitled to under the 1924 agreement.

SRI G. V. GOWDA (Palya) —Why did you allow it ?

SRI K. S. SURYANARAYANA RAO. —Please listen. It is also in the agreement that if the Madras Government does anything extra, that equal right accrues to the State Government. Therefore Sir, our priority in the matter of using these waters of Cauvery is either for hydel power or for agriculture. There is no chance of our having hydel power in Cauvery either below the KRS or in the upper reaches of the KRS. Then we will have to use the waters only for agricultural purposes. Under our agreement, if we can use it, we can develop four lakhs of acres in the Cauvery basin in the districts of Mysore, Hassan, Mandya and also in Coorg,—Harangi, Kambadakada, Hemavathi, Yegachi and Lakshmana Thirtha. If you do not use it now itself, it will be very late and we are going to lose all that water, because within 12 years we have to complete it. Sir, under the agreement, if we use this water for agriculture in Mysore State, then according to statistics, according to experts, there will be no water left in Cauvery for hydel power to come up. We shall say for argument that we shall take up the hydel power because several lakhs of units of power could be developed. Possibly they say that Shimsha and Shivasamudram may get submerged. Even then, what is it that happens ? We are losing. By winning a little more power we could help industries but we have got to share that power with the Madras Government. If you get the entire power from that project it may be a matter worth considering. We do not get that. soit is an additional advantage according to Madras. We cannot use the water for agriculture because we get some power. But the water let out will be 2000 TMCFT. with so much of water, at least 4 lakhs more acres could be irrigated in Madras area. Therefore this Hogenkal Project is an advantage accruing to Madras State. They get the power and they get the water with which they can bring under cultivation additionl four lakhs of acres. As it is, already they have developed 19 lakhs of acres as against 16 lakhs of acres in Mysore State. Therefore Sir, by allowing the Hogenkal

Project to come up, the Government would be doing something which would affect adversely the agricultural development of the State and the areas which have a right to use the waters of Cauvery will be deprived of their rights. There are the people living on the banks of Cauvery, but they cannot use the water of Cauvery. There are people living on the banks of Hemavathi, but they cannot use the waters. We allow the waters of these rivers to flow into Madras and develop agriculture in Madras. Our attitude should be: 'I Live and let live' It should not be : 'you live at my cost'. That is my argument. I only appeal to the State Government that second thought should be bestowed on this Hogenkal project. Please consult your experts and take legal opinion and take all the advice that may be necessary in this regard before committing yourselves to any particular position.

MR. DEPUTY SPEAKER.—The Hon'ble member's time is up.

SRI K. S. SURYANARAYANA RAO.—There is one more point. So for as Godavari and Krishna are concerned, I may not speak because there are other friends. One thing I would say : even this morning, it was mentioned that the State Government did make efforts to bring to the notice of the Government of India and the Planning Commission that some injustice is being done to the State of Mysore by the Andhra Government taking up projects. The Hon'ble Chief Minister was pleased to say that the Government of India may not interfere in the matter. What would happen is this: The Government of India may not interfere. It is very likely that the Nagarjuna Sagar and Sri Silam projects would be proceeded with and completed. No doubt, we are entitled to 1000 TMCFT and we can demand. If the Government of India does not interfere, and the nighbouring states are not prepared to accommodate, then the only way left is--in fact to courses open to us is, to go ahead with our projects ourselves irrespective of the consquences. If we are unable to do that, then it is time and possibly we will lose if we do not resort to the course of law under the existing Inter-State River Disputes Act. Under the Constitution, there are certain rights reserved to the States in matter of water and if you do not invoke the legal provisions, possibly we may lose the case itself. This is how it will happen: we will go ahead with the projects ourselves. We are in the upper reaches and we are entitled. to it because it is in our own State. But certain right will have accrued to the neighbouring State. Even if we do not invoke the legal provisions, they will involve the legal provisions. They will say : here is a project which we have completed for which the Planning Commission and the Government of India have agreed and we are entitled to so much water: otherwise we are going to lose". They get that prescriptive right. Even there the Mysore Government is likely to lose it even if the Mysore Government has to take up the projects. Even if we say that we are taking up the projects ourselves, may be with the aid of the Government of India or with the aid of the Planning Commission, even then the Andra Government may not allow us to take up our projects.

My fear is they are going to defeat us all over and we are likely to lose everywhere. Therefore, I want to request the Government of Mysore to think over these matters and take such steps as may be necessary to see what best can be made out of this situation. We have absolute confidence in the Chief Minister. We know he is capable of doing it and he will do it. I only say that we must not lose time on this issue so that the House will feel satisfied that everthing possible is being done.

Sir, I would like to touch on one other subject and I close. That is about Education Department. I said on an earlier occasion that we see signs of development in the field of education. I also would like to say in this connection, that we have proved that democracy can thrive in the State. Democracy can best succeed only when the administrative machinery is checked and controlled by the judiciary which is independent and which is above the controlling powers of the State Government. Sir, in a democracy it is judiciary which is the watch-dog of the citizen's rights.

It is only when the executive power is likely to lean beyond its path, then it is for the judiciary to correct them. Sir, such an occasion arose in this State wherein the State Government had to accept the verdict of the Supreme Court in matters of admission to colleges, recruitment, educational concessions, etc. That has put the State in a very advantageous position in giving vent to......

Sri C. J. MUCKANNAPPA.—At the sacrifice of lakhs of students.

Sri K. S. SURYANARAYANA RAO.—Sir, the Constitution makes provision for that contingency also. I do not say that any opportunity should go to a particular class or community or a particular region.

Sri C. J. MUCKANNAPPA.—In other words, why should not he plainly say, "I am benefitted"?

Sri K. S. SURYANARAYANA RAO.—If I am benefitted I do not feel shy to say so. If I have got the intelligence and the capacity to get admission, I must get it. That is a right guaranteed to every citizen of this country. If I am entitled to it, I must get it. It applies to everyone.

Sri C. J. MUCKANNAPPA.—Sir, what about the children of other communities? He says, 'live and let live'. But, he wants to live and does not want others to live. How many children of backward classes are admitted? It is only about 150 .....

Sri K. S. SURYANARAYANA RAO.—Sir, if one has got the capacity and intelligence, he has to get the opportunity. It is not a question of saying, 'somehow we must go on'. Sir, there are ways and means for providing opportunities to the weaker sections of the community and could be done. Referring to the Education Minister, I have got to thank him for having made provision this time for the triple benefit scheme for the teachers. I must also thank him for another thing, and that is, every child whose parent's income is less than 2,400 rupees in the secondary school will get free education. That is a great achievement of the Government. I must congratulate the Government for this. Likewise, the State Government has given concession to the students studying in the colleges also whose parents' income is less than Rs. 2,400.

Sri S. R. KANTHI.—Sir, I want to make the point clear. ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ತಂದೆ ತಾಯಿಗಳ ವಾರ್ಷಿಕವರಮಾನ 2,400 ರೂಪಾಯಿ ಗಳಿಗೆ ಕಡಮೆ ಇದ್ದರೆ ಅವರಿಗೆ ಉಚಿತ ಶಿಕ್ಷಣವನ್ನು ಕೊಡಲಾಗುತ್ತದೆ. ಆದರೆ ಕಾಲೇಜಿನಲ್ಲಿ ವಿದ್ಯಾರ್ಥಿ ಗಳ ತಂದೆ ತಾಯಿಗಳ ವಾರ್ಷಿಕ ವರಮಾನ 3,600 ರೂಪಾಯಿ ಕಡಮೆ ಇದ್ದಲ್ಲಿ ಕೊಡತಕ್ಕ ಫೀಯಲ್ಲಿ 50 ಶೇಕಡ ಕನ್‌ಸೆಷನ್ ಕೊಡಲಾಗುತ್ತದೆ. ಆದರೆ ಈ ಶಬ್ದಗಳು ಎಲ್ಲಿ ಬೀಳಬೇಕೋ ಅಲ್ಲಿ ಬೀಳದೆ ಸ್ವಲ್ಪ ವ್ಯತ್ಯಾಸವಾಗಿ ಬಿದ್ದಿವೆ, ಅದು ಸ್ವಲ್ಪ ವ್ಯತ್ಯಾಸವಾಗಿದೆ ಅಷ್ಟೇನೆ.

Sri K. S. SURYANARAYANA RAO.—Sir, I was happy to read the speech of the Finance Minister. It is: "all students whose parents' income is less than Rs. 2,400 "..........

Sri S. R. KANTHI.—It should be fee concession that is given this year to students learning in the colleges and whose parents' income does not exceed Rs. 3,600.

Sri K. S. SURYANARAYANA RAO.—Sir, anyway, this is another important concession shown to the students this is in addition to the scheme of General scholarship based on poverty *cum*-merit and not on the basis of Caste and community? This only shows that the State is very much interested in the students that are coming up.

Sir, another thing is, the Education Minister is having in mind the nationalisation of certain text-books. It is a very good idea because there has been so much of comment on the floor of this House in this regard. Therefore, it is necessary to nationalise language books and and other text-books. The other suggestion is, there is a scheme to supply freely text books for children; for this purpose, they are endeavouring to have a printing press. We must thank the Government for taking such good steps. Sir, about prescribing text-books, I am told that in some States, the discretion is left to the individual schools. The department only mentions 2 or 3 books. It is something like having a reference book and the choice is given to the school. If the choice is given to the institution, only good text-books would be prescribed and proper selection of books would be made and the so called many adjustments being made in the matter of selection will be avoided. This is one way of curbing down the malpractice that exists in this sphere. I request the Education Minister to look into that position and to have as many text books as possible written and allow the individual management to prescribe out of the panal of these books prescribed by Government.

Sir, about decentralisation of education, it is really good. Education in the State is more and more being handled by private institutions. Whether it is in the high schools or colleges, the advantage is, there would be proper check on the boys by those governing the private institutions. In fact, we see the boys coming up from the private institutions have a better standard of general knowledge. The reasons being, the private management can better supervise over the children. I suggest to the Education Minister, even in matters of colleges, as far as possible, to give encouragement to private institutions to come up. Sir, so far as colleges are concerned, there has been a big row in this House and outside about handing over.

4-30 P.M.

How I view the thing is this. It is not a question of handing over the Central College or the Maharaja's College to particular individual or particular society. What I visualise is, by decentralisation. I would request the Education Minister to consider constituting a non-official governing council. Just as we do in Industries we must do in education. Industry is as technical as Education; Education is as complicated as Industries. Whether it is the Central College or the Engineering College, whatever it is, if they had a non-official governing Council to supervise the administration of the particular unit, possibly, whatever het wantings we find in the Government institutions now could be made up because there would be proper supervision, proper control on the staff, better understanding between the staff and the management and there would have been further decentralisation of functions and avoidance of delay. Now every paper has to go to the Director of Collegiate Education mostly. To avoid all this, I would request the Education Minister to consider this aspect also.

Sri S. R. KANTHI.—The point is, in some other Colleges Government have already taken steps to set up what is called the administrative body or a sort of governing body to look into the affairs of those Government Colleges. It is not a uniform policy but it is a policy whereby certain of the institutions have got their governing bodies which are nominated by Government.

Sri K. S. SURYANARAYANA RAO.—Another thing I would like to say is this. The State Government has been taking steps to increase the number of technical schools and institutions, whether it is polytechnics or allied educational institutions. They are growing in very big number. There needs to be better organisation of the same. Almost every district has an industrial training centre. It has a polytechnic and some of the districts have even Engineering Colleges. All these come under technical education. I would request the Education Minister to consider the position to organise and stabilise the department with proper guidance and direction from the Centre. I feel the top is not properly organised. I am told there is only one Director. I made a suggestion some time back that even in matters of Secondary Education, there ought to be more than one Director. We have a Director for Primary Education, a Director for Secondary Education and a Director for Collegiate Education. Likewise, we must have more than one Director because this is a very important branch of education which is lost sight of by Government. There is no point in your changing the personnel here and there, now and then having a temporary man. Whatever set up you have, you see that it is stabilised and make permanent arrangements; do not have temporary arrangements. I would also suggest your having one Joint Director I would even go to the extent of suggesting that you may have Joint Directors in respect of particular types of Education. For example, in respect of Mechacail

(SRI K. S. SURYANARAYANA RAO)

Engineering or Chemical Engineering, they need specialised agencies to handle and specially trained staff to manage. Civilians cannot do that; not even Civil Engineers or Mechanical Engineers. There should be a Directorate of Technical Education with a Director and one or two Joint Directors so that the Director will be able to lay down the policy and have a general supervision and the Joint Directors to have actual control over the units. We should not lose time and we have got to do it.

One other point is about having Vice-Chancellor. It is a matter of pain, I should say, that this matter should be pending for a long time. Is it that we don't find a man in our own State, no person of high caliber is available here. It is not proper to allow a temporary man to be there, however good and efficient he may be.

Mr. DEPUTY SPEAKER.—That point has already been raised.

Sri K. S. SURYANARAYANA RAO.—After all, he is a temporary man. We may keep him for two years; still he is a temporary man. The temporary man will not be able to take a decision. Therefore, the University Education stands to suffer if you do not have permanent arrangement. If you do not get a man from among ourselves, by all means, import him. I would request the Education Minister to look into this matter and see that permanent arrangements are made; let there be no temporary arrangements.

ಶ್ರೀ (ಜೆ. ದೇವಯ್ಯ ಮಂಡ್ಯ).—ಸ್ವಾಮಿ, ಮಾನ್ಯ ಅರ್ಥಸಚಿವರು ಮಂಡಿಸಿದ 1963-64 ನೇ ಸಾಲಿನ ಬಜೆಟ್‌ಮೇಲೆ ಭಾಷಣ ಮಾಡುವದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕೆ ಮೊದಲು ಸಭಾಪತಿಗಳನ್ನು ವಂದಿಸುತ್ತೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ಚಾನಲ್ ಆಗಿ 30 ವರ್ಷವಾಯಿತು. ನೀರು ಕೊಡುತ್ತಾ ಇದ್ದಾರೆ. ಆದರೆ ಕೆಲವು ಕಡೆ ಊರಿನ ಪಕ್ಕದಲ್ಲ ಚಾನಲ್ ಇದ್ದರೂ ಕೂಡ ಕಳೆದ 30 ವರ್ಷಗಳಿಂದ ನೀರು ಕೊಟ್ಟಿರುವದಿಲ್ಲ. ಈ ರೀತಿ ಒಂದೆರಡು ಎಕರೆ ಜಮೀನಿಗೆ ನೀರು ದೊರೆಯುತ್ತಿಲ್ಲ. ಇದನ್ನು ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರು ದೇಶದಲ್ಲಿ ಪ್ರಾಮುಖ್ಯವಾದುದು ನೀರಾವರಿ. ಈ ನೀರಾವರಿ ಯೋಜನೆಯಲ್ಲಿ ರೈತನಿಗೆ ಇರುವ ಅನನುಕೂಲತೆ ಕಷ್ಟ ಹೋಗಲಾಡಿಸಬೇಕೆಂದು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿಶ್ವೇಶ್ವರಯ್ಯಾ ನಾಲ್ ತೆಗೆದು 30 ವರ್ಷವಾಯಿತು. ಕೆಲವು ಊರಿನ ಪಕ್ಕದಲ್ಲಿಯೇ ನಾಲಾ ಬಂದಿದ್ದರೂ ಕೂಡ ಹತ್ತು ಎಕರೆ ಜಮೀನು ನೀರಾವರಿಯಾಗದೇ ಇರತಕ್ಕಂಥಾದ್ದು ಇದೆ. ಅಂಥ ಜಮೀನು ವ್ಯವಸಾಯ ಮಾಡತಕ್ಕಂಥವರಿಗೆ ನೀರು ಉಪಯೋಗಿಸುವದಕ್ಕೆ ಅವಕಾಶವಿಲ್ಲ. ಕೆಲವು ಊರುಗಳಲ್ಲಿ ಕೆಲವು ಎಕರೆ ಜಮೀನಿಗೆ ನೀರು ಬೇಕಾಗಿದೆ. ದಯವಿಟ್ಟು ಇಂಥ ಜಮೀನುಗಳಿಗೆ ನೀರು ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಸರಕಾರವನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇರಿಗೇಷನ್ ಮೂಲಕ ವ್ಯವಸಾಯ ಮಾಡಲು ರೈತ ಯಾವಾಗಲೂ ಸಿದ್ಧನಾಗಿರುತ್ತಾನೆ. ವ್ಯವಸಾಯ ಉತ್ಪತ್ತಿ ಹೆಚ್ಚಿಸಬೇಕೆಂದು ಸರ್ವಪ್ರಯತ್ನ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ಸರಕಾರ ಒಂದು ಅಂಶವನ್ನು ಗಮನಿಸಬೇಕಾದುದು ಅಗತ್ಯ. ಸರ್ ವಿಶ್ವೇಶ್ವರಯ್ಯ ನಾಲಾದಿಂದ ಹೆಚ್ಚು ಜಮೀನುಗಳಿಗೆ ನೀರು ಒದಗಿಸುವುದಕ್ಕೆ ಅವಕಾಶಮಾಡಿ ವ್ಯವಸಾಯ ಬೆಳವಣಿಗೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ನೀರಾವರಿ ವಿಚಾರದಲ್ಲಿ ಮನವಿ ಮಾಡಿಕೊಂಡು ಇನ್ನು ಕೆಲವು ವಿಷಯಗಳನ್ನು ಸ್ವಲ್ಪ ಸ್ವಲ್ಪವಾಗಿ ಈ ಸಭೆಯ ಗಮನಕ್ಕೆ ತರುತ್ತೇನೆ.

ಮಂಡ್ಯ ಜಿಲ್ಲೆಗೆ ಸೇರಿದಂತೆ ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಪಾಂಡವಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಮತ್ತು ಒಂದು ಕಾಗದದ ಕಾರ್ಖಾನೆ ಬೆಳಗೊಳದಲ್ಲಿದೆ. ಬೆಲ್ಲದ ಧಾರಣಿ ಹೆಚ್ಚು ಇತ್ತು ಎಂದು ಮಂಡ್ಯ ಸಕ್ಕರೆ ಕಾರ್ಖಾನೆಯ ಡೈರೆಕ್ಟರುಗಳು ಮತ್ತು ಸಂಬಂಧ

ಪಟ್ಟ ಅಧಿಕಾರಿಗಳು ಒಟ್ಟಿಗೆ ಬೆಲ್ಲ ತಯಾರು ಮಾಡಲು ಬಿಟ್ಟು ಕೊಟ್ಟಿದ್ದಾರೆ. ಇಲ್ಲಿರುವ ಫ್ಯಾಕ್ಟರಿಗೇ ಕಬ್ಬಿಲ್ಲ. ಎಂದು ಈಗ ಬನ್ನೂರಿನಲ್ಲಿರುವ ಕಬ್ಬನ್ನು ರೈತರು ಏನಾದರೂ ಕೊಡುತ್ತಾರೆಯೇ ಎನ್ನುವುದನ್ನು ನೋಡಿಕೊಂಡುಬರಲು ಕೆಲವು ಅಧಿಕಾರಿಗಳನ್ನು ಕಾರ್ಖಾನೆಯವರು ಕಳುಹಿಸಿಕೊಟ್ಟಿದ್ದಾರೆಂದು ಕೇಳುತ್ತೇನೆ ಇದಕ್ಕೆ ಕಾರಣವೇನು? ನಮ್ಮ ಮಂಡ್ಯದ ಫ್ಯಾಕ್ಟರಿಯಲ್ಲಿ ದಿನ ಒಂದಕ್ಕೆ 1500ರಿಂದ 2000 ಟನ್ನುಗಳಷ್ಟು ಕಬ್ಬನ್ನು ಅರೆಯಬೇಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಈ ಫ್ಯಾಕ್ಟರಿಯಾಗಿರುವಾಗ ವರ್ಷದಲ್ಲಿ 800 ರಿಂದ 1000 ಟನ್ನುಗಳಷ್ಟು ಕಬ್ಬನ್ನು ಅರೆಯದೇ ಎಷ್ಟೋ ಜನ ರೈತರಿಗೆ ಲುಕ್ಸಾನು ಆಗುತ್ತಿದೆ. ರೈತರಿಗೆ ಕಬ್ಬಿನ ವ್ಯವಸಾಯ ಮಾಡಬೇಕಾದರೆ ಒಂದಕ್ಕೆ ನಾಲ್ಕರಷ್ಟು ಖರ್ಚಾಗುತ್ತದೆ. ಈ ದೇಶದ ಜನ ಕಬ್ಬಿನ ವ್ಯವಸಾಯದಿಂದ ಲಾಭ ಸಂಪಾದನೆ ಮಾಡುತ್ತಿದ್ದಾರೆಂದು ಹೇಳುತ್ತಾರೆ. ವ್ಯವಸಾಯಕ್ಕಾಗಿ ರೈತನಿಗಾಗುವ ಖರ್ಚು, ಕಂಪೆನಿಯವರಿಗೆ ಕೊಡಬೇಕಾದ ಸಾಲದ ಬಾಕಿ, ಹಾಗೂ ರೆವಿನ್ಯೂ ವಾಟರು ರೇಟು ಮತ್ತು ಲ್ಯಾಂಡು ರೆವೆನ್ಯೂ ರೇಟಿನ ವ್ಯಾಲುಯೇಷನ್ನಿನ ಮೇಲೆ ಎಲ್ಲವನ್ನೂ ಲೆಕ್ಕ ಹಾಕಿ ನೋಡಿದರೆ ಎಷ್ಟು ಉಳಿತಾಯವಾಗುತ್ತೆ ಎನ್ನುವುದು ತಿಳಿಯುತ್ತವೆ. ಕಬ್ಬನ್ನು ಹೆಚ್ಚಾಗಿ ಅರೆದು ರೈತರಿಗೆ ಹೆಚ್ಚು ಬೇಸಾಯ ಬರುವ ಹಾಗೆ ಮಾಡುವುದನ್ನು ಬಿಟ್ಟು ಕಬ್ಬನ್ನು ರಿಲೀಸು ಮಾಡಿಬಿಟ್ಟು ಬೆಲ್ಲದ ಧಾರಣೆ ಸಿಕ್ಕಿದೆ ಎಂದು ಹೀಗೆ ಮಾಡಲು ಅವಕಾಶವಿದೆಯೇ? ಹೀಗೆ ರಿಲೀಜು ಮಾಡುವುದರಿಂದ ಎಷ್ಟು ನಷ್ಟವಾಗಿದೆ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರಾ? ಹೀಗೇಕೆ ಮಾಡಿದರು ಎಂದು ಪ್ರತಿಯೊಬ್ಬರು ಹೈಕೋರ್ಟಿಗೆ ಹೋಗುತ್ತಿದ್ದರೆ ಅದರಿಂದೇನಾದರೂ ಲಾಭವಾಗುತ್ತದೆಯೇ? ಸರ್ಕಾರದವರು ಏತಕ್ಕೋಸ್ಕರ ರಿಲೀಸು ಮಾಡಿದರು ? ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ. ರೈತರಿಗೆ ಎಷ್ಟು ರೂಪಾಯಿಗಳು ಬಂತು? ಎಷ್ಟು ಸಕ್ಕರೆ ಉತ್ಪತ್ತಿಯಾಗಬಹುದಾಗಿತ್ತು ಎಷ್ಟು ಮೊಟೆ ಬರುತ್ತಿತ್ತು ಮತ್ತು ಇದರಿಂಧ ಎಷ್ಟು ನಷ್ಟವಾಗಿದೆ ಎನ್ನುವುದನ್ನು ವಿಮರ್ಶೆ ಮಾಡಿದ್ದೀರಾ? ಇದನ್ನು ಏತಕ್ಕಾಗಿ ನಿಮ್ಮ ಡೈರೆಕ್ಟರು ಆಗಲೀ ಸಂಬಂಧಪಟ್ಟ ಅಧಿಕಾರಿಗಳಾಗಲೀ ಈ ರೀತಿ ರಿಲೀಜು ಮಾಡಿದ್ದಾರೆಯೇ ಎನ್ನುವುದನ್ನು ತಾವು ವಿಮರ್ಶೆ ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಏನೋ ಪ್ರತಿಯೊಂದು ವಿಷಯವನ್ನೂ ಮಂತ್ರಿಗಳ ಗಮನಕ್ಕೆ ತಂದು ಹೇಳಬೇಕಾಗಿದೆ. ಆದರೆ ಅವರು ನಾವು ಎಷ್ಟು ಹೇಳುತ್ತಿದ್ದರೂ ಅದನ್ನು ಕೇಳುವುದೇ ಇಲ್ಲ. ಅದನ್ನು ಇದನ್ನು ವಿಮರ್ಶೆ ಮಾಡಿ ಎಂದು ಯಾರಾದರೂ ಒಬ್ಬರು ಮಂತ್ರಿಗಳ ಸ್ನೇಹಿತರು ಬಂದು ಹೇಳಿದರೆ ಅದಕ್ಕೆ "ತಥಾಸ್ತು" ಎಂದು ಹೇಳುತ್ತಾರೆ. ಇಂತಹ ಕೆಲಸಕ್ಕಾಗಿ ಸಾವಿರಾರು ರೂಪಾಯಿ ಖರ್ಚಾದರೂ ಸರಿ ಒಂದು ಕಮಿಟಿ ಮಾಡಿ ಇದರ ರಿಪೋರ್ಟನ್ನು ತರಿಸುವಂತೆ ಮಾಡಬೇಕು. ಸರ್ವೇ ಸಾಧಾರಣವಾಗಿ ಒಬ್ಬ ಹೆಣ್ಣು ಮಗಳ ಲಗ್ನ ಮಾಡಬೇಕಾದರೆ, ವರನನ್ನು ಪತ್ತೆ ಮಾಡಬೇಕಾದರೆ, ಅಂತಹವನು ಎಲ್ಲಿ ಹುಟ್ಟಿದವನು, ಯಾವ ಕುಲಕ್ಕೆ ಸೇರಿದವನು, ವಿದ್ಯಾವಂತನೇ ಎನ್ನುವುದನ್ನು ನೋಡಿಕೊಂಡು ಹೆಣ್ಣು ಮಕ್ಕಳ ಮದುವೆ ಮಾಡುತ್ತಾರೆ. ಏಕೆಂದರೆ ಹೆಣ್ಣು ಮಕ್ಕಳು ಸುಖವಾಗಿ ಬಾಳಲಿ ಮತ್ತು ಸುಖವಾಗಿ ಒಂದು ಸಂಸಾರ ನಡೆಸಲು ಸರಿಯಾಗಿರಲಿ ಎಂದು ಮಾಡುತ್ತಾರೆ. ಹಾಗೆ ಸರ್ಕಾರದವರು ಜನಕ್ಕೋಸ್ಕರ ಸರ್ಕಾರ ದೇಶದ ಆಡಳಿತವನ್ನು ನಡೆಸುವುದಕ್ಕೋಸ್ಕರ ಒಬ್ಬರಿಗೆ ಸ್ಥಳ ಕೊಟ್ಟರೆ ಸರಿಯಾದ ದಕ್ಷನಾಗಬೇಕು. ಆ ಸ್ಥಳದಲ್ಲಿ ಮಂತ್ರಿಯಾಗಿ ಕೂಡುವಾಗ ಜನಗಳ ಕಷ್ಟವೇನಿದೆ, ಹೇಗಿದೆ ಎನ್ನುವುದನ್ನು ತಿಳಿದುಕೊಂಡು ಅದನ್ನು ನಿವಾರಣೆ ಮಾಡಿಕೊಡಬೇಕು. ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವಾಗ ಎಷ್ಟೋ ಜನಕ್ಕೆ ನಷ್ಟವಾಗುತ್ತದೆ.

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ವೇಜು ಬೋರ್ಡಿನ ತೀರ್ಪನ್ನು ಜಾರಿಗೆ ಕೊಡದೇ ಇರುವ ಸಂದರ್ಭಗಳಿವೆ ಎನ್ನುವುದನ್ನು ನೋಡಬೇಕು. ದಾಕ್ಷಿಣ್ಯಕ್ಕೊಳಗಾಗಿ ತವಗೆ ಬೇಕಾದವರಿಗೆ ಮಾತ್ರ ಕೊಟ್ಟು ಕೆಲವರಿಗೆ ಕೊಟ್ಟಿಲ್ಲ. ಇಂಡಿಯ ಸರಕಾರದವರು ವೇಜು ಬೋರ್ಡನ್ನು ತಯಾರಿಸಿದ್ದರೂ ಈ ವೇಜು ಬೋರ್ಡಿನಿಂದ ನ್ಯಾಯವಾದ ಕೂಲಿ ಅಥವಾ ಸಂಬಳ ಸಿಗಲಿ ಎಂದು ಮಾಡಿದರೆ ಇದನ್ನು ಸರಿಯಾಗಿ ಅನ್ವಯಿಸುತ್ತಿಲ್ಲ. ನಾನೇನೋ ವಿದ್ಯಾವಂತನಲ್ಲ ಸ್ವಾಮೀ, ಆದರೆ ಏನೇನೋ ಅನ್ಯಾಯಗಳಾಗುತ್ತಿವೆ. ಇದನ್ನು ನೋಡಬೇಕೆಂದು ಹೇಳುತ್ತೇನೆ.

ಪಾಂಡವಪುರದಲ್ಲಿರುವ ಸಕ್ಕರೆ ಕಾರ್ಖಾನೆಗಾಗಿ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ ಹವಿನ್ನೈದು ಇಪ್ಪತ್ತು ಲಕ್ಷದಷ್ಟು ರೈತಾಪಿ ಜನರು ಷೇರುಗಳನ್ನು ಕೊಂಡಿದ್ದಾರೆ. ಇದರ ಮೇಲೆ ಜನರಲ್ ಬಾಡಿ ಮೀಟಿಂಗಿನಲ್ಲಿ ಷೇರುದಾರರು ಬಂದರೆ ಅಲೋಯನ್ಸು ಇಲ್ಲ ಎಂದು ಅಲ್ಲಿರುವವರನ್ನು ಎತ್ತಿಕಟ್ಟಿ ಮಾಡಿದರು. ಆದರೆ ಚೇರ್ಮನ್ನರಾಗಿರುವವರು ಅಲೋಯನ್ಸು ತೆಗೆದುಕೊಳ್ಳುತ್ತಾರೆ. ಅವರಿಗೆ ಕಂಪೆನಿಯಿಂದ ಒಂದು ಕಾರು, ಒಂದು ವ್ಯಾನು ಮತ್ತು ಅವರ ಸಂಸಾರಕ್ಕೆ ಪ್ರತ್ಯೇಕ ವ್ಯಾನು ಅಲ್ಲದೆ ಈ ಅಸೆಂಬ್ಲಿಗೆ ಬರಬೇಕಾದರೆ ಈ ಕಂಪನಿಯ ಕಾರಿನಲ್ಲೇ ಬರಬೇಕು? ಪಾಂಡವಪುರದಿಂದ ಸಕ್ಕರೆ ಕಂಪೆನಿ ಕಾರು,

(ಶ್ರೀ ಜೆ. ದೇವಯ್ಯ)

ಅದರೊಂದಿಗೆ ಒಬ್ಬ ಡ್ರೈವರು ಏಕೆ ಬರಬೇಕು ? ನನಗೆ ಅರ್ಥವಾಗಲಿಲ್ಲ, ನಾವು ಈ ಅಸೆಂಬ್ಲಿಗೆ ಸದಸ್ಯರಾಗಿ ಬರುವಾಗ ನಮಗೆ ಖರ್ಚು ಕೊಡುತ್ತೀರಿ. ಭತ್ಯ ಕೊಡುತ್ತೀರಿ. ಇತರ ಎಲ್ಲ ಸೌಕರ್ಯಗಳನ್ನು ಕೊಡುತ್ತೀರಿ ನಾವು ಅಸೆಂಬ್ಲಿಗೆ ಬರುತ್ತೇವೆ. ಮುಗಿದ ಮೇಲೆ ಹೋಗುತ್ತೇವೆ. ಆದರೆ ಇಂತಹ ಒಬ್ಬ ಅಧಿಕಾರಿಗಳು ಸ್ವಂತವಾಗಿ ಕಾರು ತೆಗೆದುಕೊಂಡು ಬರಲಿ ಬೇಡ ಎನ್ನುವುದಿಲ್ಲ. ಸದಸ್ಯರಿಗೆಲ್ಲಾ ಅಲೋಯನ್ಸು ಕೊಡಕೂಡದು ಎಂದು ಅಲ್ಲಿ ಜನರಲ್ ಬಾಡಿಯಲ್ಲಿ ಹೇಳಿ, ತಾವು ಮಾತ್ರ ಅಲೋಯನ್ಸು ಎಂದು ತೆಗೆದುಕೊಳ್ಳುವುದು ಯಾವ ಧರ್ಮ ? ಅದೂ ಅಲ್ಲದೆ ಅಲ್ಲಿ ಕೂಲಿಗಾರರ ಮೇಲೆ ರಾಜಕೀಯ ಮಾಡಿ ಅವರನ್ನು ಬಯ್ಯುವುದು ಸಸ್‌ಪೆಂಡ್ ಮಾಡುವುದು ಹೊಡೆಯುವುದು ಎಂದರೇನು ಸ್ವಾಮಿ, ಇವೆಲ್ಲಾ ಬರೀ ರಾಜಕೀಯ. ಇದನ್ನೆಲ್ಲಾ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಗಮನಕ್ಕೆ ತೆಗೆದುಕೊಂಡು ಪರ್ಯಾಲೋಚನೆ ಮಾಡುತ್ತಾರೆಂದು ನಂಬುತ್ತೇನೆ. ನಾವು ವಿಷಯಗಳನ್ನು ಹೇಳುತ್ತೇವೆ. ಹೇಳುವ ವಿಷಯಗಳನ್ನೆಲ್ಲ ಸ್ವಲ್ಪಮನಸ್ಸಿನಲ್ಲಿಟ್ಟು ಅದನ್ನು ನೋಡುವಾಗ ಸುಳ್ಳು ಎಂದಾಗಿದ್ದರೆ, (ಒಂದು ವೇಳೆ ತಪ್ಪಾಗಿದ್ದರೆ) ಅದು ನ್ಯಾಯವಲ್ಲ ಈ ರೀತಿ ಮಾತನಾಡಬಾರದು ಎಂದು ಹೇಳಿ ಆಗಬೇಕಾದರೆ ನಾವು ತಿದ್ದಿಕೊಳ್ಳುತ್ತೇವೆ. ಒಬ್ಬ ನೌಕರರನ್ನು ಮನಸ್ಸಿಗೆ ಬಂದಂತೆ ಹೊಡೆಯುವುದೆಂದರೇನು? ಎಲ್ಲಾದರೂ ಉಂಟೇ ವೇಜು ಬೋರ್ಡನ್ನು ಇಂಡಿಯಾ ಸರ್ಕಾರದವರು ಏಕೆ ಕೊಟ್ಟರು ತಾವು ಅದರಂತೆ ಅನ್ವಯಿಸಿ ಇಲ್ಲಿಯೂ ವೇಜು ಬೋರ್ಡು ಮಾಡಿರುವುದನ್ನು ಪರೀಕ್ಷೆ ಮಾಡಿ ನೋಡಿ ಹೀಗೆ ಜಾರಿಗೆ ತರುವುದರಲ್ಲಿ ಯಾವ ರೀತಿ ಆಗುತ್ತದೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿ ವೇಜು ಬೋರ್ಡಿಗಾಗಿ ರೈತರು ಕೂಡ ಚಳುವಳಿ ಮಾಡಲು ಅವಕಾಶವಾಗುತ್ತದೆ. ಕಬ್ಬನ್ನು ಹೇರುವಾಗ ಮೂರು ವರ್ಷದಿಂದ ಯಾವ ರೀತಿ ಗಾಡಿಗಳು ಆಗಲಿ, ಬಸ್ಸಾಗಲೀ ಬಂದರೆ ಆ ವರ್ಷದಲ್ಲಿ ಯಾವ ರೀತಿ ಮಾಡಬೇಕು, ಒಂದು ಮೈಲಿ, ಎರಡು ಮೈಲಿಯೊಳಗೆ ಎಷ್ಟು ಕಬ್ಬು ಸಿಗುತ್ತೆ, ಪರೀಕ್ಷೆ ಮಾಡಿ· ರೈತರು ಸುಮಾರು ಏಳು ಎಂಟು ವರ್ಷಗಳಿಂದಲೂ ಪಾಂಡವಪುರದ ಸಕ್ಕರೆಗೆ ಕಾರ್ಖಾನೆಗೆ ದುಡ್ಡು ಕೊಟ್ಟು ಷೇರುದಾರರಾಗಿದ್ದಾರೆ. ಕಾಯ್ದುಕೊಂಡಿರುವ ಈ ಜನರಿಗೆ ಮೂರು ಕಾಸೂ ಬೇಡವೇ? ಬೋನಸ್ಸನ್ನೂ ಕೊಡಲಿಲ್ಲ. ಇವರಿಗೆಲ್ಲ ಎಷ್ಟು ಕೊಡಬೇಕು ಎನ್ನುವುದನ್ನು ನೋಡಬೇಕು.

ಇನ್ನು ಬೆಳಗೊಳದಲ್ಲಿ ಕಾಗದದ ಕಾರ್ಖಾನೆ ಮಾಡಿದ್ದಾರೆ. ಇವರಿಗಾಗಿ ರೈತನ ಜಮೀನನ್ನು ಕೊಟ್ಟಿದ್ದೀರಿ ಆದರೆ ಇಲ್ಲಿ ಕೆಲಸ ಮಾಡಲು ನಮ್ಮ ರೈತರ ಜನರ ಮಕ್ಕಳಿಗೆ ಎಷ್ಟು ಕೆಲಸಗಳನ್ನು ಕೊಟ್ಟಿದ್ದೀರಿ ? ಎಲ್ಲ ಹೊರಗಡೆಯಿಂದ ಬಂದಿರುವ ಕೆಲಸಗಾರರಿಗೆ ಕೆಲಸ ಮಾಡಲು ಅವಕಾಶವಿತ್ತಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಕಾರ್ಖಾನೆ ಮಾಡಲು ಅವಕಾಶ ಕೊಟ್ಟು ಇಲ್ಲಿ ಕೆಲಸ ಮಾಡಲು ನೂರಾರು ಜನ ಹೊರಗಡೆಯವರಿಗೆ ಕೆಲಸ ಕೊಟ್ಟರೆ ಹೇಗೆ? ಕೃಷ್ಣರಾಜ ಸಾಗರದ ನೀರನ್ನು ಎಷ್ಟೋ ಎಕರೆಗೆ ಸಾಗುವಳಿಗೆ ಕೊಡುವ ನೀರನ್ನು ಎಂದರೆ ಸುಮಾರು ಒಂದು ಸಾವಿರ ಎಕರೆಗಳಿಗಾಗುವಷ್ಟನ್ನು ಇವರಿಗೆ ಕೊಟ್ಟಿದ್ದಾರೆ, ಹೀಗೆಲ್ಲಾ ಕೊಟ್ಟು ಮೈಸೂರು ದೇಶದ ರೈತರಿಗೆ, ಅವರ ಮಕ್ಕಳಿಗೆ ಕೆಲಸವಿಲ್ಲದೇ ಅಲೆಯುತ್ತಿರುವಾಗ, ಎಷ್ಟೋ ಜನ ಜಮೀನಿಲ್ಲದೆ ಇರತಕ್ಕವರಿಗೆ ಮತ್ತು ಅವರ ಮಕ್ಕಳಿಗೆ ಇಲ್ಲಿರುವ ಹರಿ ಜನರ ಮಕ್ಕಳಿಗೆ, ಯಾವ ರೀತಿಯ ಕೆಲಸವನ್ನೂ ಕೊಡದೇ ಇರಲು ಕಾರಣವೇನು ? ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು ಮತ್ತು ನಮ್ಮ ಜನಕ್ಕೆ ಸಹಾಯ ಮಾಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ವ್ಯವಸಾಯ ಬಹಳ ಪ್ರಾಮುಖ್ಯವಾದುದು ಎಂದು ಹೇಳುತ್ತಾರೆ. ಆದರೆ ವ್ಯವಸಾಯಕ್ಕೆ ಖರ್ಚೇನಾಗುತ್ತದೆ, ಒಬ್ಬ ಕೂಲಿಗಾರನಿಗೆ ಎಷ್ಟು ದುಡ್ಡು ಕೊಡಬೇಕು, ಕೂಲಿ ಕೊಟ್ಟು ಊಟ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು; ಹೀಗಿರುವಾಗ ನಮ್ಮ ವ್ಯವಸಾಯ ಸಚಿವರು ಹೊರಗಡೆಯಿಂದ ಮೆಷನರಿಗಳನ್ನು ತರಿಸಿ ವ್ಯವಸಾಯಗಾರರಿಗೆ ಸಹಾಯವಾಗುವಂತೆ ಏನೇನು ಉಪಕರಣಗಳು ಬೇಕೋ ತರಿಸಿ ಸಹಾಯ ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆ, ಆದರ ಹಸುರೆಲೆಗೊಬ್ಬರದ ಕಡೆಗೆ ರಿಯಾಯಿತಿ ಕೊಡದಿದ್ದರೆ ಆಗುವುದಿಲ್ಲ ಇದನ್ನು ನಾನು ಬಹು ದಿನಗಳಿಂದಲೂ ಹೇಳುತ್ತಿದ್ದೇನೆ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಿಸಿಂದಲೂ ಹೇಳುತ್ತಿದ್ದೇನೆ.

ರೈತರಿಗೆ ಬಹಳ ತೊಂದರೆಯಾಗಿರುವುದರಿಂದ ರಿಯಾಯಿತಿ ದರದಲ್ಲಿ ಕೊಡಿಸಬೇಕು. ದೀರ್ಘ ಕಾಲಾವಧಿ ಸಾಲ, ಅಲ್ಪ ಕಾಲಾವಧಿ ಸಾಲ, ಬೇಕು ಬೇಕಾದವರಿಗೆ ಸಿಕ್ಕುತ್ತದೆ. ಮಂತ್ರಿಗಳು ಪ್ರವಾಸಕ್ಕೆ ಬಂದಾಗ, ಸ್ಥಳದಲ್ಲಿ ಪರಿಶೀಲನೆ ಮಾಡಿದರೆ ಇದು ಅವರಿಗೆ ಗೊತ್ತಾಗುತ್ತದೆ. ಆದರೆ ಮಂತ್ರಿಗಳು ಆತುರದಲ್ಲಿ ಬಂದು ಹೋಗುತ್ತಾರೆ, ಇನ್ನೊಂದು ಸಾರಿ ನಮ್ಮ ಜಿಲ್ಲೆಗೆ ಬಂದಾಗ ಈ ವಿಷಯ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ;

ಎಲೆಕ್ಟ್ರಿಸಿಟಿ ಪೂರೈಕೆ ಇದು ಬಹಳ ಪ್ರಾಮುಖ್ಯವಾದುದು ರೈತರಿಗೆ ವಿದ್ಯುತ್ ಶಕ್ತಿ ಪೂರೈಕೆ ಸರಿಯಾಗಿಲ್ಲ. ಇದಲ್ಲದೆ ಕೈಗಾರಿಕೆಗಳಿಗೆ ಸಹ ಹೆಚ್ಚು ಪ್ರಮಾಣದಲ್ಲಿ ಒದಗಿಸಬೇಕೆಂದು ಹೇಳುತ್ತೇನೆ ಸರ್ಕಾರ ಇದನ್ನು ದಯವಿಟ್ಟು ಯೋಚನೆ ಮಾಡಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಜಮೀನು ಇಲ್ಲದವರಿಗೆ ಜಮೀನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದರು ಆದರೆ ನಮ್ಮ ಜಿಲ್ಲೆಯಲ್ಲಿ ಯಾರಿಗೂ ಜಮೀನು ಸಿಕ್ಕಿಲ್ಲ. ಬಸ್ ರಾಷ್ಟ್ರೀಕರಣ ಏಕದಂ ಮಾಡಿದರೆ ಬಸ್ ಮಾಲೀಕರು ಮತ್ತು ಸಾವುಕಾರರ ಗತಿ ಏನು ? ಯಾವ ಯಾವ ಪ್ರದೇಶದಲ್ಲಿ ಬಸ್ ರಾಷ್ಟ್ರೀಕರಣ ಮಾಡಲಾಗುವುದೋ ಅಲ್ಲಿ ಮೊದಲು ಇರತಕ್ಕ ಬಸ್ಸುಗಳನ್ನು ಕೊಂಡುಕೊಳ್ಳಬೇಕು ಮತ್ತು ಬಸ್ ಮಾಲೀಕರಿಗೆ ಪರಿಹಾರ ಕೊಡಬೇಕು [ಒಂದೊಂದಾಗಿ ಎಲ್ಲವನ್ನೂ ಜನರಿಂದ ಕಿತ್ತುಕೊಂಡರೆ ಅವರು ಏನು ಮಾಡಬೇಕು ?] ಪಟೇಲ್ ಶಾನುಭೋಗರು ತೋಟಿ ತಳವಾರರು ಬಹಳ ದಿವಸಗಳಿಂದ ಸರ್ಕಾರದ ಕೆಲಸ ಮಾಡುತ್ತಾ ಬಂದಿದ್ದಾರೆ ಅವರಲ್ಲಿ ಅನೇಕರಿಗೆ ಜಮೀನು ಇಲ್ಲ. ಯಾರಿಗೆ ಜಮೀನು ಇಲ್ಲವೋ ಅವರಿಗೆ ಜಮೀನು ಕೊಡಿಸಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಸ್ವಾಮಿ ಚೀಣಾ ಧಾಳಿಯಿಂದ ಉಂಟಾದ ಪರಿಸ್ಥಿತಿಯ ವಿಚಾರದಲ್ಲಿ ಹೇಳುವುದಾದರೆ ಈ ಧಾಳಿಯನ್ನು ಎದುರಿಸಲು ನಾವೆಲ್ಲರೂ ಸಹಾಯ ಮಾಡಬೇಕು. ಶರೀರ ತ್ಯಾಗ ಮಾಡಲು ಸಹ ತಯಾರಾಗಬೇಕು. ಇದಕ್ಕೆ ಎಲ್ಲರೂ ಸಹಾಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಕೆಲಸ ಮಾಡಬೇಕೆಂದು ರಾಜ್ಯಪಾಲರು ಸಹ ಹೇಳಿದ್ದಾರೆ. ಯುದ್ಧ ನಿಧಿಗೆ ಹಣ ವಸೂಲ್ಮಾಡಿರುವ ವಿಚಾರದಲ್ಲಿ ಕೆಲವರು ಎಲ್ಲ ಹಣವನ್ನು ತಾನೊಬ್ಬನೆ ವಸೂಲ್ಮಾಡಿದ್ದೇನೆಂದು ಹೇಳುವುದುಂಟು. ಈ ಹಣ ವಸೂಲ್ಮಾಡುವುದರಲ್ಲಿ ಎಲ್ಲರೂ ಸೇರಿದ್ದಾರೆ. ಆದರೆ ಹಣ ಸ್ವೀಕರಿಸುವುದಕ್ಕೆ ಮಂತ್ರಿಗಳು ಬಂದಾಗ ಒಬ್ಬನೇ ಮಾಡಿದ್ದೇನೆಂದು ತೋರಿಸುತ್ತಾರೆ ಮಂತ್ರಿಗಳೂ ಸಹ ಒಬ್ಬರ ಹೆಸರನ್ನೇ ಹೇಳುತ್ತಾರೆ. ಎಲ್ಲರೂ ಸಹಾಯ ಮಾಡಿರುವಾಗ್ಗೆ ಎಲ್ಲರ ಹೆಸರು ಏಕೆ ಹೇಳಬಾರದು ? ತಮ್ಮ ಪಕ್ಷದ ಸಂಸ್ಥೆಯಲ್ಲಿರುವ ಕೆಲವರು ಕೆಲಸ ಮಾಡುತ್ತಾರೆಂದು ತಿಳಿದುಕೊಂಡ ಹಾಗೆ ಇದೆ. ಇದು ಸರಿಯಲ್ಲ. ನಾವೆಲ್ಲರೂ ಸೇರಿಕೊಂಡು ಕೆಲಸ ಮಾಡುತ್ತಿದ್ದೇವೆ. ಇದನ್ನು ಸರ್ಕಾರ ತಿಳಿದುಕೊಳ್ಳಬೇಕು. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕೆಲವರು ಅನುಕೂಲಸ್ಥರು, ಮುಖಂಡರು ದುಡ್ಡು ಕೊಡುತ್ತಾ ಇಲ್ಲ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು.

ಇನ್ನು ಅಧಿಕಾರಿಗಳ ವರ್ಗಾವಣೆ ಮೂರು ವರ್ಷಕ್ಕೊಮ್ಮೆ ಮಾಡಬೇಕೆಂದಿದೆ. ಆದರೆ ಮಂಡ್ಯ ಜಿಲ್ಲೆಗೆ ಬಂದು $1\frac{1}{2}$ ವರ್ಷದಲ್ಲಿಯೇ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ತಮಗೆ ಬೇಕಾಗಿದ್ದವರನ್ನು ಕರಸಿ ಕೊಳ್ಳುತ್ತೀರಿ. ಮಂಡ್ಯ ಜಿಲ್ಲೆಯಲ್ಲಿ ಎಷ್ಟೆಷ್ಟು ವರ್ಗಾವರ್ಗಿಗಳಾಗಿವೆ ನೋಡಬೇಕು. ಮಂತ್ರಿಗಳು ಇದಕ್ಕೆ ಗಮನ ಕೊಡಬೇಕು. ಮೇಲಿಂದ ಮೇಲೆ ಅಧಿಕಾರಿಗಳನ್ನು ಈ ರೀತಿ ವರ್ಗಾವಣೆ ಮಾಡುವುದು ಸರಿಯಲ್ಲ.

ಇನ್ನು ಕೋ-ಆಪರೇಟಿವ್ ಸೊಸೈಟಿ ವಿಚಾರ ಒಂದು ಮಾತು ಹೇಳಬಿಚ್ಛಿಸುತ್ತೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಎಲಾರ್ಗವ್ವನ ಹಳ್ಳಿ ಸೊಸೈಟಿ ಜನರಲ್ ಬಾಡಿ ಮೀಟಿಂಗ್ ಮಾಡಿಲ್ಲ. ಈ ವಿಚಾರ ಡೆಪ್ಯೂಟಿ ರಿಜಿಸ್ಟ್ರರ ಅವರಿಗೆ ಬರೆದು ತಿಳಿಸಿದೆ. ಬರುವ ತಿಂಗಳು ಮೀಟಿಂಗ್ ಮಾಡುತ್ತೇವೆಂದು ಹೇಳುತ್ತಾರೆ. ಮೀಟಿಂಗಿನ ತಾರೀಖು ಗೊತ್ತುಮಾಡಿದರೂ ಕೂಡ ಇನ್ನೂವರೆಗೆ ಜನರಲ್ ಬಾಡಿ ಮೀಟಿಂಗ್ ಮಾಡಿಲ್ಲ.

ಅಧ್ಯಕ್ಷರು ಯಾರು ಎಂಬ ಬಗ್ಗೆ ವಿವಾದ ಎದ್ದಿತು. ಇಂಥವರೇ ಆಗಬೇಕೆಂದು ಹಠ ಹಿಡಿದ ಮೇಲೆ ಅವರನ್ನೇ ಒಪ್ಪಿಕೊಂಡರು. ಡೈರೆಕ್ಟರ ಉಮೇದುವಾರಿಕೆ ಅರ್ಜಿ ಸ್ವೀಕರಿಸುವುದಕ್ಕೆ ಇಂಥ ತಾರೀಖು ಎಂದು ನಿರ್ಧರಿಸಿದರು ಇಷ್ಟರಲ್ಲಿ ಜನರಲ್ ಬಾಡಿ ಮೀಟಿಂಗನ್ನು ಒಂದು ವರ್ಷವಾದರೂ ಏಕೆ ಮಾಡಲಿಲ್ಲವೆಂದು ಒಂದು ಸಸ್ಪೆನ್‌ಷನ್ ಆರ್ಡರ್ ಹೊರಡಿಸಿ, ಅವರು ಸದರಿ ಅರ್ಜಿ ತೆಗೆದುಕೊಳ್ಳುತ್ತಿರುವಾಗಲೇ, ಆರ್ಡರಿನ ಎಂಡಾರ್ಸ್‌ಮೆಂಟ್ ಕೊಟ್ಟರು. ಸಸ್‌ಪೆನ್‌ಷನ್ ಆದಮೇಲೆ, ''ನೀನು ಡೈರೆಕ್ಟರಾಗಿ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಅರ್ಹನಲ್ಲ'' ಎಂದು ಹೇಳಿದರು. ನಮ್ಮ ಮಿನಿಸ್ಟರು ನಮ್ಮ ಊರಿಗೆ ಬರಲಿ, ವಿಮರ್ಶೆ ಮಾಡಲಿ. ಇದರಲ್ಲಿ ಯಾರು ಎಂದು ನಿರ್ಧರಿಸುವ ಹಕ್ಕನ್ನು ಅವರಿಗೇ ಬಿಟ್ಟುಕೊಡುತ್ತೇನೆ. ಇದು ದೇಶದಲ್ಲಿ ಎಲ್ಲಿಯಾದರೂ ಉಂಟೇ ? ಇವರು ಎರಡು ಕೋಟಿ ಜನರ ಕಷ್ಟ ಸುಖವನ್ನು-ಆಡಳಿತ ನಡೆಸಿಕೊಂಡು ಹೋಗುವ ಮಂತ್ರಿಗಳು. ಇವರು ಒಂದು ಗುಂಪಿಗೋಸ್ಕರ ಇರುವವರಲ್ಲ, ಹಾಗಿದ್ದರೆ ಅವರನ್ನು ಒಂದು ಪಂಗಡಕ್ಕೆ ಮಾಡಿಬಿಡಲಿ. ನಾವೇನಾದರೂ ಈ ಸರ್ಕಾರ ಬದಲಾವಣೆಯಾಗಲಿ ಎಂದು ಸರ್ಕಾರಕ್ಕೆ ವ್ಯತಿರಿಕ್ತವಾಗಿ ಚಳುವಳಿ ಹೂಡಿದ್ದೇವೆಯೇ ? ಈ ಸರ್ಕಾರ ಬೇಡ ಅಂತ ಅವರ ಮೇಲೆ ಕೋಪ ಮಾಡಿಲ್ಲ. ಇದೇ ಸರ್ಕಾರ ಇರಲಿ ಅಂತ ಹೇಳುತ್ತೇವೆ. ಯಾರು ಬಂದರೂ ಈ ಸರ್ಕಾರ ಬದಲಾವಣೆ ಯಾಗಲು ಅವಕಾಶವಿಲ್ಲ ಇದೇ ಸರ್ಕಾರ ಇರಲಿ ಎನ್ನುವುದು ನಮ್ಮ ಆಸೆಯಾಗಿರುವಾಗ, ನಮಗೆ ಏಕೆ ತೊಂದರೆ ಕೊಡಬೇಕು ? ತಾವು ಸರ್ಕಾರದವರು ವರ್ಗಾವರ್ಗಿ ಮುಂತಾದುದರಲ್ಲಿ ಅನ್ಯಾಯವಾಗಿದ್ದರೆ ವಿಮರ್ಶೆ

(ಶ್ರೀ ಜೆ. ದೇವಯ್ಯ)

ಮಾಡಬೇಕು. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಪ್ರಕರಣವನ್ನು ವಿಮರ್ಶೆ ಮಾಡಬೇಕು ಮಂಡ್ಯ ಕಾರ್ಖಾನೆಗೆ ಕಬ್ಬು ರಿಲೀಸ್ ಮಾಡುವುದಕ್ಕೆ ಎಷ್ಟು ರೂಪಾಯಿ ಸರ್ಕಾರಕ್ಕೆ ನಷ್ಟವಾಯಿತು ಎಂದು ವಿಚಾರಣೆ ಮಾಡುವುದಕ್ಕೆ ಒಂದು ಕಮಿಟಿ ಮಾಡಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಯಾರು ಕೊಡುವವರು ?

ಈ ವರ್ಷದ ಬಜೆಟ್ ಮಾಡುವಾಗ ಏನು ಮಾಡಿದ್ದಾರೆಂದರೆ, ತಾಲ್ಲೂಕು ಬೋರ್ಡುಗಳಲ್ಲಿ ಹೋದ ವರ್ಷ ಹೆಚ್ಚಾಗಿ closing balance ಉಳಿಸಿಬಿಟ್ಟಿದ್ದಾರೆ. ಇಷ್ಟಾಗಿಯೂ ಸರ್ಕಾರದವರು, ತಾವು ಹಳ್ಳಿಗಾಡನ್ನು ಅಭಿವೃದ್ಧಿ ಸ್ಥಿತಿಗೆ ತರುತ್ತೇವೆ, ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ. ತಾಲ್ಲೂಕು ಬೋರ್ಡಿಗೆ ರೆವಿನ್ಯು ಬಾಬಿನಿಂದ ಎಷ್ಟು ದುಡ್ಡು ಕೊಟ್ಟಿದ್ದಾರೋ ಅಷ್ಟನ್ನೂ ಖರ್ಚು ಮಾಡಿಲ್ಲ. Closing balance ಉಳಿಸಿಕೊಂಡು, ಅದನ್ನು ಇಂಜನಿಯರಿಂಗ್ ಕಾಲೇಜ್ ಕೊಡುವುದಕ್ಕೆ ಆ ಹಣವನ್ನು ವಿಲೇವಾರಿ ಮಾಡಿದ್ದಾರೆ. ಹಳ್ಳಿಗಳ ಏಳಿಗೆಗೆ ಮುಡುಪಾದ ಹಣವನ್ನು ಪಟ್ಟಣಗಳಿಗೆ ತಿರುಗಿಸಿದರೆ, ಹಳ್ಳಿ ಉದ್ಧಾರವಾಗುವುದು ಹೇಗೆ? ಬೇಕಾದರೆ ಸರ್ಕಾರವೇ ಇಂಜನಿಯರಿಂಗ್ ಕೊಡಲಿ; ಅದಕ್ಕಾಗಿಯೇ ಬೇರೆ ಕಡೆಯಿಂದ ಹಣ ವಸೂಲು ಮಾಡಲಿ, ತಾಲ್ಲೂಕು ಬೋರ್ಡಿಗೆ ಕೊಟ್ಟಿರುವ ಹಣವನ್ನು ಅದಕ್ಕೆ ವಿನಿಯೋಗಿಸುವುದು ಅನ್ಯಾಯ. ಒಕ್ಕಲಿಗರ ಜನರಲ್ ಹಾಸ್ಟಲಿಗೆ ನಾವು ಹಿಂದೆ ಬಹಳ ಕಷ್ಟ ಪಟ್ಟು ಒಂದು ಕಟ್ಟಡ ಕಟ್ಟಿದೆವು. ಆ ಕಟ್ಟಡವನ್ನು ಏಕ್‌ದಮ್ ನಮ್ಮನ್ನು ಯಾರನ್ನೂ ಕೇಳದೆ ಇಂಜನಿಯರಿಂಗ್ ಕಾಲೇಜಿಗೆ ಕೊಟ್ಟಿದ್ದಾರೆ. ಹೀಗೆ ಮಾಡುವುದಕ್ಕೆ ಸರ್ಕಾರಕ್ಕೆ ಏನು ಅಧಿಕಾರವಿದೆ ? ಈ ವರ್ಗಾವಣೆಗೆ ಹೇಗೆ ಪರ್ಮಿಷನ್ ಕೊಟ್ಟರು ? ಇಂಜನಿಯರಿಂಗ್ ಕಾಲೇಜಗೆಂದು ಲಕ್ಷಾಂತರ ರೂಪಾಯಿ ಪ್ರತ್ಯೇಕವಾಗಿ ವಸೂಲು ಮಾಡಿ, ಅದಕ್ಕೇ ಹೊಸದಾಗಿ ಕಟ್ಟಡ ಕಟ್ಟಿಸಿಕೊಡಿ. ಅದು ಬಿಟ್ಟು ಹಾಸ್ಟಲಿಗೆ ತಳಹದಿ ಹಾಕಿದ ನಮ್ಮನ್ನು ಒಂದು ಮಾತೂ ಕೇಳದೇ, ಇಂಜನಿಯರಿಂಗ್ ಕಾಲೇಜಿಗೆ ಅದನ್ನು ಕೊಟ್ಟುಬಿಡುವುದೇ? ಸರ್ಕಾರ ಹೇಳಿದಹಾಗೆ ಕೇಳುತ್ತಾರೆಂದು ಸಿಕ್ಕಾಪಟ್ಟೆ ಸ್ವೇಚ್ಛಾಚಾರಿಯಾಗಿ ವರ್ತಿಸುವುದೇ, ? ನಮ್ಮ ಸಭಾನಾಯಕರು ಈಗ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ನಾನು ಹೇಳುತ್ತಿರುವುದು ಸರಿಯೇ ಎನ್ನುವುದನ್ನು ವಿಮರ್ಶೆ ಮಾಡಲಿ. ನಮ್ಮ ಸಭೆಯಲ್ಲಿ ಮೇಲುಗಡೆ ತಕ್ಕಡಿ ಇಟ್ಟಿದ್ದಾರೆ ; ಆ ತಕ್ಕಡಿಯಲ್ಲಿ ನಾನು ಮಾಡುವ ಟೀಕೆಗಳನ್ನು ತೂಕ ಮಾಡಿ, ನಮ್ಮ ಕಷ್ಟ ನಿವಾರಣೆ ಮಾಡಲಿ.

ಸರ್ಕಾರಿ ಟ್ರಾನ್ಸ್‌ಪೋರ್ಟ್ ಬಹಳ ಪ್ರಾಮುಖ್ಯವಾದ ವಿಷಯ. ಆ ಇಲಾಖೆಯ ಮಂತ್ರಿಗಳಾದ ಅರಸುರವರಿಗೆ ಒಂದು ದಿವಸ, ಈ ಇಲಾಖೆಯಿಂದ ಬಹಳ ದುಡ್ಡು ಲೋಪವಾಗುತ್ತಿದೆಯೆಂದು ಹೇಳಿದೆ. ಶಟಲ್ ಬಸ್ಸುಗಳನ್ನು ಪರೀಕ್ಷೆ ಮಾಡಿದರೆ, ಕಂಡಕ್ಟರುಗಳು ಎಷ್ಟು ಹಣ ದುರುಪಯೋಗ ಮಾಡುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ. ಬಸ್ಸುಗಳನ್ನು ಚೆಕ್ ಮಾಡುತ್ತಿಲ್ಲ ನಾನೇ ಅನೇಕ ಸಾರಿ ಬಸ್ಸುಗಳಲ್ಲಿ ಓಡಾಡ ವಾಗ ಸ್ವತಃ ನೋಡಿದ್ದೇನೆ, ಕೇಳುವವರೇ ಇಲ್ಲ. ತಪಾಸಣೆಯೆ ಇಲ್ಲ. ನಮ್ಮ ಎದುರಿನಲ್ಲಿಯೇ ದಿನಕ್ಕೆ 10–15 ರೂಪಾಯಿಯನ್ನು ಕಂಡಕ್ಟರುಗಳು ಮಿಗಿಸಿಕೊಂಡು ಹೋಗುತ್ತಾರೆ. ಆ ಶಟಲ್ ಬಸ್ಸುಗಳ ಸ್ಥಿತಿಯೇ, ಹೇಳುವುದಕ್ಕೆ ಬಹಳ ವಿಷಾದವಾಗುತ್ತದೆ. ಬಸ್ಸುಗಳು ಎಷ್ಟು ಲಟಾಪಟಿಯಾಗಿವೆಯೆಂದರೆ ಕುಳಿತುಕೊಂಡು ಅವುಗಳಲ್ಲಿ ಪ್ರಯಾಣ ಮಾಡಿದರೆ, ಜ್ವರ ಬಂದು ಬಿಡುತ್ತದೆ. ರಸ್ತೆಯೂ ಚೆನ್ನಾಗಿಲ್ಲ.

ಟೈಮ್ ಇಲ್ಲದ್ದರಿಂದ, ಇಷ್ಟು ಹೇಳಿ, ಇಷ್ಟು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಸಭಾಪತಿಯವರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯ್ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೆ, ಈ 1963–64 ನೇ ಸಾಲಿನ ಬಜೆಟ್ಟನ್ನು ಅನುಮೋದಿಸುತ್ತಾ ನಾನು ಕೆಲವು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ಈಗ ಸೀಮೆ ಎಣ್ಣೆಮೇಲೆ ತೆರಿಗೆ ಹಾಕಿರುವುದರಿಂದ ಹಳ್ಳಿ ಜನರಿಗೆ ಬಹಳ ತ್ರಾಸಾಗಿದೆ. ಈ ತೆರಿಗೆ ಅನ್ಯಾಯವಾದುದು ಬಡಜನರಿಗೆ ಮತ್ತು ರೈತರಿಗೇ ಇದರಿಂದ ಬಹಳ ಹೊಡೆತ ಬೀಳುವುದು. ಈ ತೆರಿಗೆಯನ್ನು ವಿಧಿಸಬಾರದಾಗಿತ್ತು. ತಾವು ಕೇಂದ್ರ ಸರ್ಕಾರಕ್ಕೆ ಈ ತೆರಿಗೆಯನ್ನು ತೆಗೆದು ಹಾಕಬೇಕೆಂದು ಮನವಿ ಮಾಡಿಕೊಳ್ಳಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ವ್ಯವಸಾಯ ಸೌಲಭ್ಯಗಳ ವಿಷಯ ಮಾತನಾಡಬೇಕಾದರೆ ಸರ್ಕಾರದವರು ತಕಾವಿ ಲೋನಗಳನ್ನು ಮಂಜೂರು ಮಾಡಿದರೂ, ಅದು ವೇಳ್ಯಕ್ಕೆ ಸರಿಯಾಗಿ ಎಷ್ಟೋ ಕಡೆ ಸಿಗುವುದಿಲ್ಲ. ಅದನ್ನು ಹಂಚುವುದಕ್ಕೆ ಒಂದು ಕಾಲಪರಿಮಿತಿ ಹಾಕಬೇಕು ಮತ್ತು ಅಷ್ಟರಲ್ಲಿ ಬಟವಾಡೆ ಮಾಡಬೇಕು ಡಿಸೆಂಬರ್ ತಿಂಗಳೊಳಗೆ ಸಾಲವನ್ನು ರೈತರಿಗೆ ಕೊಡುವಹಾಗೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ, ಅದು ಜನವರಿ, ಫೆಬ್ರುವರಿಯಲ್ಲಿ ಸಿಕ್ಕರೆ ರೈತನಿಗೆ ಉಪಯೋಗವಾಗುವುದಿಲ್ಲ. ಈ ತಕಾವಿ ಹಣವನ್ನು ಕೊಡುವ ಬಗ್ಗೆ ಎನ್‌ಕ್ವಯರಿ ಹೋದ ತಲಾಟಿಗಳು ಮತ್ತು ಸರ್ಕಲ್ ಆಫೀಸರು

ಹೆಗ್ಗಣಗಳಾಗಿಬಿಟ್ಟು, ರೈತರಿಗೆ ಬಹಳ ಕಿರುಕುಳ ಕೊಡುತ್ತಾರೆ. ರೈತರಿಗೆ ಹೊಲದಲ್ಲಿ ಇಲಿಗಳು ಬೆಳೆಗಳಿಗೆ ಎಷ್ಟು ತ್ರಾಸು ಕೊಡುತ್ತವೆಯೋ ಅಷ್ಟು ತ್ರಾಸು ತಲಾಟಿಗಳು, ಸರ್ಕಲ್ ಆಫೀಸರು ತಕಾವಿ ಸಾಲಕ್ಕೆ ಕೊಡುತ್ತಾರೆ. ರೈತರಿಗೆ ಇವರಿಂದ ಆಗುತ್ತಿರುವ ಕಷ್ಟವನ್ನು ತಡೆಗಟ್ಟುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದವರು ವಿದ್ಯಾ ಸಂಸ್ಥೆಗಳಿಗೆ ಸಾಕಷ್ಟು ಸೌಕರ್ಯ ಒದಗಿಸಲಿಕ್ಕೆ ಹತ್ತಿದ್ದಾರೆ ಆದರೆ ಹೈಸ್ಕೂಲು ಸಲುವಾಗಿ ಕೊಡುವ ಗ್ರಾಂಟನ್ನು, ಹೈಸ್ಕೂಲು ಪ್ರಾರಂಭವಾದ ಬಹಳ ದಿವಸಗಳಮೇಲೆ ಕೊಡುತ್ತಾರೆ. ನಾನು ಹೇಳುವುದು ಸ್ಕೂಲ್ ಸ್ಟಾರ್ಟ್ ಆದಕೂಡಲೆ, ಮಕ್ಕಳ ಸಂಖ್ಯೆ ನೋಡಿಕೊಂಡು ಗ್ರಾಂಟು ಕೊಡುವ ವ್ಯವಸ್ಥೆ ಮಾಡಬೇಕು.

ಪ್ರತಿ ಪ್ರಾಥಮಿಕ ಶಾಲೆಯಲ್ಲಿಯೂ ಪ್ರತಿವರ್ಷ ಟೆಕ್ಸ್ಟ್ ಬುಕ್ಕುಗಳು ಬದಲಾವಣೆಯಾಗುತ್ತಿವೆ. ಇದರಿಂದ ಬಡ ವಿದ್ಯಾರ್ಥಿ ಕಷ್ಟವೇನೆಂದರೆ, ಅವನು ಒಂದು ಕ್ಲಾಸಿನಲ್ಲಿ ನಾಪಾಸ್ ಆದನೆಂದರೆ ಹೊಸ ಟೆಕ್ಸ್ಟ್ ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೆ ಅವನಿಗೆ 50 ರೂಪಾಯಿ ಬೇಕು. ಪ್ರತಿ ವರ್ಷವೂ ಟೆಕ್ಸ್ಟ್ ಬುಕ್ಕುಗಳನ್ನು ಬದಲಾವಣೆ ಮಾಡುವುದು ಬೇಡ, ಎರಡು ವರ್ಷಕ್ಕೆ ಒಮ್ಮೆ ಪುಸ್ತಕಗಳನ್ನು ಬದಲಾವಣೆ ಮಾಡಿ ಎಂದು ಎಜುಕೇಷನ್ ಮಂತ್ರಿಗಳ ಕಡೆಯಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ರೈತರಿಗೆ ಈಗಿರುವ ನಿಯಮಗಳ ಪ್ರಕಾರ ಫೀ ಮಾಫ್ ಆಗುವ ಹಾಗೆಯೇ ಇಲ್ಲ. ಬಡ ರೈತನಿಗೆ ಸ್ಕೂಲಿಗೆ ಹೋಗಿ ಅವನ ಮಕ್ಕಳಿಗೆ ಮಾಫಿ ಮಾಡಿಸುವುದಕ್ಕೆ ಬಹಳ ತೊಂದರೆಗಳಿವೆ. ಆದ್ದರಿಂದ ಆಯಾ ಪಂಚಾಯಿತಿಯಿಂದ ಫೀ ಮಾಫ್ ಮಾಡಬಹುದೆಂದು ಶಿಫಾರಸು ಬಂದರೆ, ಸ್ಕೂಲಿನವರು ಮಾಫಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಒಂದು ತಾಲ್ಲೂಕಿನಲ್ಲಿ 50 ಮೈಲಿ ರಸ್ತೆ ತೆಗೆದುಕೊಳ್ಳಬೇಕೆಂಬ ಯೋಜನೆ ಇದೆ. ಆ ಯೋಜನೆಯನ್ನು ಕಚ್ಚಾ ರಸ್ತೆಗೂ ಅನ್ವಯಿಸಿ, ಯೋಜನೆಯಲ್ಲಿ 50 ಮೈಲಿ ಕಚ್ಚಾ ರಸ್ತೆಯನ್ನೂ ಇಟ್ಟುಕೊಳ್ಳಬೇಕು.

ವರ್ಷೇ ವರ್ಷೇ ಬಜೆಟ್ ಭಾಷಣದಲ್ಲಿ ಖಾನಾಪುರದಲ್ಲಿ ತರಿಕಟ್ಟೆಯಿಂದ ಕಕ್ಕೇರಿ ತನಕ ರಸ್ತೆ ಮಾಡಿಕೊಡಬೇಕೆಂದು ಹೇಳುತ್ತಿದ್ದೇನೆ ಮತ್ತು ಲಿಖಿತ ಮೂಲಕವೂ ಕೊಟ್ಟಿದ್ದೇನೆ. ಅದಕ್ಕೆ ಸರ್ಕಾರ ಏಕೋ ಗಮನ ಕೊಟ್ಟಿಲ್ಲ. ಪಿ. ಡಬ್ಲ್ಯು. ಡಿ. ಮಂತ್ರಿಗಳು ಅದನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಣಕಾಸಿನ ಮಂತ್ರಿಗಳವರು ರೊಕ್ಕ ಕೊಡಬೇಕೆಂದು ಅವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ.

ಕೋಆಪರೇಷನ್.—ಈ ವಿಷಯದಲ್ಲಿ ಹೇಳಬೇಕಾದರೆ ಹರಿಜನರ ಒಂದು ಹೌಸಿಂಗ್ ಸೊಸೈಟಿ ಭೋಜ ರಿಜಿಸ್ಟರ್ ಆಗಿ 15 ವರ್ಷ ಆಯಿತು, ತಾಲ್ಲೂಕಿಗೆ ಹೋಗುತ್ತದೆ. ಡಿಸ್ಟ್ರಿಕ್ಟ್‌ಗೆ ಹೋಗುತ್ತದೆ; ಹಣಕಾಸಿನ ಮಂತ್ರಿಯಿಂದ ತಿರುಗಿ ಕೋಆಪರೇಷನ್ ಮಿನಿಸ್ಟರ್ ಕಡೆಗೆ ಬರುತ್ತದೆ, ಹರಿಜನರ ಸ್ಕೀಂ ಸಲುವಾಗಿ ದುಡ್ಡು ಇದೆಯೋ ಇಲ್ಲವೋ ಗೊತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ 60ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆ ಎಂದು ಹೇಳಿ 1958ರಿಂದ 61ರ ವರೆಗಿನ ವರದಿಯ ಪ್ರಕಾರ ಸರ್ಕಾರದವರ ಗಮನಕ್ಕೆ ಬಂದಿದೆ. ಈ ಹರಿಜನರ ಹೌಸಿಂಗ್ ಸೊಸೈಟಿಗೆ ಲೋನ್ ಕೊಡದಿದ್ದ ಪಕ್ಷದಲ್ಲಿ ಬಹಳ ಕೆಡಕನ್ನಿಸುತ್ತದೆ. 45 ಮಂದಿ ಕೂಡಿ ಸಹಕಾರ ಸಂಘ ಮಾಡಿಕೊಂಡು ಕೆಲಸಮಾಡಬೇಕೆಂದು ಜವಹರಲಾಲ್ ನೆಹರೂರವರೂ ಹೇಳುತ್ತಾರೆ. ನೀವೂ ಹೇಳುತ್ತೀರಿ. ಹಣ ಮಾತ್ರ ಲ್ಯಾಪ್ಸ್‌ಮಾಡಿದ್ದೀರಿ. ಹೀಗಿರುವಾಗ ಈ ಹರಿಜನರ ಸೊಸೈಟಿಗೆ ದುಡ್ಡು ಕೊಡದಿದ್ದರೆ ಅದು ನಮ್ಮ ಕರ್ಮ, ಬಹಳ ಕೆಟ್ಟನಿಸುತ್ತದೆ. ದಯವಿಟ್ಟು ಹಣಕಾಸಿನ ಮಂತ್ರಿಗಳು ಮತ್ತು ಕೋಆಪರೇಷನ್ ಮಂತ್ರಿಗಳು ಕೂಡಿಕೊಂಡು ಚರ್ಚೆಮಾಡಿ ಅದಕ್ಕೆ ಹಣ ಮಂಜೂರು ಮಾಡಬೇಕೆಂದು ಹೇಳುತ್ತೇನೆ.

ಕೈಗಾರಿಕೆ ವಿಷಯದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡಲು ಕಸ್ತೂರಿಬಾ ಬಾಲಿಕಾ ಆಶ್ರಮ ಎನ್ನುವ ಒಂದು ಉದ್ಯೋಗ ಕೇಂದ್ರವನ್ನು ರಿಜಿಸ್ಟರ್‌ಮಾಡಿ 5 ವರ್ಷ ಆಯಿತು. ಖಾದಿ ಬೋರ್ಡಿನಿಂದ ಉದ್ಯೋಗ ಕಲ್ಪನೆ ಮಾಡುವ ಸಲುವಾಗಿ ಅಂಬರಚರಕಾ ಕೊಡುತ್ತೇವೆ ಎಂದು ಹೇಳಿದ್ದರು. ಅದೂಕೂಡ ಕೊಟ್ಟಿಲ್ಲ. ಸರ್ಕಾರದವರು ಗಮನಕೊಟ್ಟು ಈ ಒಂದು ಸ್ಕೀಂ ಪೂರ್ತಿಯಾಗಿ ಫಲಕಾರಿಯಾಗುವಂತೆ ವ್ಯವಸ್ಥೆಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮತ್ತು ಸಣ್ಣ ಸಣ್ಣ ಕೈಗಾರಿಕೆಗೆ ಸಂಬಂಧಪಟ್ಟಂತೆ ಹರಿಜನರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಜಿಲ್ಲಾಮಟ್ಟದಲ್ಲಿ 100 ಮಕ್ಕಳ ಒಂದು ಉದ್ಯೋಗ ಕೇಂದ್ರ ಸ್ಥಾಪನೆ ಮಾಡಿದರೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ ಮತ್ತು ಹೆಚ್ಚು ಹಣವನ್ನು ಹಣಕಾಸಿನಮಂತ್ರಿಗಳು ಕೊಟ್ಟು ಆ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುತ್ತಾರೆ ಎಂದು ನಂಬಿದ್ದೇನೆ.

(ಶ್ರೀಮತಿ ಚಂಪಾಬಾಯಿ ಭೋಗಲೆ)

ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಜೀಪುಗಳು ಸಮೃದ್ಧಿಯಾಗಿ ಓಡಾಡುತ್ತಿವೆಯೇ ಹೊರತು ಯಾವ ಸ್ಕೀಂ ಆಗುತ್ತಿಲ್ಲ. ಈಗಾಗಲೇ ದೇಶದ ಮೇಲೆ ಒಂದು ಗಂಡಾಂತರ ಬಂದಿದೆ. ಹೀಗಿರುವಾಗ ಇದನ್ನು ಮುಚ್ಚಿದರೇ ಒಳ್ಳೆಯದಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಅಲ್ಲಿ ಏನೂ ಕೆಲಸವಾಗುವುದಿಲ್ಲ. ಬರೀ ಜೀಪುಗಳ ಓಡಾಟವೇ ಓಡಾಟ. ಅದಕ್ಕೆ ಖರ್ಚುಮಾಡತಕ್ಕ ಹಣವನ್ನು ಎಜುಕೇಷನ್ ಸಲುವಾಗಿ ಹಾಕಿರಿ ಉದ್ಯೋಗದ ಸಲುವಾಗಿ ಹಾಕಿರಿ, ಕೋಆಪರೇಷನ್ ಇಲಾಖೆಯ ಮೂಲಕ ನಮ್ಮ ಹರಿಜನರ ಉನ್ನತಿಯ ಸಲುವಾಗಿ ಖರ್ಚುಮಾಡಿರಿ ಎಂದು ಹೇಳುತ್ತೇನೆ. ಸೋಷಿಯಲ್ ವೆಲ್‌ಫೇರ್ ಬೋರ್ಡು ಸ್ಕೀಮು ಎಂದರೆ ಜೀಪು ತೆಗೆದುಕೊಂಡು ಹಳ್ಳಿಗಳಲ್ಲಿ ಸುತ್ತುವ ಸ್ಕೀಂ ಆಗಿದೆಯೇ ಹೊರತು ಅಲ್ಲಿ ಯಾವ ಕೆಲಸವೂ ಆಗಿಲ್ಲ. ಆದ್ದರಿಂದ ನಾನು ಸರ್ಕಾರದವರನ್ನು ವಿನಯದಿಂದ ಪ್ರಾರ್ಥಿಸುವುದೇನೆಂದರೆ ಈ ಗಂಡಾಂತರ ಪರಿಸ್ಥಿತಿಯಲ್ಲಿ ಇದನ್ನು ಮುಚ್ಚುವುದು ಒಳ್ಳೆಯದು.

ವಿದ್ಯಾಭ್ಯಾಸದ ಇಲಾಖೆಯ ವಿಷಯ ತೆಗೆದುಕೊಂಡರೆ ನಮ್ಮ ಹರಿಜನರ ಒಬ್ಬ ಹುಡುಗನಿಗೆ 15 ರೂಪಾಯಿ ಗ್ರಾಂಟು ಕೊಡುತ್ತೀರಿ. ಒಂದು ಊಟಕ್ಕೆ 4ಆಣೆ ಬೀಳುತ್ತದೆ. ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು ಅದರ ಕಡೆಗೆ ಗಮನಕೊಡಬೇಕು. 25 ರೂಪಾಯಿ ಗ್ರಾಂಟ್ ಕೊಟ್ಟರೆ ಒಂದು ಊಟಕ್ಕೆ 12 ಆಣೆ ಬೀಳುತ್ತದೆ. ಆ ರೀತಿ ಕೊಡುವ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು. ಕಾಲೇಜಿನಲ್ಲಿ ಕಲಿಯುವಂಥ ವಿದ್ಯಾರ್ಥಿಗಳಿಗೆ 25 ರೂಪಾಯಿ ಸ್ಕಾಲರ್‌ಷಿಪ್ ಕೊಡುತ್ತೀರಿ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ, ಉದ್ಯೋಗದ ಸಲುವಾಗಿ ಅದರಲ್ಲೂ ಹರಿಜನರ ಸಲುವಾಗಿ ಹೆಚ್ಚು ರೊಕ್ಕ ಖರ್ಚುಮಾಡಿ ಅವರಿಗೆ ಸಂಬಂಧಪಟ್ಟಿರತಕ್ಕ ಸ್ಕೀಂಗಳನ್ನು ಯಶಸ್ವಿಯಾಗಿ ಕಾರ್ಯಗತಮಾಡಲು ಒಂದು ದೊಡ್ಡ ಬೋರ್ಡ್ ಏನೋ ಇದೆ. ಆದರೆ ಖರೋಖರ್ ಹರಿಜನರ ಉನ್ನತಿ ಎಲ್ಲಿಯತನಕ ಮಾಡುವುದಿಲ್ಲ ಅಲ್ಲಿ ತನಕ ಅವರ ಸ್ಥಿತಿ ಅಧೋಗತಿಗೆ ಹೋಗುತ್ತದೆ ಎಂದು ಹೇಳುತ್ತೇನೆ. ಹರಿಜನರ ಸೀನಿಯಾರಿಟಿ ಸಲುವಾಗಿ ಸುಪ್ರೀಂಕೋರ್ಟ್ ತೀರ್ಮಾನವಾಗಿ ಎರಡು ವರ್ಷವಾಗುತ್ತ ಬಂತು, ಇನ್ನೂತನಕ ನಮ್ಮ ಮೈಸೂರು ಸರ್ಕಾರದವರು ಏಕೆ ಗಮನಕೊಟ್ಟಿಲ್ಲವೋ ಗೊತ್ತಿಲ್ಲ. ದಯವಿಟ್ಟು ಗಮನಕೊಟ್ಟು ತಕ್ಷಣ ಅಮಲು ಜಾರಿಗೆ ತರಬೇಕೆಂದು ಒತ್ತಾಯಮಾಡಿ ಪ್ರಾರ್ಥನೆ ಮಾಡುತ್ತೇನೆ.

ದಾಂಡೇಲಿಯಲ್ಲಿ ಒಂದು ಫ್ಯಾಕ್ಟರಿ ನಡೆದಿದೆ. 123 ಜನ ಅಲ್ಲಿ ಕೂಲಿಗಾರರು ಇದ್ದಾರೆ. ಅವರ ಬಗ್ಗೆ ಡೆಲ್ಲಿ ಡಾಕ್ಟರು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಇಲ್ಲಿ ತನಕ ಸರ್ಕಾರದವರು ಲಕ್ಷ್ಯಕೊಟ್ಟಿಲ್ಲ. ಅವರಿಗೆ ಏನು ಅನುಕೂಲತೆ ಮಾಡಿಕೊಡಬೇಕೆಂದು ಹೇಳಿದ್ದಾರೋ ಅದನ್ನು ಮಂಜೂರು ಮಾಡಿಸಿ ಕೊಡುತ್ತೀರಿ ಎಂದು ಲೇಬರ್ ಮಿನಿಸ್ಟರ್ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಹರಿಜನರಿಗೆ ಎತ್ತುಗಳಿಗಾಗಿ 300 ರೂಪಾಯಿ ಕೊಡುತ್ತೀರಿ. ತಾಲ್ಲೂಕು ಬೋರ್ಡ್‌ನಲ್ಲಿ ಯಾರು ಇರುತ್ತಾರೆ ಅವರು ತಮ್ಮ ಆಳುಮನುಷ್ಯನಿಗೆ ಮಂಜೂರುಮಾಡಿಸಿ ಕೊಳ್ಳುತ್ತಾರೆ. ಆದ್ದರಿಂದ ಇದನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಅವರಿಗೆ ಕೊಡಿಸುವ ವ್ಯವಸ್ಥೆ ಮಾಡಬೇಕು. ಈಗ ಡಿಸ್ಟ್ರಿಕ್ಟ್‌ಗೆ ಒಬ್ಬ ಸೋಷಿಯಲ್ ವೆಲ್‌ಫೇರ್ ಆಫೀಸರು ಇದ್ದಾರೆ. ಇದು ದೇಶದ ಏಳಿಗೆ ಮತ್ತು ಸುಧಾರಣೆಯ ಸ್ಕೀಂ ಆಗಿದೆ. ಇದರಲ್ಲಿ ಏನು ಒಂದು ದೋಷ ಕಂಡು ಬರುತ್ತಾ ಇದೆ ಅದನ್ನು ಸರಿಪಡಿಸುವ ಸಲುವಾಗಿ 4 ಡಿಸ್ಟ್ರಿಕ್ಟ್‌ಗೆ ಒಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ನೇಮಕಮಾಡಿ ಹರಿಜನರ ಆರ್ಥಿಕ ಪರಸ್ಥಿತಿಯನ್ನು ಸುಧಾರಣೆಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ವಿನಂತಿಸಿಕೊಳ್ಳುತ್ತೇನೆ.

ಈಗ ಶಿಕ್ಷಣ ಕೇಂದ್ರದಲ್ಲೂ ನಮ್ಮ ಜನರಿಗೆ ಸೀನಿಯಾರಿಟಿ ಮೇಲೆ ಯಾರಿಗೂ ಪ್ರಮೋಷನ್ ಕೊಟ್ಟಿಲ್ಲ. D. E. O. ಆಫೀಸುಗಳಿಗೆ A. D. E. I.ಗಳನ್ನು ನೇಮಕ ಮಾಡುವಾಗ ನಮ್ಮ ಜನಗಳಿಗ್ಯಾರಿಗೂ ನೇಮಕವಮಾಡಿಲ್ಲ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ನಮ್ಮವರು ಸೀನಿಯಾರಿಟಿಯಲ್ಲಿದ್ದ ಜನಗಳಿದ್ದರೂ D. E. O. ಆಫೀಸಿಗೆ ಒಬ್ಬರನ್ನೂ ನೇಮಕಮಾಡಿಲ್ಲ. ಹೀಗೆ ಹರಿಜನರನ್ನು ಹಿಂದಕ್ಕೆ ತಳ್ಳುತ್ತಿದ್ದಾರೆ. ಇದರಿಂದ ನಮಗೆ ಬಹಳ ಅನ್ಯಾಯವಾಗಿದೆ. ಈಗಲಾದರೂ ಸರ್ಕಾರದವರು ಈ D. E. O. ಆಫೀಸುಗಳಿಗೆ ಆಫೀಸರುಗಳನ್ನು ಅಪಾಯಿಂಟ್ ಮಾಡುವಾಗ ಹರಿಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಶಾಖೆಯ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ನಮ್ಮಲ್ಲಿ ಆಸ್ಪತ್ರೆಗಳಲ್ಲಿ ಡಾಕ್ಟರಿದ್ದರೆ ನರ್ಸುಗಳಿರುವುದಿಲ್ಲ. ನರ್ಸುಗಳಿದ್ದರೆ ಡಾಕ್ಟರುಗಳಿರುವುದಿಲ್ಲ. ನಮ್ಮ ಕಡೆ ಇಂಥಾ ರೀತಿಯಲ್ಲಿ ಕೆಲಸ ನಡೆದಿದೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಿಗೆ ಸರಬರಾಯಿ

ಯಾಗತಕ್ಕ ಔಷಧಿಗಳು ಅವು ಎಲ್ಲಿಗೆ ಹೋಗಲಿಕ್ಕೆ ಹತ್ತಿವೆ, ಇಲ್ಲವೇ ಸರ್ಕಾರದವರೇ ಸರಿಯಾಗಿ ಸರಬರಾಯಿ ಮಾಡುತ್ತಾರೋ ಇಲ್ಲವೋ ಒಂದೂ ತಿಳಿಯದಾಗಿದೆ. ಈ ಹೆಲ್ತ್ ಇಲಾಖೆಗೆ ಸರ್ಕಾರದವರು ಹೆಚ್ಚಿನ ನಿಗಾ ಕೊಡುತ್ತಾರೆಂದು ನಂಬಿದ್ದೇನೆ. ಇಲ್ಲವಾದರೆ ಈ ಆಸ್ಪತ್ರೆಗಳಿಂದ ಅಲ್ಲಿಯ ಜನರಿಗೇನೂ ಸಾರ್ಥಕವಾಗುತ್ತಿಲ್ಲ. ಈ ಆಸ್ಪತ್ರೆಗಳನ್ನು ಕೂಡಲೇ ಸುಧಾರಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದೆ ಇಟ್ಟಿರತಕ್ಕ ಬಜೆಟ್ಟಿನ ಮೇಲೆ ನನ್ನ ಕೆಲವು ಅಭಿಪ್ರಾಯಗಳನ್ನು ತಿಳಿಸಬೇಕೆಂದು ಇಷ್ಟಪಡುತ್ತೇನೆ. ಆದರೆ ಈಗಾಗಲೇ ನನ್ನ ಸ್ನೇಹಿತರನೇಕರು ಅವರವರ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಆದರೆ ಈಗ ನಮ್ಮ ದೇಶದ ಆಡಳಿತ ಯಾವ ಮಟ್ಟದಲ್ಲಿ ನಡೆಯುತ್ತಿದೆ ಎನ್ನತಕ್ಕ ವಿಚಾರದಲ್ಲಿ ನಾನೀಗ ಕೆಲವು ವಿಷಯಗಳನ್ನು ಒತ್ತಿ ಹೇಳಬೇಕೆಂದು ಬಯಸುತ್ತೇನೆ. ಸರ್ಕಾರದಲ್ಲಿ ಆಡಳಿತ ಬಿಗಿಯಾಗಿ ನಡೆಯುತ್ತಿದ್ದರೆ ಆಗಲೇ ನಮ್ಮ ದೇಶದ ಅಭಿವೃದ್ಧಿ ಕೆಲಸ ಕಾರ್ಯಗಳು ಸುಗಮವಾಗಿ ನಡೆದು ದೇಶಾಭಿವೃದ್ಧಿಯಾಗುವುದು ಎಂದು ನಂಬಿಕೆ ಇಟ್ಟು ಕೊಂಡಿರುವವರಲ್ಲಿ ನಾನು ಒಬ್ಬ. ನಾವು ಈ ದಿವಸ ಅನೇಕ ಯೋಜನೆಗಳನ್ನು ತಯಾರಿಸಿ ಕಷ್ಟದಿಂದ ಅವುಗಳಿಗೆಲ್ಲ ಹಣವನ್ನೊದಗಿಸಿಕೊಂಡು ಆ ಯೋಜನೆಗಳನ್ನು ಕಾರ್ಯರೂಪದಲ್ಲಿ ಮುಂದುವರೆಸದೆ ಹೋದರೆ ಈ ಅಭಿವೃದ್ಧಿ ಕಾರ್ಯಗಳೊಂದೂ ನಡೆಯದೆ, ಇವುಗಳಿಂದ ಜನತೆಗೆ ಯಾವ ಪ್ರಯೋಜನವೂ ಆಗದೆ ಹಣ ವೃಥಾ ವ್ಯಯವಾಗುತ್ತದೆ. ಇದನ್ನು ಕೆಲವು ವರ್ಷಗಳಿಂದ ನಾವೆಲ್ಲರೂ ನೋಡುತ್ತಿದ್ದೇವೆ. ಈಗಂತೂ ಸರ್ಕಾರದ ಆಡಳಿತ ಬಹಳ ಸಡಿಲವಾಗಿದೆ. ರೈತ ಯಾವ ಒಂದು ಅರ್ಜಿಯನ್ನೇ ಕೊಡಲಿ ಸರ್ಕಾರದಲ್ಲೇ ಅದು ವರ್ಷಾನುಗಟ್ಟಲೆ ಬಿದ್ದು ಕೊಳೆಯುತ್ತಿರುತ್ತದೆ. ರೈತನ ಕಷ್ಟಸುಖಗಳೇನು ಎಂಬುದರ ಕಡೆಗೆ ಅಧಿಕಾರಿಗಳ ಗಮನವೇ ಹರಿಯುತ್ತಿಲ್ಲ. ಒಂದೊಂದು ಆಫೀಸಿನಲ್ಲೂ ತಿಂಗಳಾನುಗಟ್ಟಲೆ ಅರ್ಜಿಗಳು ಮುಲ್ಕಿ ಬೀಳುತ್ತಿದ್ದರೆ ರೈತನಿಗಾದ ಪ್ರತಿಫಲವೇನು ? ಅವನಿಗೆ ಯಾವ ಪ್ರತಿಫಲವೂ ಇಲ್ಲ. ಹೀಗಾಗಿ ರೈತರಿಗೆ ಬಹಳ ಕಷ್ಟ-ನಷ್ಟಗಳಾಗುತ್ತಿವೆ. ಇದೇ ವಿಚಾರದಲ್ಲಿ ನಾನು ಹೋದ ಅಧಿವೇಶನದಲ್ಲಿ ಇದೇ ಸಭೆಯಲ್ಲಿ ಅಧ್ಯಕ್ಷರ ಮೂಲಕ ಮಂತ್ರಿಗಳಲ್ಲಿ ಇದನ್ನು ಸರಿಪಡಿಸಬೇಕು ಇದರ ಕಡೆಗೆ ಹೆಚ್ಚಿನ, ನಿಗಾ ಕೊಡಬೇಕೆಂದು ಅರಿಕೆ ಮಾಡಿಕೊಂಡಿದ್ದೆನು. ಆದರೆ ಇವತ್ತಿನವರೆಗೂ ಶೇಕಡ ಒಂದು ಪಾಲುಕೂಡ ಈ ಭಾಗದಲ್ಲಿ ಉತ್ತಮವಾಗಿಲ್ಲ. ಇದೊಂದು ಸಾಮಾನ್ಯವಿಷಯ ಅಂತ ಮಾನ್ಯ ಮಂತ್ರಿಗಳು ತಿಳಿದುಕೊಂಡಿರಬಹುದು. ಅವರು ಈ ಅನಾದರಣೆಯನ್ನು ಅತಿ ಜಾಗ್ರತೆಯಿಂದ ಸರಿಪಡಿಸದೆ ಹೋದರೆ ಇದಕ್ಕೆ ಜನತೆಯು ಒಂದು ಚಳವಳಿಯನ್ನೇ ಹೂಡಬೇಕೆಂಬ ಭಾವನೆಯುಳ್ಳವರಾಗಿದ್ದಾರೆ. ಅಷ್ಟಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ ಎಂದು ನಾನೀಸಂದರ್ಭದಲ್ಲಿ ಮಂತ್ರಿಗಳಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರದವರು ಜಿಲ್ಲಾ ಮಟ್ಟದಲ್ಲಿಯೂ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಈ ಆಡಳಿತ ವೇನಿದೆ ಅದನ್ನು ಸರ್ಕಾರದವರು ಸರಿಪಡಿಸದೆ ಹೋದರೆ ಇದರಿಂದ ಮುಂದೆ ಅನೇಕ ರೀತಿಯ ಕಷ್ಟ ನಷ್ಟಗಳಿಗೆ ಸರ್ಕಾರದವರು ಗುರಿಯಾಗಬೇಕಾಗುತ್ತದೆ. ಇದರಿಂದ ನಮ್ಮ ಪಂಚವಾರ್ಷಿಕ ಯೋಜನೆಗಳೊಂದೂ ಫಲಕಾರಿಯಾಗುವುದಿಲ್ಲ. ಮಾನ್ಯ ಮಂತ್ರಿಗಳು ಈ ವಿಚಾರವನ್ನು ಮುಖ್ಯವಾಗಿ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಈ ಆಡಳಿತವನ್ನು ಬಿಗಿಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಹಿಂದೆ ನಾನು ಈ ವಿಷಯವನ್ನು ಪ್ರಸ್ತಾಪಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಸ್ವಲ್ಪ ಮಟ್ಟಿಗೆ ಕೋಪ ಉಂಟಾಗಿತ್ತು. ಅವರು ಹಾಗೆ ಏತಕ್ಕೆ ಕೋಪಮಾಡಿಕೊಂಡರು ಎಂಬುದಕ್ಕೆ ಕಾರಣ ಈ ಹೊತ್ತಿನವರೆಗೂ ಗೊತ್ತಾಗಲಿಲ್ಲ. ಇಲ್ಲಿಯತನಕ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ರೈತರೇನಾದರೂ ಹೇಳಿದರೆ ಅದನ್ನು ಸಹಾನುಭೂತಿಯಿಂದ ಕೇಳುತ್ತಿದ್ದರು, ಅಂಥಾವರೂ ಸಹ ಇತ್ತೀಚೆಗೆ ಏಕೋ ಬಹಳ ಬೇಜಾರು ಮಾಡಿಕೊಂಡಿದ್ದಾರೆ. ಆದರೆ ಅದಕ್ಕೆ ಕಾರಣವೇನಿರಬೇಕೆಂಬುದನ್ನು ನನಗೆ ಜ್ಞಾಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾದ ಈ ಅಕ್ವಿಜಿಷನ್ ಕಾಗದ ಪತ್ರಗಳು ಫೈನಲಾಗದೆ 5-6 ವರ್ಷಗಳಿಂದ ಹಾಗೇ ಮುಲ್ಕಿ ಬಿದ್ದಿವೆ. ಆರುವರ್ಷಗಳಿಗೂ ಮೇಲ್ಪಟ್ಟ ಕೆಲವು ರೆಕಾರ್ಡುಗಳು ಇನ್ನೂ ಸರ್ಕಾರದಲ್ಲಿ ಹಾಗೇ ಪೆಂಡಿಂಗ್ ಬಿದ್ದಿವೆ. ಈ ವಿಚಾರವನ್ನು ನಾನು ಕಳೆದ ಸೆಷನ್ನಿನಲ್ಲಿ ಸರ್ಕಾರದವರ ಗಮನಕ್ಕೆ ತಂದಾಗ ಮಾನ್ಯ ಮಂತ್ರಿಗಳು ಈ ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಹಾಗೆ ನಿಧಾನವಾಗುವುದಿಲ್ಲ. ಅದೇನಿದ್ದರೂ ಆ ಜಿಲ್ಲಾ ಮಟ್ಟದಲ್ಲೂ-ತಾಲ್ಲೂಕುಮಟ್ಟದಲ್ಲೂ ತಡವಾಗುತ್ತಿದೆ, ಅದನ್ನು ಇನ್ನು ಕೆಲವಾರು ತಿಂಗಳಲ್ಲೇ ಸರಿಪಡಿಸಲಾಗುತ್ತದೆಂದು ನಮಗೆ ಭರವಸೆಕೊಟ್ಟಿದ್ದರು. ಆದರೆ ತಹಲ್‌ವರೆಗೂ ಯಾವರೀತಿಯಲ್ಲೂ ಇದು ಉತ್ತಮವಾಗಿಲ್ಲ. ಈ ದಿವಸ ಸರ್ಕಾರದವರು ಬಾವಿ ಇತ್ಯಾದಿಗಳಿಗೆ ಸಾಲವಾಗಿ ಹಣವನ್ನು ಕೊಡುತ್ತಿದ್ದಾರೆ. ಆದರೆ ಆ ಸಾಲ ಮಂಜೂರುಮಾಡುವ ವಿಧಾನ ಬಹಳ ವಿಚಿತ್ರವಾಗಿದೆ. ಸರ್ಕಾರದ

(ಶ್ರೀ ಜಿ. ರಾಮೇಗೌಡ)

ಆಡಳಿತದಲ್ಲಿ ಒಂದು ಬಿಗಿ ಇಲ್ಲದಿರುವುದರಿಂದ ಬಾವಿ ಸಾಲಗಳಾಗಲೀ-ಪಂಪ್‌ಸೆಟ್‌ಗಳಿಗೆ ಕೊಡತಕ್ಕ ಸಾಲಗಳಾಗಲಿ, ಅಥವಾ ಮತ್ತೆ ಯಾವ ಸಾಲವೇ ಆಗಲಿ ಸರ್ಕಾರದವರು ಈ ಸಾಲದ ಅನುಕೂಲತೆಯನ್ನು ಕಲ್ಪಿಸಿದ್ದರೂ ಈ ಅಧಿಕಾರಿಗಳು ಸರಿಯಾಗಿ ಕೆಲಸಮಾಡದೆ ಇರುವುದರಿಂದ ರೈತರುಗಳಿಗೆ ಈ ದಿವಸ ಇದರಿಂದ ಏನೇನೂ ಅನುಕೂಲವಾಗುತ್ತಿಲ್ಲ. ಸಾಲ ಮಂಜೂರಾಗಬೇಕಾದರೆ ಬಹಳ ನಿಧಾನವಾಗುತ್ತಿದೆ. ರೈತರು ತುಂಬಾ ತೊಂದರೆ ಪಡುತ್ತಿದ್ದಾರೆ. ಇದೂ ಅಲ್ಲದೆ ಕೆಲವು ಮಂತ್ರಿಗಳು ಆಗಾಗ್ಗೆ ತಾಲ್ಲೂಕುಗಳಿಗೂ ಭೇಟಿ ಕೊಡುತ್ತಾರೆ. ಆ ಕಾಲದಲ್ಲಿ ಈ ಮಂತ್ರಿಗಳು ಆ ತಾಲ್ಲೂಕುಮಟ್ಟದಲ್ಲಿರುವ ಸಾಮಾನ್ಯ ಅಧಿಕಾರಿಗಳ ಜೊತೆಯಲ್ಲಿ ಯಾವರೀತಿ ವರ್ತನೆ ಮಾಡುತ್ತಿದ್ದಾರೆಂಬುದನ್ನು ಯಾರೇ ಆಗಲಿ ಈಗಿನ ಆಡಳಿತದಲ್ಲಿ ಸ್ವಲ್ಪವೂ ಬಿಗಿ ಎಂಬುದೇ ಇಲ್ಲ ಎಂಬುದನ್ನು ಹೇಳದೆ ಇರುವುದಿಲ್ಲ. ಇದನ್ನು ನಾನು ಖಚಿತವಾಗಿ ಹೇಳುತ್ತಿದ್ದೇನೆ. ನಾನು ದೊಡ್ಡಬಳ್ಳಾಪುರದಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗೆ ಅಧ್ಯಕ್ಷ. ಅಲ್ಲಿಗೆ ಒಂದಾವರ್ತಿ ಈ ಸೋಷಿಯಲ್ ವೆಲ್‌ಫೇರ್ ಶಾಖೆಯ ಉಪಮಂತ್ರಿಗಳು ಬಂದಿದ್ದಾಗ ತಾಲ್ಲೂಕ್ ಮಟ್ಟದಲ್ಲಿ ಈ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಅಧಿಕಾರಿಗಳು ಸರಿಯಾಗಿ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ, ಅವರ ಆಡಳಿತದಲ್ಲಿ ಅನೇಕ ನ್ಯೂನತೆಗಳಿರುತ್ತವೆ ಎಂಬುದಾಗಿ ನಾವು ದೂರುಗಳನ್ನು ಹೇಳಿ ಅದನ್ನೆಲ್ಲ ಪರಿಶೀಲನೆ ಮಾಡಬೇಕೆಂತ ಹೇಳಿದೆವು ಹೀಗೆ ಅಧ್ಯಕ್ಷರೂ-ಉಪಾಧ್ಯಕ್ಷರೂ ಎಲ್ಲರೂ ದೂರುಗಳನ್ನು ಹೇಳಿದ್ದರೂ ಅದರ ಕಡೆಗೆ ಗಮನವನ್ನೇ ಕೊಡದೆ ಮಂತ್ರಿಗಳು ತಮ್ಮ ಕಾರಿನಲ್ಲ ಆ ಅಧಿಕಾರಿಗಳನ್ನೂ, ಅಂದರೆ ನಾವು ಯಾರಮೇಲೆ ದೂರನ್ನು ಹೇಳಿದ್ದೆವೋ ಅದೇ ಅಧಿಕಾರಿಯನ್ನು, ಕಾರಿನಲ್ಲಿ ಕೂರಿಸಿಕೊಂಡು ಅವರೂ-ಇವರೂ ಹೆಗಲಮೇಲೆ ಕೈಗಳನ್ನು ಹಾಕಿಕೊಂಡು ಹೊರಟುಹೋದರು. ಇದು ಏನನ್ನು ಸೂಚಿಸುತ್ತದೆ ಎಂದರೆ ಆ ಮಂತ್ರಿಗಳಿಗೆ ಈ ತಾಲ್ಲೂಕು ಅಭಿವೃದ್ಧಿ ವಿಚಾರಗಳಲ್ಲಿ ಎಷ್ಟರಮಟ್ಟಿನ ಶ್ರದ್ಧೆ-ಆಸಕ್ತಿಗಳಿರುತ್ತವೆಂಬುದನ್ನು ತೋರಿಸುತ್ತದೆ. ಈ ದಿನಸ ಒಟ್ಟಿನಲ್ಲ ಹೇಳಬೇಕೆಂದರೆ ಈ ಆಡಳಿತ ಎನ್ನುವುದು ಒಂದು ಹಳೇಬಟ್ಟೆಯಂತಾಗಿ ಯಾವಕೆಲಸಕ್ಕೂ ಬಾರದಂತಾಗಿದೆ. ಚುನಾವಣೆಗಳಲ್ಲಿ ಗೆದ್ದುಬಂದು ಶಾಸನ ಸಭೆಗಳಲ್ಲಿ ಸದಸ್ಯರಾಗಿ, ಸಂಸ್ಥೆಗಳಿಗೆ ಅಧ್ಯಕ್ಷರಾಗಿರತಕ್ಕಂಥ ಗ್ರಾಮದ ಮುಖಂಡರುಗಳ ಎದುರಿನಲ್ಲೇ ತಾಲ್ಲೂಕುಮಟ್ಟದಲ್ಲಿ ಕೆಲಸಮಾಡತಕ್ಕ ಒಬ್ಬ ಸಾಮಾನ್ಯ ಅಧಿಕಾರಿಯನ್ನು ಮಂತ್ರಿಗಳಾಗಿರತಕ್ಕವರು ಒಬ್ಬರ ಭುಜದಮೇಲೊಬ್ಬರು ಕೈ ಹಾಕಿಕೊಂಡು ಕಾರಿನಲ್ಲಿ ಕರೆದುಕೊಂಡು ಹೋದರೆಂದರೆ ಇನ್ನು ನಮಗೇನು ಮರ್ಯಾದೆಯಿದೆ ? ಈ ಆಡಳಿತದಲ್ಲಿ ಬಿಗಿ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಾವುಗಳೇ ಆಲೋಚನೆ ಮಾಡಬೇಕು, ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಅಧಿಕಾರಿ ಯಾವ ಮಟ್ಟದಲ್ಲೇ ಇರಲಿ ಅವರು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಯಾರೊಬ್ಬರ ಪ್ರಭಾವಕ್ಕೂ ಒಳಗಾಗದೆ ಕೆಲಸಗಳನ್ನು ನಡೆಸತಕ್ಕ ಅಧಿಕಾರಿಗಳಿರಬಹುದು. ಆದರೂ ಅಂಥವರು ಬಹಳ ವಿರಳ. ಆದರೆ ಅವರ ಸತ್ಯ, ನ್ಯಾಯ, ಧರ್ಮಗಳಿಂದ ಕೆಲಸ ಮಾಡಬೇಕಾದರೆ ಬಹಳ ಕಷ್ಟವಿದೆ. ಆದರೆ ಯಾವುದೇ ಒಂದು ರಾಜಕೀಯ ಪಕ್ಷದ ಪ್ರಭಾವಕ್ಕೆ ಸಿಕ್ಕಿಕೊಂಡು, ದೇಶದ ಆಡಳಿತದಲ್ಲ ನ್ಯಾಯ, ಧರ್ಮಗಳ ಹಾಗೂ ಕಾನೂನುಗಳನ್ನು ಉಲ್ಲಂಘನೆಮಾಡಿ ಕೆಲಸ ಮಾಡತಕ್ಕ ಅಧಿಕಾರಿಗಳಿದ್ದರೆ ನಮ್ಮ ಯೋಜನಾಕಾರ್ಯಕ್ರಮಗಳು ನಿಜವಾಗಿಯೂ ಮುಂದುವರಿಯುತ್ತವೆಯೇ ಎಂದು ಕೇಳುತ್ತೇನೆ ?

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಆದರೆ ನಾನು ಪೋಲೀಸಿನವರಲ್ಲಿ ದಕ್ಷತೆಯಿಲ್ಲ ಎಂದು ಹೇಳುವುದಿಲ್ಲ. ಅವರಲ್ಲಿ ದಕ್ಷತೆ ಇದೆ. ಆದರೆ ಆ ದಕ್ಷತೆಯನ್ನು ಅವರು ಅವರ ಸಮಯಕ್ಕೆ ತಕ್ಕಹಾಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವರ ಅಧಿಕಾರ ಚಲಾವಣೆಯಲ್ಲಿ ಕೆಲವು ವೇಳೆ ಅದನ್ನು ಅವರು ದುರುಪಯೋಗಮಾಡಿಕೊಂಡಿರತಕ್ಕ ಸನ್ನಿವೇಶಗಳು ಕಂಡುಬಂದಿದೆ.

ತಾಲ್ಲೂಕು ಮಟ್ಟದಲ್ಲಿ ಕಳ್ಳತನಗಳು ವಿಪರೀತ ಜಾಸ್ತಿಯಾಗಿವೆ. ದೊಡ್ಡಬಳ್ಳಾಪುರ ಟೌನಿನಲ್ಲಿ ಒಂದು ತಿಂಗಳಿನಲ್ಲಿ ಸುಮಾರು ಹತ್ತು ಕಳ್ಳತನಗಳು ನಡೆದಿವೆ. ಹಗಲಿನಲ್ಲಿ ಕೂಡ ಕಳ್ಳತನಗಳು ನಡೆಯುತ್ತವೆ. ಪೋಲೀಸ್ ಕಾನ್‌ಸ್ಟೇಬಲ್ ಮನೆಯಲ್ಲಿಯೇ ಕಳ್ಳತನ ನಡೆದು ಬಟ್ಟೆ, ಬರೆ ಮತ್ತು ದವಸವನ್ನೆಲ್ಲ ಕಳ್ಳತನ ಮಾಡಿದ್ದಾರೆ. ಇದರಿಂದ ಪೋಲೀಸ್ ಇಲಾಖೆಯು ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎನ್ನುವುದನ್ನು ನಾವು ಸ್ವಲ್ಪ ಅರಿತುಕೊಳ್ಳಬಹುದು.

5-30 P.M.

ಒಂದು ಪ್ರಸಂಗದ ಅನುಭವ ನನಗಿದೆ. ನಾನು ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ನಿಂತಿದ್ದೆ. 1962 ನೇ ಇಸವಿ ಅಕ್ಟೋಬರ್ 14 ನೇ

ತಾರೀಖು ರಾತ್ರಿ ಒಂದು ಕಡೆ ನಾವು ಸ್ನೇಹಿತರೆಲ್ಲರೂ ಸೇರಿ ಭೋಜನ ಕೂಟವನ್ನು ಏರ್ಪಾಡು ಮಾಡಿದ್ದ ಕಾಲದಲ್ಲಿ ಪೋಲೀಸಿನವರು ಬಂದು ಆಸ್ಥಳವನ್ನು ಮುತ್ತಿದರು. ಅಲ್ಲಿ ಬ್ಯಾಂಕಿನ ಡೈರೆಕ್ಟರುಗಳು ಸೇರಿ ಜೂಜಾಟ ಆಡುತ್ತಿದ್ದೇವೆ, ಕುಡಿತ ಮುಂತಾದುವನ್ನು ಮಾಡುತಿದ್ದೇವೆ ಎನ್ನುವ ಆರೋಪಣೆಯ ಮೇಲೆ ನಾಲ್ಕು ಜನ ಸರ್ಕಲ್ ಇನ್ಸ್‌ಪೆಕ್ಟರುಗಳು, ಒಬ್ಬರು ಸೂಪರಿಂಟೆಂಡೆಂಟರು, 40 ಜನ ರಿಸರ್ವ್ ದಳದವರು ಎರಡು ವ್ಯಾನ್ ಮತ್ತು ಎರಡು ಜೀಪ್‌ಗಳಲ್ಲಿ ಬಂದರು. ಅಲ್ಲಿ ನಾಲ್ಕೈದು ಜನ ಡೈರೆಕ್ಟರ್‌ಗಳು, ಮಾನ ಮರ್ಯಾದೆ ಇದ್ದು, ಒಳ್ಳೆಯ ಸಂಸಾರಿಗಳಾಗಿ, ವಿವೇಕದಿಂದ ಕೂಡಿದವರೂ ಇದ್ದರು. ನಮಗೆ ಅಂದು ಆದ ಅನುಭವವನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಅಲ್ಲಿ ಈ ಮಾನ್ಯ ಸಭೆಯ ಸದಸ್ಯರೂ ಒಬ್ಬರಿದ್ದರು. ಎಲ್ಲರನ್ನೂ ಮುತ್ತಿಕೊಂಡು ಜರೋ ಎಂದು ಸುಯ್ಯುವ ಮಳೆಯಲ್ಲಿ ಯಾಶವಂತಪುರಕ್ಕೆ ಕರೆದುಕೊಂಡು ಬಂದು ನಾಲ್ಕು ಗಂಟೆಗಳ ಕಾಲ ಪೋಲೀಸ್ ಠಾಣೆಯಲ್ಲಿ ಇರಿಸಿದರು. ಏತಕ್ಕೋಸ್ಕರ ಈ ರೀತಿ ತೊಂದರೆ ಕೊಡುತ್ತಿದ್ದಾರೆ...

Mr. SPEAKER.—Is the matter pending before any Court?

Sri G. RAME GOWDA.—No, Sir. ಆಮೇಲೆ ಬಹುಶಃ ಮಾನ್ಯ ಗೃಹಮಂತ್ರಿಗಳಿಗೆ ಏನಾದರೂ ಒಳ್ಳೆಯ ಜ್ಞಾನ ಬಂತೋ ಏನೋ ಸುಮಾರು ಒಂದು ಗಂಟೆ ರಾತ್ರಿಯಲ್ಲಿ ಅವರೆಲ್ಲರನ್ನೂ ಬಿಟ್ಟು ಬಿಟ್ಟರು. ನಾನು ಏಕೆ ಇದನ್ನೆಲ್ಲ ಹೇಳುತ್ತಿದ್ದೇನೆಂದರೆ ಕೇವಲ ಒಂದು ವರ್ತಮಾನವನ್ನು ಕೊಟ್ಟಿದ್ದರೆ, ಅವರೇ ಪೋಲೀಸ್ ಸ್ಟೇಷನ್ನಿಗೆ ಹೋಗಿ ಮಾತನಾಡತಕ್ಕ ಗೌರವ ಅವರಲ್ಲಿತ್ತು. ಅಲ್ಲಿ ಸೇರಿದ್ದವರೆಲ್ಲ ಘನತೆ, ಗೌರವವುಳ್ಳವರು. ಇಂಥವರ ಮೇಲೆ 40 ಜನ ರಿಸರ್ವ್ ಅಧಿಕಾರಿಗಳು ಇಷ್ಟು ಜನ ಮುತ್ತಿಗೆ ಮಾಡಬೇಕಾದರೆ ಅಧಿಕಾರದ ದುರುಪಯೋಗ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮಾರನೆಯ ದಿನ ನಾನು ಮುಖ್ಯಮಂತ್ರಿಗಳಿಗೆ ಈ ವಿಷಯಗಳನ್ನೆಲ್ಲ ಬರೆದು ರಿಜಿಸ್ಟರ್ ಮಾಡಿ ಒಂದು ಕಾಗದವನ್ನು ಕಳಿಸಿದೆ. ಆ ಕಾಗದಕ್ಕೂ ಉತ್ತರವಿಲ್ಲ. ಈ ಸಭೆಯ ಮಾನ್ಯ ಸದಸ್ಯರೊಬ್ಬರಿಗೆ ಮಾನ್ಯ ಮುಖ್ಯ ಮಂತ್ರಿಗಳು ಇಷ್ಟು ಗೌರವ ಕೊಡುತ್ತಾರೆಂದು ನಾನು ಬಹಳ ಸಂಕಟದಿಂದ ತಿಳಿಸಬೇಕಾಗಿದೆ.

ಇದೂ ಅಲ್ಲದೆ ಮಾನ್ಯ ಸದಸ್ಯರೊಬ್ಬರು, ಯಾರು ಅವಮಾನ ಪಟ್ಟರೋ ಅವರು, ಗೃಹ ಮಂತ್ರಿಗಳಿಗೆ ಒಂದು ಕಾಗದ ಬರೆದರು. ಅವರು ಮುಂದಿನ ದಿನ ಕ್ರಮ ಏನು ಜರುಗಿಸಿದರು ಎನ್ನುವುದು ಇದುವರೆಗೆ ಅವರಿಗೆ ತಿಳಿಸಲಿಲ್ಲ. ನಮ್ಮ ಪೋಲೀಸ್ ಇಲಾಖೆ ಬಹಳ ದಕ್ಷತೆಯಿಂದ ಇರುವುದೇ ಆದರೆ, ಏನು ಬೇಕಾದರೂ ಮಾಡಬಹುದು ಎನ್ನುವ ಧೈರ್ಯ ಅವರಿಗೆ ಇದ್ದುದೇ ಆದರೆ, ಜನತೆಗೆ, ದೇಶದ ಜನಗಳಿಗೆ ತೊಂದರೆಯಾದಾಗ ಅವರು ಈ ದಕ್ಷತೆಯನ್ನು ಏಕೆ ಉಪಯೋಗಿಸುವುದಿಲ್ಲ. ಅವರು ಸ್ವಲ್ಪ ದಕ್ಷತೆಯಿಂದ, ನ್ಯಾಯ ಧರ್ಮಗಳನ್ನನುಸರಿಸಿ ಕಾನೂನು ಪ್ರಕಾರ ಕೆಲಸ ಮಾಡಿದರೆ ನಮ್ಮ ದೇಶಕ್ಕೆ ಒಳ್ಳೆಯದಾದೀತು ಎಂದು ಸಲಹೆ ಮಾಡುತ್ತೇನೆ.

ವಿದ್ಯಾಭ್ಯಾಸದ ವಿಚಾರ ತೆಗೆದುಕೊಂಡರೆ, ವಿದ್ಯಾಭ್ಯಸ ನಮ್ಮ ದೇಶಕ್ಕೆ ಬಹಳ ಮುಖ್ಯವಾಗಿ ಬೇಕಾದುದು. ಇವಕ್ಕೆ ಹೆಚ್ಚಿನ ಹಣವನ್ನೊದಗಿಸಿದ್ದಾರೆ. ಕಡ್ಡಾಯ ಶಿಕ್ಷಣ ಜಾರಿಗೆ ಬಂದ ಮೇಲೆ ಮಕ್ಕಳಿಗೆ ಎಷ್ಟು ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೋ ಅಷ್ಟನ್ನು ಕಲ್ಪಿಸಿಕೊಟ್ಟಿಲ್ಲ. ಅನೇಕ ಪಾಠಶಾಲೆಗಳಿಗೆ ಕಟ್ಟಡಗಳಾಗಬೇಕಾಗಿವೆ, ಅನೇಕ ಶಾಲೆಗಳಿಗೆ ಉಪಾಧ್ಯಾಯರು ಬೇಕಾಗಿದ್ದಾರೆ. ಇದಕ್ಕೆ ಯಾವ ಅನುಕೂಲಗಳನ್ನೂ ಮಾಡಿಕೊಟ್ಟಿಲ್ಲ. ಸುಮಾರು 100 ಮಂದಿ ವಿದ್ಯಾರ್ಥಿಗಳಿರುವ ಕಡೆ ಕೇವಲ ಇಬ್ಬರು ಉಪಾಧ್ಯಾಯರಿರತಕ್ಕ ಸಂದರ್ಭಗಳನ್ನೂ ನಮ್ಮ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇದನ್ನು ನಮ್ಮ ವಿದ್ಯಾ ಮಂತ್ರಿಗಳು ಸ್ವಲ್ಪ ಗಮನಿಸಿ ಉಪಾಧ್ಯಾಯರುಗಳು ಎಷ್ಟು ಸಂಖ್ಯೆಯಲ್ಲಿ ಬೇಕೋ ಅಷ್ಟು ಸಂಖ್ಯೆಯಲ್ಲಿ ಒದಗಿಸುವುದು ಉತ್ತಮವೆಂದು ಕಾಣಿಸುತ್ತದೆ.

ಇದರಲ್ಲಿ ಹೆಚ್ಚಿನ ಮತ್ತು ಅಗತ್ಯವಾದ ವಿಷಯವೆಂದರೆ ಹೈಸ್ಕೂಲುಗಳನ್ನು ಪ್ರಾರಂಭ ಮಾಡತಕ್ಕದ್ದು. ಈ ವಿಚಾರವನ್ನು ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಹೈಸ್ಕೂಲುಗಳನ್ನು ಹೊಸದಾಗಿ ಪ್ರಾರಂಭ ಮಾಡಿದ ಮೇಲೆ ಮೂರು ವರ್ಷಕಾಲ ಯಾವ ಗ್ರಾಂಟನ್ನು ಕೊಡುವುದಿಲ್ಲ, ಅನಂತರ ಏನಾದರೂ, ಗ್ರಾಂಟ್ ಕೊಡುತ್ತೇವೆ ಎಂದು ಪ್ರಚಾರ ಪಡಿಸಿರುವುದರಿಂದ ಹಳ್ಳಿಯ ಕಡೆ ರೈತರಿಗೆ ಬಹಳ ತೊಂದರೆಯಾಗಿದೆ. ಈ ವರ್ಷವೇ ಈ ಶಾಲೆಗಳಿಗೂ ಗ್ರಾಂಟ್ ಕೊಟ್ಟು ಹೆಚ್ಚು ರೈತರ ಮಕ್ಕಳು ವಿದ್ಯಾಭ್ಯಾಸ ಮಾಡಿಕೊಳ್ಳಲು ಅವಕಾಶವಿರುವಹಾಗೆ ಸಹಾಯ ಮಾಡಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ತಾಲ್ಲೂಕು ಬೋರ್ಡ್‌ಗಳಿಗೆ ಪ್ರೈಮರಿ ಪಾಠಶಾಲೆಯ ಕಟ್ಟಡಗಳನ್ನು ವಹಿಸಿಕೊಳ್ಳಬೇಕು ಎಂದು ಸರ್ಕಾರದ ಆಜ್ಞೆ ಇದೆ. ಈಗ ಪಾಠಶಾಲಾ ಕಟ್ಟಡಗಳ ಪರಿಸ್ಥಿತಿ ಹೇಗಿದೆ ಎಂದರೆ ನೂರಕ್ಕೆ ಐವತ್ತು ಭಾಗ ಕುಸಿದು ಬೀಳುವ ಸ್ಥಿತಿಯಲ್ಲಿದೆ. ಈ ಕಟ್ಟಡಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ವಹಿಸು

(ಶ್ರೀ ಜಿ. ರಾಮೇಗೌಡ)

ವುದಕ್ಕೆ ಮುಂಚೆ ರಿಪೇರಿಮಾಡಿ ತದನಂತರ ಕೊಡುವುದು ಉತ್ತಮ. ಸರ್ಕಾರದವರ ಗಮನಕ್ಕೆ ಶಾಲಾ ಕಟ್ಟಡಗಳ ವಿಷಯವನ್ನು ತಂದಿದ್ದರೂ ಕೂಡ ಯಾವ ಹುಕುಮನ್ನೂ ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟಿಲ್ಲ. ಆದುದರಿಂದ ಕಟ್ಟಡಗಳನ್ನೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ವಹಿಸುವುದು ನಿಜವಾದರೆ ಅವುಗಳನ್ನು ಸರಿಯಾಗಿ ರಿಪೇರಿ ಮಾಡಿಸಿ ಮುಂದೆಯೂ ಕೂಡ ಅವುಗಳ ರಿಪೇರಿಗೆ ಸಾಕಷ್ಟು ಹಣವನ್ನು ಒದಗಿಸಬೇಕು. ಇಲ್ಲದೆ ಇದ್ದರೆ ಯಾವ ತರಹ ಪ್ರಯೋಜನವೂ ಆಗುವುದಿಲ್ಲ. ತಾಲ್ಲೂಕು ಬೋರ್ಡ್‌ಗಳಿಗೆ ಅವುಗಳನ್ನು ಸುಧಾರಿಸುವ ಶಕ್ತಿ ಇಲ್ಲದೆ ಇರುವುದರಿಂದ ಕಟ್ಟಡಗಳನ್ನು ರಿಪೇರಿ ಮಾಡಿಸಿದ ನಂತರ ತಾಲ್ಲೂಕು ಬೋರ್ಡ್‌ಗಳಿಗೆ ವಹಿಸಿಕೊಡಬೇಕೆಂದು ನನ್ನ ಅರಿಕೆ.

ವ್ಯವಸಾಯದಲ್ಲಿ ನಾನು ಕಳೆದ ಆರು ವರ್ಷಗಳಿಂದಲೂ ಯಾವರೀತಿ ನಡೆಯುತ್ತಿದೆ ಎಂದು ನೋಡುತ್ತಿದ್ದೇನೆ. ನಾನು ಒಬ್ಬ ವ್ಯವಸಾಯಗಾರ. ಇದರಲ್ಲಿ ನಮಗೆ ಏನು ಒದಗಿರುವ ಅನುಕೂಲಗಳು ಅಷ್ಟು ಪರಿಣಾಮಕಾರಿಯಾಗಿ ಕಾಣಿಸಲಿಲ್ಲ. ಸರಿಯಾದ ಬಿತ್ತನೆ ಬೀಜ ಕೊಡತಕ್ಕದ್ದು, ಬೆಳೆಗೆ ಬರತಕ್ಕ ರೋಗಗಳ ನಿವಾರಣೆಮಾಡಿ ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ಬರುವಂತೆ ಮಾಡುವುದು, ಇವು ಮೂರು ಬಹಳ ಮುಖ್ಯವಾದ ವಿಷಯಗಳು. ಇವು ಮೂರರ ಬಗ್ಗೆಯೂ ನಮ್ಮ ಸರ್ಕಾರದವರು ಸಾಕಷ್ಟು ಪರಿಣಾಮಕಾರಿಯಾದ ಕೆಲಸವನ್ನು ಮಾಡಿಲ್ಲವೆಂದು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ. ಬಿತ್ತನೆ ಬೀಜಗಳ ಸರಬರಾಜು ವಿಷಯ ತೆಗೆದುಕೊಂಡರೆ ಈ ವರ್ಷ ರಂಗೂನ್ ಮತ್ತು ಸಿಮ್ಲಾದಿಂದ ಆಲೂಗಡ್ಡೆಯನ್ನು ತರಿಸಿ ರೈತರಿಗೆ ಕೊಟ್ಟರು. ಬಿತ್ತನೆ ಬೀಜವನ್ನು ಸೆಲೆಕ್ಟ್ ಮಾಡುವುದರಲ್ಲಿ ಸರಿಯಾಗಿ ಮಾಡಲಿಲ್ಲ, ಸಕಾಲಕ್ಕೆ ತಂದು ಕೊಡಲಿಲ್ಲ, ಸರಿಯಾದ ಬೆಲೆಗೆ ಒದಗಿಸಲಿಲ್ಲ. ಅದರಲ್ಲಿಯೂ ಕೊಟ್ಟಿರತಕ್ಕ ಪದಾರ್ಥ ಅಷ್ಟು ಚೆನ್ನಾಗಿಲ್ಲವೆಂದು ರೈತರ ಅಭಿಪ್ರಾಯವಿದೆ. ಒದಗಿಸಿದ ಬೀಜ ಎಷ್ಟು ಎಂದರೆ ನೂರು ಮೂಟೆ ಕೇಳಿದ್ದರೆ 25 ಮೂಟೆ ಮಾತ್ರ ರೈತರಿಗೆ ಸಕಾಲದಲ್ಲಿ ಒದಗಿಸಲಾಗಿದೆ. ಇದರಿಂದ ಸರಿಯಾದ ಬಿತ್ತನೆ ಬೀಜ, ಗೊಬ್ಬರ ಮುಂತಾದುವನ್ನು ಒದಗಿಸಿ ರೈತರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿಲ್ಲವೆನ್ನುವ ಭಾವನೆ ಜನರಲ್ಲಿ ಹುಟ್ಟಿದೆ.

ರೋಗ ರುಜಿನಗಳ ವಿಚಾರ ತೆಗೆದುಕೊಂಡರೆ ಬೆಳೆಗಳಿಗೆ ರೋಗಗಳು ಜಾಸ್ತಿಯಾಗಿವೆ. ಜನಗಳಿಗೆ ಹೇಗೆ ಹೊಸ ರೋಗಗಳು ಬರುತ್ತಿವೆಯೋ ಹಾಗೆಯೇ ಬೆಳೆಗಳಿಗೂ ಬರುತ್ತಿದೆ. ರೋಗ ರುಜಿನಗಳ ನಿವಾರಣೆಗೆ ಸಂಶೋಧನಾ ಕೇಂದ್ರಗಳನ್ನು ತೆರೆದು ಆದಷ್ಟು ಮಟ್ಟಿಗೂ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಕಳೆದ ಸಾಲಿನಲ್ಲಿ ಮಾನ್ಯ ವ್ಯವಸಾಯ ಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದರು. ಇನ್ನೂ ಏನೂ ವ್ಯವಸ್ಥೆಮಾಡಿಲ್ಲ. ಪ್ರತಿ ಜಿಲ್ಲೆಯಲ್ಲಿಯೂ, ಪ್ರತಿ ತಾಲ್ಲೂಕಿನಲ್ಲಿಯೂ ಸಾಧ್ಯವಾದ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಡುತ್ತೇನೆಂದು ಭರವಸೆಕೊಟ್ಟಿದ್ದರು ಆ ಅನುಕೂಲಗಳು ನಮಗೆ ಏನೂ ದೊರಕಿಲ್ಲ.

ಇನ್ನು ಈ ದೇಶದಲ್ಲಿ ನೀರಾವರಿ ಬಾವಿಗಳಿಗಾಗಿ ಬಹಳ ದುಡ್ಡು ಇದೆ ಎಂದು ಹೇಳುತ್ತಾರೆ. ನೀರಾವರಿಗಾಗಿ ಬೇಕಾದಷ್ಟು ಹಣವನ್ನು ಒದಗಿಸಿದ್ದರೂ ರೈತರಿಗೆ ಅದರಿಂದ ಹೆಚ್ಚಿನ ಫಲ ದೊರಕುತ್ತಿಲ್ಲ. ಒಂದೊಂದು ತಾಲ್ಲೂಕಿಗೆ 150 ಬಾವಿಗಳು ಎಂದು ಮಂಜೂರಾಗಿದೆ. ನನಗೆ ತಿಳಿದಿರುವ ಅಂಕಿ ಅಂಶಗಳ ಪ್ರಕಾರ 50 ಬಾವಿಗಳಿಗೆ ಮೇಲ್ಪಟ್ಟು ಹಣ ಸಿಗಲಿಲ್ಲ. ಇದರಿಂದಾಗಿ ಜನಕ್ಕೆ ಪೂರ್ಣ ಫಲ ಸಿಗಲಿಲ್ಲ. ಅಲ್ಲದೆ ಹಳ್ಳಿಯ ಜನರಿಗೆ ಅನುಕೂಲವಾಗಲು ಸಾಲ ದೊರಕಿಸಿದೆ. ಇದರ ಪ್ರತಿಫಲವೂ ಸರಿಯಾಗಿ ಬಾರದೆ ಇದೆ. ಇದಕ್ಕೆ ರೆವೆನ್ಯೂ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕೆಲವು ಅಧಿಕಾರಿಗಳ ನಿಷ್ಠಾವಂತ ಕಾರ್ಯಕ್ರಮದ ಕೊರತೆಯಿಂದಾಗಿ ತೊಂದರೆಯಾಗಿದೆ. ಅಲ್ಲಿರುವ R.R. and I.L. Registersಗಳನ್ನು ಕೂಡ ತಾಲ್ಲೂಕು ಆಫೀಸಿನಲ್ಲಿ ಮೇಯಿಂಟೇನ್ ಮಾಡಿಲ್ಲ. ಗ್ರಾಮ ಪಂಚಾಯತಿಗಳ ಮೂಲಕವಾಗಿಯಾಗಲೀ ತಾಲ್ಲೂಕು ಆಫೀಸುಗಳ ಮೂಲಕವಾಗಿಯಾಗಲೀ ರೈತರಿಗಾಗಿ ಎಷ್ಟೋ ಅನುಕೂಲಗಳನ್ನು ಮಾಡಬೇಕೆಂದಿದ್ದರೋ ಈಗ ರೈತರಿಗೆ ವ್ಯವಸಾಯದ ಬಗ್ಗೆ ಅಷ್ಟು ಅನುಕೂಲಗಳು ಸಿಗುತ್ತಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಇದರ ಬಗ್ಗೆ ಸರಿಪಡಿಸಲು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ.

ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ದ್ರಾಕ್ಷಿ ಬೆಳೆ ಬಹಳ ಚೆನ್ನಾಗಿ ಅಭಿವೃದ್ಧಿಯಾಗುತ್ತಿದೆ. ಅದಕ್ಕೆ ಸರಿಯಾದ ಬೆಲೆಯು ಸಿಗುತ್ತಿಲ್ಲ. ಆದರೆ ಇದರ ವ್ಯವಸಾಯದ ಬಗ್ಗೆ ಸಾಕಷ್ಟು ಉತ್ತೇಜನ ಸರ್ಕಾರ ಕೊಡುತ್ತಿಲ್ಲ. ಇದರ ಬಗ್ಗೆ ಒಂದು ವಿಷಯವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳಿಗೆ ತಿಳಿಸಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ, ಶ್ರೀಮಾನ್ ಜತ್ತಿಯವರು

ಸರ್ಕಾರದಲ್ಲಿ ಈ ದ್ರಾಕ್ಷಿ ವ್ಯವಸಾಯಕ್ಕೆ ಹೆಚ್ಚಿನ ಅನುಕೂಲಗಳನ್ನು ಮಾಡಬೇಕಾದುದು ಅಗತ್ಯ ಇದೆ. ಇದನ್ನು ಆದಷ್ಟು ಮಾಡಲು ಪ್ರಯತ್ನ ಮಾಡುತ್ತೇವೆ ಮತ್ತು ಮೂರು ನಾಲ್ಕು ತಿಂಗಳು ಗಳಲ್ಲಿ ಇದಕ್ಕೆ ಅನುಕೂಲವನ್ನು ಕಲ್ಪಿಸಿಕೊಡುತ್ತೇವೆ ಮತ್ತು ಇದಕ್ಕಾಗಿ ಒಂದು ವೈನ್ ಫ್ಯಾಕ್ಟರಿ ಯನ್ನೂ ತೆರೆಯುತ್ತೇವೆ, ಪ್ರಯತ್ನ ಪಡುತ್ತೇವೆ ಎಂದು ಹೇಳಿದ್ದರು. ಆದರೆ ಈಗ ಅವರೇ ನಮ್ಮ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಬಂದಿರುವಾಗ, ಆಡಳಿತವನ್ನೂ ಹೊತ್ತಿರುವಾಗ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ, ಕಷ್ಟಪಟ್ಟು ಬೇಸಾಯ ಮಾಡತಕ್ಕ ಈ ದ್ರಾಕ್ಷಿ ಬೆಳೆಗೆ ಸರಿಯಾದ ಬೆಲೆ ದೊರೆಯದಂತೆ ಆಗಿರತಕ್ಕದ್ದು ತುಂಬಾ ವಿಷಾದದ ವಿಷಯ. ರೈತರು ಸುಮಾರು ಎಕರೆಗೆ ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಆ ಹಣ ಖರ್ಚು ಮಾಡಿದ್ದಕ್ಕೂ ಸರಿ ಯಾದ ಪ್ರತಿಫಲ ದೊರಕದೆ, ಇದರಿಂದ ಸಾಲ ಸೋಲಗಳಿಗೆ ಗುರಿಯಾಗಿ ಬಹಳ ಕಷ್ಟನಷ್ಟಕ್ಕೆ ಈಡಾಗುತ್ತಿದ್ದಾರೆ. ಇದಕ್ಕಾಗಿ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುವುದು. ದ್ರಾಕ್ಷಿಗೆ ಸರಿಯಾದ ಬೆಲೆ ದೊರಕಲು ಒಂದು ವೈನ್ ಫ್ಯಾಕ್ಟರಿ ಮಾಡಬೇಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಟ್ಟು ದ್ರಾಕ್ಷಿ ಬೆಳೆಗೆ ಸರಿಯಾದ ಬೆಲೆ ಬರುವಂತೆ ರೈತನ ಆದಾಯ ಪ್ರಮಾಣವೂ ಹೆಚ್ಚುವಂತೆ ತಕ್ಕ ಪ್ರಯತ್ನ ಮಾಡಬೇಕೆಂದು ಕೇಳುತ್ತೇನೆ.

ಮೀನು ಸಾಗಾಣಿಕೆ ಬಗ್ಗೆ ನಮ್ಮ ಭಾಗದಲ್ಲಿ ಸುಮಾರು ಸಹಸ್ರ ರೂಪಾಯಿಗಳನ್ನು ವೆಚ್ಚ ಮಾಡಿ ಲಕ್ಷಾಂತರ ಮರಿಗಳನ್ನು ತಯಾರು ಮಾಡಿ ಈಗ್ಗೆ ಒಂದು ವರ್ಷದ ಹಿಂದೆ ಅದನ್ನು ಅಭಿವೃದ್ಧಿ ಮಾಡಬೇಕೆಂದು ನಮ್ಮ ತಾಲ್ಲೂಕಿನ ಒಂದು ಕೆರೆಯಲ್ಲಿ ಬಿಟ್ಟಿದ್ದಾರೆ. ಎಂ.ಎಲ್.ಎ ಗಳು ಮತ್ತು ನಮ್ಮ ತಾಲ್ಲೂಕು ಬೋರ್ಡು ಅಧ್ಯಕ್ಷರುಗಳು ಈ ಇಲಾಖೆಗೆ ಮೀನಿನ ಅಭಿವೃದ್ಧಿ ಮಾಡಬೇಕೆಂದು ವ್ಯವಹಾರ ನಡೆಸಿದ್ದರೂ ಇದುವರೆಗೆ ಒಬ್ಬ ಅಧಿಕಾರಿಯಾದರೂ ಇಲ್ಲಿಗೆ ಬಂದು ಇದರ ಬಗ್ಗೆ ವಿಚಾ ರಣೆ ನಡೆಸಲಿಲ್ಲ. ಯಾವುದೂ ಸಲಹೆ ಕೊಡಲಿಲ್ಲ. ಇದನ್ನು ಪರಿಶೀಲಿಸಿ ಯಾವುದಾದರೂ ಪಂಚಾ ಯತಿಗಳ ಅಥವಾ ತಾಲ್ಲೂಕಿನ ಜನತೆಗೆ ಎಷ್ಟು ಪ್ರಯೋಜನವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಲು ಪ್ರಯತ್ನ ಮಾಡಲಿಲ್ಲ. ಆ ರೀತಿ ಸಹಾಯ ಸಲಕರಣೆಗಳನ್ನು ಒದಗಿಸಿ ನಮ್ಮ ಬಾವಿಗಳಲ್ಲಿ ಈ ಮೀನಿನ ಮರಿಯನ್ನು ಸಾಕಿ ಎಂದು ಜನಕ್ಕೆ ಹೇಳದೆ ಇರುವುದನ್ನು ನೋಡಿ ಬಹಳ ಸಂಕಟವಾಗು ತ್ತದೆ. ಕಳೆದವರ್ಷದಲ್ಲಿಯೂ ಕೂಡ ಈ ಮಾನ್ಯ ಸಭೆಯಲ್ಲಿ ಇದೇ ವಿಚಾರವಾಗಿ ಮಾತನಾಡಿ ಸಚಿವರ ಗಮನಕ್ಕೂ ತಂದು ಹೇಳಿದ್ದಾಗಿದೆ. ಈ ಯೋಚನೆ ಸ್ವಲ್ಪ ಯೋಗ್ಯವಾದುದು ಸರಿಯಾದ ರೀತಿಯಲ್ಲಿ ನಮ್ಮ ರೈತರಿಗೆ ಮೀನಿನ ವ್ಯವಸ್ಥೆಯ ಬಗ್ಗೆ ಯಾವ ಸಲಹೆಗಳನ್ನೂ ಕೊಟ್ಟಿಲ್ಲ. ಮೀನಿನ ಸಾಗಣಿಕೆಯ ಅಭಿವೃದ್ಧಿಯನ್ನೂ ಮಾಡಿಲ್ಲ. ಇದರಿಂದ ನಮ್ಮ ತಾಲ್ಲೂಕಿನಲ್ಲಿ ಇನ್ನೂ ಅಭಿವೃದ್ಧಿಯಾಗಿಲ್ಲ. ಈ ಬಗ್ಗೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಲೋಕೋಪಯೋಗಿ ಖಾತೆ ಬಹಳ ಶ್ರೇಷ್ಠವಾದ ಇಲಾಖೆ ಮತ್ತು ಹಣದ ಒಂದು ಫಲ ಜಾಸ್ತಿ ಹೊಂದಿರತಕ್ಕ ಇಲಾಖೆ. ನನಗೆ ಈ ಇಲಾಖೆಯ ವಿಷಯದಲ್ಲಿ ಸ್ವಲ್ಪ ಪರಿಶ್ರಮವಿದೆ. ಈ ಖಾತೆಯಲ್ಲಿ ಸ್ಪೆಸಿಫಿಕೇಷನ್ನಿನ ಕಡೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿಲ್ಲ. ಸ್ಪೆಸಿಫಿಕೇಷನ್ನು ಬಹಳ ಪ್ರಾಮುಖ್ಯ ವಾದುದು. ನಾನು ಜೀವನೋಪಾಯಕ್ಕಾಗಿ ಕೆಲವು ಕೆಲಸಗಳನ್ನು ಮಾಡುವಾಗ ಸೆಂಟ್ರಲ್ ಗವರ್ನ ಮೆಂಟಿನವರಿಗೂ, ಸ್ಟೇಟು ಗವರ್ನಮೆಂಟಿನವರಿಗೂ ಇರತಕ್ಕ ವ್ಯತ್ಯಾಸವನ್ನು ತಿಳಿದುಕೊಂಡಿರುವವ ರಲ್ಲಿ ನಾನು ಒಬ್ಬ. ಸೆಂಟ್ರಲ್ ಗವರ್ನಮೆಂಟಿನವರು $1\frac{1}{4}$" ಜಲ್ಲಿ ಎಂದು ಗೊತ್ತು ಮಾಡುತ್ತಾರೆ. ಸ್ಟೇಟು ಗವರ್ನಮೆಂಟಿನಲ್ಲಿ ಆ $1\frac{1}{2}$" ಜಲ್ಲಿ ದಪ್ಪ 4" ಇರುತ್ತದೆ. ಇದರಲ್ಲಿ ಏಕೆ ಇಷ್ಟು ಜಾಸ್ತಿ ದಪ್ಪ ಇದೆ ಎಂಬ ವಿಷಯಕ್ಕೆ ಯಾವ ಅಧಿಕಾರಿಯೂ ನಿಗಾ ಕೊಡುತ್ತಿಲ್ಲ ಎಂದು ನಾನು ಬಹು ಸಂಕಟದಿಂದ ಹೇಳಬೇಕಾಗಿದೆ. ರಸ್ತೆಗಳಲ್ಲಿ ಸಾಕಷ್ಟು ಕಾರ್ಯ ಮಾಡಲು guide stones, gaurd stones, gaurd walls, curb stones ಹೀಗೆ ನಾಲ್ಕೈದು ಐಟಂಗಳ ಕೆಲಸವಿದೆ. ಈ ಕೆಲಸವನ್ನು ಹೇಗೆ ಮಾಡುತ್ತಾರೆನ್ನುವುದನ್ನು ನೋಡಬೇಕಾದರೆ ಹಿಂದೂಪುರದ ಕಡೆಯಿಂದ ಇಲ್ಲಿಗೆ ವಾಪಸು ಬರುವಾಗ ಒಂದು ಮೈಲಿಗೆ ನಾಲ್ಕು, ಐದು ಸಾವಿರದಂತೆ ಖರ್ಚು ಮಾಡಿ ಕೆಲಸ ಮಾಡಿರುತ್ತಾರೆ. ಇದು ಬಹಳ ಚೆನ್ನಾಗಿಯೂ ಇದೆ. ಇದರ ಬಗ್ಗೆ ನಾನೇ ಒಂದು ಸಾರಿ ಪ್ರಶ್ನೆ ಕೇಳಿದ್ದೆ. ಇಷ್ಟು ಹಣವನ್ನು ಖರ್ಚು ಮಾಡಬೇಡಿ. ಇದಕ್ಕೆ ಬದಲಾಗಿ ಕೆಲವು ಐಟಂಗಳನ್ನು ಮಾಡಬಹುದು ಎಂದು ಸಲಹೆಯನ್ನೂ ಕೊಟ್ಟಿದ್ದೆ. ಇದಕ್ಕೆ ಸರಿಯಾದ ಸ್ಪೆಸಿಫಿಕೇಷನ್ನು ಇಟ್ಟುಕೊಂಡು ಆ ಪ್ರಕಾರ ಮಾಡಿದರೆ ಸರಿ ಯಾಗಿರುತ್ತೆ ಎಂದು ಹೇಳಿದರೂ ಸಹ ಅಧಿಕಾರಿಗಳು ಸರಿಯಾದ ನಿಗಾ ಕೊಡುತ್ತಿಲ್ಲ. ಇದರಿಂದೇನಾ ಗಿದೆ ಎಂದರೆ ಕಂಟ್ರಾಕ್ಟರುಗಳಿಗೆ ಹತ್ತು ಸಾವಿರದಷ್ಟು ಕೆಲಸ ಕೊಡಲಿ ಅದನ್ನು ಐದು ದಿನಗಳಲ್ಲೇ ಪೂರೈಸಿ ನೂರಕ್ಕೆ ನೂರರಷ್ಟು ಲಾಭವನ್ನೂ ಸಂಪಾದನೆ ಮಾಡುತ್ತಿದ್ದಾರೆ. ಕೆಲವು ಕಡೆ ಮಾಡಿದ ಕೆಲಸಗಳು ಬಹಳ ಬೇಗನೆ ಕೆಟ್ಟು ಹೋಗುತ್ತಿವೆ. ಈ ದೇಶದಲ್ಲಿ I.V.C. Roadsಗೆ ಎಷ್ಟು ಹಣ ಒದಗಿಸುತ್ತಿದ್ದಾರೆ ಎಂದರೆ ಬಹಳ ಕಡಿಮೆ. Central P.W.D. ಅವರು $1\frac{1}{4}$" ಜಲ್ಲಿ ಉಪಯೋಗಿಸಿ ಹೆಚ್ಚಿಗೆ ಹಣವೆಚ್ಚಮಾಡದೆ ರಸ್ತೆಗಳನ್ನು ಚೆನ್ನಾಗಿ ಮಾಡಿಸಿರುತ್ತಾರೆ. ಆದರೆ ನಮ್ಮಲ್ಲಿ ರಸ್ತೆಗಳ ಪಕ್ಕ

(ಶ್ರೀ ಜಿ. ರಾಮೇಗೌಡ)

ದಲ್ಲಿ ರಿವೆಟ್‌ಮೆಂಟ್ ಮಾಡಿಸಿ ಅದು ಕೆಟ್ಟುಹೋದರೆ ಪುನಃ ಅವುಗಳನ್ನೇ ಮತ್ತೆ ರಿಪೇರಿ ಮಾಡಲು ಹೋಗುತ್ತಾರೆ. ಇದನ್ನೆಲ್ಲಾ ಏತಕ್ಕೆ ಖರ್ಚು ಮಾಡುತ್ತಾರೆ ಎನ್ನುವುದನ್ನು ಯೋಚನೆ ಮಾಡಿ ನೋಡಿ ಸರಿಯಾದ ಕ್ರಮ ಕೈಗೊಳ್ಳಲು ಪ್ರಯತ್ನ ಮಾಡಬೇಕು. ಇದರಲ್ಲಿ ಸರಿಯಾದ ರಿವೆಟ್‌ಮೆಂಟ್ ಮತ್ತು flooringನ ಕಡೆಗೆ ಗಮನ ಕೊಡುತ್ತಿಲ್ಲ; ಇವನ್ನು ಶಾಸ್ತ್ರೋಕ್ತವಾಗಿ ನಡೆಸಿದರೆ 50 ವರ್ಷಗಳಾದರೂ ಬಾಳಿಕೆ ಬರುತ್ತವೆ. ರಿವೆಟ್‌ಮೆಂಟ್ ಮತ್ತು flooring ಕಡೆಗೆ ಗಮನ ಹೆಚ್ಚಾಗಿ ಕೊಡಬೇಕು, ಅನೇಕ ಕಡೆ ಮಳೆಗಾಲದಲ್ಲಿ ಕೆಟ್ಟುಹೋದ ರಿವೆಟ್‌ಮೆಂಟನ್ನು ಬೇಸಿಗೆಯಲ್ಲಿ ಪುನಃ ಹಣ ಖರ್ಚುಮಾಡಿ ರಿಪೇರಿ ಮಾಡುತ್ತಾರೆ. ರಿವೆಟ್‌ಮೆಂಟನ್ನು ಸ್ಪೆಸಿಫಿಕೇಷನ್ ಪ್ರಕಾರ ಮಾಡದಿರುವುದೇ ಕಾರಣ. ಇಂತಹ ರಸ್ತೆಗಳ ರಿಪೇರಿ ಬಗ್ಗೆ ನನ್ನಲ್ಲಿ ಸುಮಾರು 34 ಐಟಂಗಳಿವೆ. ಇದನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಕೇಳಿದರೆ, ಕೊಡಲು ಸಿದ್ಧನಾಗಿದ್ದೇನೆ. ಇಂತಹ ಅನಾವಶ್ಯಕವಾದ ಖರ್ಚುಗಳನ್ನು ತಪ್ಪಿಸುವುದು ಅವಶ್ಯಕ. Curb stones ಮತ್ತು ground stones ಇವುಗಳನ್ನುಪಯೋಗಿಸದೆ ರಸ್ತೆ ಕೆಲಸಗಳನ್ನು ಮಾಡಿದರೆ ಖಂಡಿತ ದುಡ್ಡು ಉಳಿಯುತ್ತದೆ. ಎಕಾನಮಿಯಾಗಿಯೂ ಮಾಡಬಹುದು. ಅದಷ್ಟು ಹೆಚ್ಚಿನ ಖರ್ಚು ಇಲ್ಲದೆ ಮಾಡಬಹುದು ಎಂದು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಮತ್ತು ತಾಲ್ಲೂಕು ಡೆವಲಪ್‌ಮೆಂಟು ಬೋರ್ಡು ಇವೆರಡಕ್ಕೂ ಸರಿಯಾದ co-ordination ಇಲ್ಲ. ಯಾವಾಗಲೂ ಒಂದು ಮೈಲಿಯಷ್ಟು ಕೆಲಸ ಮಾಡಬೇಕಾಗಿದ್ದರೆ ತಾಲ್ಲೂಕು ಬೋರ್ಡಿನಲ್ಲಿ ಸ್ವಲ್ಪ ವಿಮರ್ಶೆ ಮಾಡಿ ಕೆಲಸ ತೆಗೆದುಕೊಂಡು ಮಾಡುವುದು ಸೂಕ್ತ. ಅನೇಕ ಸಂದರ್ಭಗಳಲ್ಲಿ ಮೂರು ಸಾರಿ ಅಂದಾಜನ್ನೂ ಬದಲಾಯಿಸಿದ್ದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ಆದಷ್ಟು ಸಣ್ಣ ಸಣ್ಣ ಕೆಲಸಗಳನ್ನು ತೆಗೆದುಕೊಳ್ಳುವಾಗ ತಾಲ್ಲೂಕು ಡೆವಲಪ್‌ಮೆಂಟು ಬೋರ್ಡನ್ನು consult ಮಾಡಿ ಕೆಲಸಗಳನ್ನು ಮಾಡಿಸಿದರೆ ಕೆಲಸಗಳೂ ಉತ್ತಮವಾಗಿ ಆಗುತ್ತವೆ. ಅಲ್ಲದೆ ಇಲಾಖೆಯವರು ಕಂಟ್ರಾಕ್ಟುಗಳನ್ನು ಕೊಡುವಾಗ ಮೂವತ್ತು, ನಲವತ್ತು ಸಾವಿರ ರೂಪಾಯಿಗಳಷ್ಟಿದ್ದರೂ ಕೂಡ ಅದನ್ನು piece work ಮೇಲೆ ಕೊಡುತ್ತಾರೆ. ಕೆಲವು ಕಡೆ ಹತ್ತು ಸಾವಿರ ರೂಪಾಯಿಗಳಷ್ಟು ಇದ್ದರೂ ಟೆಂಡರನ್ನು ಕರೆದಿದ್ದಾರೆ. ಇದೂ ಒಂದು ವ್ಯತ್ಯಾಸವಿದೆ. ಯಾವ ಒಂದು ಮಿತಿಯನ್ನು ಗೊತ್ತುಮಾಡಿ ನಾವು ಇಟ್ಟುಕೊಳ್ಳುತ್ತೇವೆಯೋ ಅದಕ್ಕೆ ಒಂದೇ ನೀತಿಯ ಮೇಲೆ ಕಂಟ್ರಾಕ್ಟನ್ನು ಕೊಡತಕ್ಕ ವ್ಯವಸ್ಥೆಯನ್ನು ನರಿಪಡಿಸಲಾಗಿದೆ. ಆದುದರಿಂದ ಲೋಕೋಪಯೋಗಿ ಇಲಾಖೆಯವರು ಒಂದು ಮಿತಿಯನ್ನು ಗೊತ್ತುಮಾಡಿ ಆ ಮಿತಿಗೆ ಮೀರಿದ ಎಲ್ಲ ಕೆಲಸಗಳನ್ನೂ ಟೆಂಡರ್ ಮೂಲಕವೇ ಮಾಡಿಸುವುದು ಉತ್ತಮವೆಂದು ನಾನು ಭಾವಿಸುತ್ತೇನೆ.

ನಾನು ನೋಡಿದ್ದರಲ್ಲಿ ಸುಮಾರು ಆರು ವರ್ಷಗಳಿಂದ ಕೊಟ್ಟಿರತಕ್ಕ ಕೆರೆ ಕಾಮಗಾರಿ ಕೆಲಸಗಳು ಇನ್ನೂ ನಡೆದಿಲ್ಲ. ಪೂರೈಸಲು ಆ ಕೆರೆಗಳ ಹಿಂದೆ ಇರುವ ಅಚ್ಚು ಕಟ್ಟುದಾರರು ಬಹಳ ತೊಂದರೆಗೆ ಒಳಗಾಗಿದ್ದಾರೆ. ಆರು ವರ್ಷಗಳ ಹಿಂದೆ ಲೇಟ್ ಕೊಟ್ಟಿರುವ ಕಂಟ್ರಾಕ್ಟರುಗಳಿಗೂ ತೊಂದರೆಯಾಗಿ ಎಲ್ಲರಿಗೂ ಅನಾನುಕೂಲವಾಗಿದೆ. ಲೋಕೋಪಯೋಗಿ ಇಲಾಖೆಯವರು ಯಾವ ಕಂಟ್ರಾಕ್ಟ್ ಕೊಟ್ಟರೂ ಇಷ್ಟು ದಿನದಲ್ಲಿ ಮಾಡಬೇಕೆಂದು target ಮೊದಲೇ ಗೊತ್ತುಮಾಡಬೇಕು. ಇಲ್ಲದೆ ಹೋದರೆ ನಾವು ತೆಗೆದುಕೊಂಡಿರುವ ಅಭಿವೃದ್ಧಿ ಕಾರ್ಯಗಳು ಸಕಾಲದಲ್ಲಿ ಆಗದೆ ಅದರಿಂದ ರೈತರಿಗೆ ತೊಂದರೆ, ಕಂಟ್ರಾಕ್ಟರಿಗೆ ತೊಂದರೆ ಆಗುತ್ತದೆ. ಆದ್ದರಿಂದ ಯಾವ ಟೆಂಡರ್ ಕರೆದರೂ ಅದರ ಕೆಲಸ ಮುಗಿಸಲು ಒಂದು target date ಗೊತ್ತುಮಾಡಬೇಕು. ಅದಕ್ಕಿಂತ ತಡವಾದರೆ ಒಂದು ದಿನಕ್ಕೆ ಇಷ್ಟು penalty ಕೊಡಬೇಕೆಂದು ಮಾಡಿದರೆ ಕೆಲಸ ಜಾಗ್ರತ ನಡೆಯುತ್ತದೆಂದು ನನ್ನ ಅಭಿಪ್ರಾಯ.

ರಸ್ತೆಯ ಪಕ್ಕದಲ್ಲಿರುವ ಸಾಲು ಮರಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡ ಮೇಲೆ ನೂರಕ್ಕೆ ಇಪ್ಪತ್ತರಷ್ಟು ಮರಗಳು ಮಾಯವಾಗುತ್ತವೆ. ಇದಕ್ಕೆ ಕಾರಣ ನನಗೆ ಗೊತ್ತಾಗಲಿಲ್ಲ. ಯಾವ ಯಾವ ಪಂಚಾಯತಿ ಪ್ರದೇಶದಲ್ಲಿ ಸಾಲು ಮರಗಳಿವೆಯೋ ಅವುಗಳನ್ನು ಆಯಾ ಪಂಚಾಯತಿಗಳಿಗೆ ವಹಿಸಿದರೆ ಒಣಗಿಹೋದ ಮರಗಳ ಸ್ಥಳದಲ್ಲಿ ಹೊಸ ಮರಗಳನ್ನು ಹಾಕುವ ನಿಯಮವನ್ನು ಇಟ್ಟುಕೊಂಡು ಕೆಲಸ ಮಾಡಲು ಸಹಾಯವಾಗುತ್ತದೆ. ಪಂಚಾಯತಿಗಳವರು ಸಾಲು ಮರಗಳನ್ನು ಪಕ್ಕದಲ್ಲಿರುವ ಹೊಲಗಳ ರೈತರಿಗೆ ವಹಿಸಿಕೊಟ್ಟರೆ ಉತ್ತಮವೆಂದು ಕಾಣಿಸುತ್ತದೆ. ಕಳೆದ ಎರಡು ವರ್ಷಗಳಿಂದಲೂ ಸಾಲು ಮರಗಳ ಅಭಿವೃದ್ಧಿ ಸಾಕಷ್ಟು ಆಗಿಲ್ಲ. ಇದನ್ನು ಸರ್ಕಾರ ಗಮನಿಸಬೇಕು. ಅಲ್ಲದೆ ಈ ಮರಗಳಿಂದ ಬರತಕ್ಕ ಪ್ರತಿಫಲ ಪಕ್ಕದ ಜಮೀನಿನ ರೈತನಿಗೆ ಹೋಗುತ್ತಿಲ್ಲ. ಇತ್ತೀಚಿಗೆ ಕೆಲವು ಜನ ಪುಂಡರು ಹಿಂಗಡಿಸಿಕೊಂಡಿದ್ದಾರೆ. ಸರ್ಕಾರದ

ಮರಗಳನ್ನು ಕಡಿದು, ಮಾರಿ, ಜೀವನ ಮಾಡತಕ್ಕ ಒಂದು ಗುಂಪು ಕೂಡ ತಯಾರಾಗಿದೆ. ಇದನ್ನೆಲ್ಲ ತಡೆಯಬೇಕಾದರೆ ಸರ್ಕಾರ ತಕ್ಷಣ ಸಾಲು ಮರಗಳನ್ನು ಪಂಚಾಯಿತಿಗೆ ಅಥವಾ ಹಿಂದೆ ಇದ್ದ ಹಾಗೆ ರೆವಿನ್ಯೂ ಇಲಾಖೆಗೆ ವಹಿಸಿಕೊಡುವದು ಉತ್ತಮವಾಗಿ ಕಾಣುತ್ತದೆ.

ಸಮಾಜಕಲ್ಯಾಣ ಇಲಾಖೆಯವರು ಹರಿಜನರಿಗಾಗಿ ಸೊಸೈಟಿಗಳನ್ನು ಏರ್ಪಾಡುಮಾಡಿದ್ದಾರೆ. ಈ ಸೊಸೈಟಿಗಳನ್ನು ಏರ್ಪಾಟುಮಾಡಿದ ಒಂದು ವರ್ಷದ ನಂತರ ಸರ್ಕಾರದಿಂದ ಹಣ ಬರುತ್ತದೆ. ನಾವು ಒಂದು ಸೊಸೈಟಿಯನ್ನು ಪ್ರಾರಂಭಿಸಿ ಒಂದು ವರ್ಷದ ಮೇಲಾಯಿತು. ಹರಿಜನರ ಪ್ರತಿನಿಧಿಗಳೂ ಇದರಲ್ಲಿದ್ದಾರೆ. ಆದರೂ ಸರ್ಕಾರದಿಂದ ಸಹಾಯ ಇನ್ನೂ ದೊರೆತಿಲ್ಲ. ಇದನ್ನು ಮಾನ್ಯ ಮಂತ್ರಿಗಳಿಗೆ ಪ್ರತ್ಯಕ್ಷವಾಗಿ ಅರಿಕೆ ಮಾಡಿಕೊಂಡಿದ್ದೇವೆ. ಏನು ಕಾರಣದಿಂದ ಹಣವನ್ನೊದಗಿಸುವುದು ನಿಧಾನವಾಗಿದೆ ಎನ್ನುವುದು ಗೊತ್ತಿಲ್ಲ. ಜನಗಳಲ್ಲಿ ನಾವು ಓಡಾಡುವಾಗ ಅನೇಕ ಮಟ್ಟಗಳಲ್ಲಿ ಒಂದೊಂದು ಭರವಸೆ ಕೊಡುತ್ತೇವೆ. ಈ ಭರವಸೆಗಳಲ್ಲಿ ನೂರಕ್ಕೆ ಹತ್ತು ಭಾಗವಾದರೂ ನೆರವೇರದೆ ಹೋದರೆ ನಮ್ಮಲ್ಲಿ ಅವರಿಗೆ ಇರುವ ನಂಬಿಕೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಸರ್ಕಾರದವರು ದಯವಿಟ್ಟು ಇದರ ಕಡೆ ಗಮನಕೊಟ್ಟು ಯಾವ ಭರವಸೆಯನ್ನು ಕೊಟ್ಟಿದ್ದಾರೆಯೋ ಆ ಪ್ರಕಾರ ಸೊಸೈಟಿಗಳಿಗೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಬಡ ಹರಿಜನರಿಗೆ ಸಹಾಯ ಮಾಡಬೇಕೆಂದು ನಾನು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಎಂ. ದೇವಯ್ಯ (ಪೆರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಈ ತುರ್ತುಪರಿಸ್ಥಿತಿಯಲ್ಲಿ ಕೂಡ ನಮ್ಮ ಆರ್ಥಿಕ ಸಚಿವರು ಸಮತೂಕದ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಕ್ಕೆ ಬಹಳ ಸಂತೋಷವಾಗಿದೆ.

ಸ್ವಾಮಿ, ಈಗಿನ ತುರ್ತುಪರಿಸ್ಥಿತಿಯಲ್ಲಿ ರೈತನು ಶ್ರಮಪಟ್ಟು ದೇಶದ ಏಳಿಗೆಗಾಗಿ ಹೆಚ್ಚು ಬೆಳೆಯಬೇಕೆಂದು ಸರ್ಕಾರದವರು ಕೇಳುವುದೂ ನ್ಯಾಯ, ರೈತರು ಆ ಬಗ್ಗೆ ದುಡಿಯುವುದೂ ಉಚಿತ. ರೈತರು ದುಡಿಯಬೇಕು. ಕಷ್ಟ ಕಾಲದಲ್ಲಿ ಪ್ರತಿಯೊಬ್ಬನೂ ಒಂದಕ್ಕೆ ನಾಲ್ಕರಷ್ಟು ಬೆಳೆಸಲು ಶ್ರಮಪಡಬೇಕು. ಆದರೆ ಇವೊತ್ತು ಏನಾಗಿದೆ ಎಂದರೆ ರೈತನ ಸ್ಥಿತಿ ಬಹಳ ಕೆಟ್ಟು ಹೋಗಿದೆ. ಅದರಲ್ಲಿಯೂ ಸಣ್ಣ ರೈತನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವನು ಬೆಳೆಸಿದ ಬತ್ತಕ್ಕೆ ಸರಿಯಾದ ಧಾರಣೆ ಇಲ್ಲ. ಕಳೆದ ಎರಡು ವರ್ಷಗಳಷ್ಟು ಈ ವರ್ಷ ಇಲ್ಲ. ಇನ್ನೊಂದು ಕಡೆ ಅವನಿಗೆ ಬೇಕಾದ ಸಾಮಾನುಗಳ ಕ್ರಯ ಜಾಸ್ತಿಯಾಗಿದೆ. ಜೀವನ ವಸ್ತುಗಳ ಬೆಲೆ ಜಾಸ್ತಿಯಾಗಿದೆ, ವ್ಯವಸಾಯಕ್ಕೆ ಬೇಕಾದ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ. ಹೀಗಾದರೆ ಅವನು ಹೇಗೆ ಬದುಕುತ್ತಾನೆ, ಹೇಗೆ ಕಷ್ಟಪಡುತ್ತಾನೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಸ್ವಲ್ಪ ಯೋಚನೆಮಾಡಿ ಯಾವ ರೈತ ದುಡಿದು, ಬೆಳೆಸಿ, ವ್ಯಾಪಾರಸ್ತನಿಗೋ, ಉದ್ಯೋಗಸ್ತನಿಗೋ ನೀಫಾ ಪ್ರದೇಶದಲ್ಲಿ ಕಷ್ಟಪಡುವವನಿಗೋ ಕೊಡುತ್ತಾನೆಯೋ ಅಂಥ ರೈತರಿಗೆ ಸ್ವಲ್ಪಮಟ್ಟಿಗಾದರೂ ''to make both ends meet'' ಎನ್ನುವ ಹಾಗೆ ಆಗುವಂಥ ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಅವನು ಕಷ್ಟಪಟ್ಟೂ ಸಹಾಯವಾಗುವುದಿಲ್ಲ. ಸರ್ಕಾರದವರು ಸ್ವಲ್ಪ ಅವನ ಸಹಾಯಕ್ಕೆ ಬಂದು ಅವನು ಬೆಳೆಯುವ ಬತ್ತ, ಬೆಲ್ಲ, ಇವುಗಳ ಬೆಲೆ ಬೀಳದ ಹಾಗೆ ಮಾಡಲು ಅವುಗಳನ್ನು ಸರ್ಕಾರದವರು ಕೊಳ್ಳುವ ವ್ಯವಸ್ಥೆ ಮಾಡಬೇಕು. ಬತ್ತವನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತೇವೆಂದು ಈ ವರ್ಷ ಸರ್ಕಾರದವರು ಮುಂದೆ ಬರುವ ವೇಳೆಗೆ ರೈತರು ಬತ್ತವನ್ನೆಲ್ಲ ಮಾರಿದ್ದರು. ಇದರಿಂದ ''ಊರು ಕೊಳ್ಳೆ ಹೊಡೆದ ಮೇಲೆ ಊರು ಬಾಗಿಲು ಹಾಕಲಿಕ್ಕೆ ಬಂದರು'' ಎಂಬಂತೆ ಆಯಿತು. ಈ ಒಂದು ತೀರ್ಮಾನವನ್ನು ಎರಡು ತಿಂಗಳ ಹಿಂದೆಯೇ ತೆಗೆದುಕೊಂಡಿದ್ದರೆ ರೈತನು ಕೆಡುತ್ತಿರಲಿಲ್ಲ. ಬೆಳೆ ಡಿಸೆಂಬರ್‌ನಲ್ಲಿ, ಇನ್ನೂ ಕೆಲವು ಸಲ ನವಂಬರ್ ತಿಂಗಳಿನಲ್ಲಿಯೇ ಬರುತ್ತದೆ. ಆಗಿನಿಂದಲೇ ಇಂಥ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಬಡರೈತನಿಗೆ ಅನುಕೂಲವಾಗುತ್ತಿತ್ತು. ಈಗ ತೆಗೆದುಕೊಂಡಿರುವ ತೀರ್ಮಾನದಿಂದ ಕೆಲವು ಶ್ರೀಮಂತರಿಗೆ ಮಾತ್ರ ಅನುಕೂಲವಾಗಿದೆ. ಸರ್ಕಾರದವರು ಕೊಟ್ಟ ಹಣ ಶ್ರೀಮಂತರಿಗೆ ಮತ್ತು ವ್ಯಾಪಾರಸ್ತರಿಗೆ ಹೋಗುತ್ತಿದೆ, ಬಡರೈತರಿಗೆ ಮುಟ್ಟಿಲ್ಲ.

ಸ್ವಾಮಿ ಇವೊತ್ತು ಬತ್ತದ ಧಾರಣೆ ಹೇಗೆ ಇಳಿದಿದೆಯೋ ಹಾಗೆಯೇ ರೈತರಿಗೆ ಬೇಕಾದ ಇತರ ಸಾಮಾನುಗಳನ್ನು ಅದೇ ಮಟ್ಟದಲ್ಲಿ ಒದಗಿಸಿಕೊಡಲು ಸರ್ಕಾರದವರು ಮುಂದೆ ಬರಬೇಕು. ಹಾಗೆ ಮಾಡದೆ ಹೋದರೆ ರೈತನು ಹನ್ನೆರಡು ತಿಂಗಳೂ ಬದುಕಲಾರ. ರೈತನಿಗೆ ಸಿಕ್ಕುವುದು ವರ್ಷಕ್ಕೆ ಒಂದೇ ಬೆಳೆ. ಅದರಲ್ಲಿ ಅವನು ಹನ್ನೆರಡು ತಿಂಗಳೂ ಜೀವನ ಕಳೆಯಬೇಕು. ಅವನು ದುಡಿಯಬೇಕು, ಅವನು ಮಕ್ಕಳು-ಮರಿಯನ್ನು ಸಾಕಬೇಕು. ರೈತರಿಗೆ ಬೇಕಾದ ಬಟ್ಟೆ, ಸಾಬೂನು, ಇಂಥ ಎಲ್ಲದರ ಕ್ರಯವೂ ಜಾಸ್ತಿಯಾಗಿದೆ. ಅವನಿಗೆ ಏನಾದರೂ ಬೇಕಾದರೆ ಪಟ್ಟಣಕ್ಕೆ ಹೋಗಬೇಕು. ಸಿಮೆಂಟ್ ಬೇಕು ಎಂದರೆ district headquarterಗೆ ಹೋಗಿ ಅಲ್ಲಿ ಪರ್ಮಿಟ್

(ಶ್ರೀ ಕೆ. ಎಂ. ದೇವಯ್ಯ)

ಪಡೆಯಬೇಕು. ಅದಕ್ಕೆ ಒಂದು ವಾರ ವಾಯಿದೆ ಕೊಡುತ್ತಾರೆ. ಆಗ ಸಿಮೆಂಟ್ ಬಂದಿರುವುದಿಲ್ಲ. ಅದಕ್ಕೆ ಪುನಃ ಹೋಗಬೇಕಾಗುತ್ತದೆ. ಹೀಗೆ ನಾನಾ ರೀತಿಯ ತಾಪತ್ರಯಗಳಿರುತ್ತವೆ. ಇದನ್ನೆಲ್ಲ ಸರ್ಕಾರದವರು ಸ್ವಲ್ಪ ಸರಿಪಡಿಸಲು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ರೈತನು ಹೆಚ್ಚು ಬೆಳೆಸಬೇಕು, ನಿಜ. ಇವೊತ್ತು ರೈತನ ಸ್ಥಿತಿ ಏನಾಗಿದೆ ? ಅವನಿಗೆ ಯಾವ ರೀತಿ ಹೆಚ್ಚು ಬೆಳೆಸಬಹುದು ಎನ್ನುವುದು ಗೊತ್ತಿಲ್ಲ. ತನ್ನ ಭೂಮಿಯಲ್ಲಿ ಯಾವ ತರಹ ಗೊಬ್ಬರ ಹಾಕಬೇಕು, Phosphate, Potash, Ammonia, ಇವುಗಳಲ್ಲಿ ಯಾವುದನ್ನು ಹಾಕಬೇಕು ಎನ್ನುವುದು ಗೊತ್ತಿರುವುದಿಲ್ಲ. ಕಡಮೆ ಖರ್ಚಿನಲ್ಲಿ ಆದಷ್ಟು ಹೆಚ್ಚು ಬೆಳೆಸಲಿಕ್ಕೆ ಸರ್ಕಾರದವರು ತಜ್ಞರ ಮೂಲಕ ಸಹಾಯಕ್ಕೆ ಬರಬೇಕಾಗಿದೆ. ವ್ಯವಸಾಯ ಇಲಾಖೆ ಇದೆ. ಅದರ ಸಹಾಯ ಏನೇನೂ ಸಾಲದು. ರೈತನು ಹೆಚ್ಚು ಬೆಳೆಸಬೇಕಾದರೆ ಪ್ರತಿಯೊಬ್ಬ ರೈತನಿಗೂ ತನ್ನ ಮನೆಯಲ್ಲಿಯೇ ಮಣ್ಣಿನ ಪರೀಕ್ಷೆ ಮಾಡಿ ಸುಲಭದಲ್ಲಿ ರೈತನಿಗೆ ಹೇಳಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

6-00 P.M.

ಹೀಗೆ ಕೊಡದೆ ಹೋದರೆ ಗೊಬ್ಬರ ಹಾಕಿದರೂ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಕೆಲವು ತರಹ ಭೂಮಿಗೆ ಅದಕ್ಕೆ ಒಗ್ಗುವ ಗೊಬ್ಬರವನ್ನೇ ಹಾಕಬೇಕು. ಅದಕ್ಕೆ ಬೇಡದ ಗೊಬ್ಬರ ಹಾಕಿದರೆ, ಬೆಳೆ ಚೆನ್ನಾಗಿ ಆಗುವುದಿಲ್ಲ. ಈ ವಿಚಾರದಲ್ಲಿ ರೈತನಿಗೆ ಸರಿಯಾದ ತಿಳುವಳಿಕೆ ಕೊಡುವುದಕ್ಕೆ ವ್ಯವಸಾಯ ಇಲಾಖೆಯವರು ಪ್ರಯತ್ನಪಡಬೇಕು. ಕಡಿಮೆ ಖರ್ಚಿನಲ್ಲಿ ಹೇಗೆ ಹೆಚ್ಚಿಗೆ ಬೆಳೆಯುವುದು ಎಂಬ ಬಗ್ಗೆ ಅನುಕೂಲಮಾಡಬೇಕು.

ನಾವು ಮಲೆನಾಡಿನವರು ; ಗುಡ್ಡಗಾಡು ಸೀಮೆಯಲ್ಲಿ ಇರುವವರು. ನಮ್ಮ ಪ್ರದೇಶದಲ್ಲಿ 125 ರಿಂದ 300 ಇಂಚ್‌ವರೆಗೆ ಮಳೆ ಬೀಳುತ್ತದೆ. ಜಮೀನಿಗೆ ರೈತರು ಗೊಬ್ಬರ ತೆಗೆದುಕೊಂಡು ಹೋಗುವುದಕ್ಕೆ ರಸ್ತೆಯೇ ಇಲ್ಲ; ಮನೆಗೆ ಸಾಮಾನು ಸಾಗಿಸುವುದಕ್ಕೆ ನಾಲ್ಕು ಮೈಲಿ ಹೋಗಬೇಕಾಗುತ್ತದೆ; ಚಿಕ್ಕ ರಸ್ತೆ ಅನುಕೂಲವಿಲ್ಲದಿರುವುದರಿಂದ ರೈತನಿಗೆ ಎಷ್ಟು ದುಬಾರಿ ಖರ್ಚಾಗುತ್ತದೆನ್ನುವುದನ್ನು ಯೋಚನೆಮಾಡಬೇಕು. 2–3 ವರ್ಷದಲ್ಲಿ ಕೆಲವು ರಸ್ತೆಗಳಾಗಿವೆ ; ಆದರೆ ಅವು ಅರ್ಧಂಬರ್ಧ ಆಗಿವೆ, ಅಗಲ ಮಾಡಿದರು, ಕಟ್ ಮಾಡಿದರು, ಮಣ್ಣುಹಾಕಿದರು. ಅವು ನಡೆದು ಹೋಗುವ ಸ್ಥಿತಿಯಲ್ಲಿಲ್ಲ ; ಅಂತಹುದರಲ್ಲಿ ಜಮೀನಿಗೆ ಗೊಬ್ಬರ ತಂದುಹಾಕುವುದು ಹೇಗೆ ? ನಮ್ಮ ಮಲೆನಾಡು ಡೆವಲಪ್ ಆಗಬೇಕು. ಮಲೆನಾಡು ರಾಜ್ಯಕ್ಕೆ ಕೋಲಾರದ ಚಿನ್ನದಗಣಿ ಇದ್ದ ಹಾಗೆ. ಮಲೆನಾಡಿನಲ್ಲಿ ಬತ್ತ, ಬೆಳೆಯುವುದಲ್ಲದೆ, ಕಾಫಿ, ಕಿತ್ತಳೆ, ಏಲಕ್ಕಿ, ಪೆಪ್ಪರ್ ಬೆಳೆಸುತ್ತಾರೆ. ಅವುಗಳನ್ನು ಬೆಳೆದು agricultural income tax ರೂಪದಲ್ಲಿಯೇ ಒಂದು ದೊಡ್ಡ ಮೊತ್ತದ ಹಣವನ್ನು ಕೊಡುತ್ತಾ ಇದ್ದೇವೆ. ಹಾಗಿದ್ದರೂ ಇವತ್ತು ಮಲೆನಾಡಿಗೂ ತಾಲ್ಲೂಕಿಗೆ 50-50 ಮೈಲಿ ರಸ್ತೆಯನ್ನು, ಬಾಕಿ ಪ್ರದೇಶಗಳಲ್ಲಿರುವಂತೆ, ಮಾಡಿಕೊಡುತ್ತೇವೆ, ಹೆಚ್ಚು ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಮಲೆನಾಡಿನಲ್ಲಿ ತಾಲ್ಲೂಕಿಗೆ 100 ಮೈಲಿ ಮಾಡಲಿಕ್ಕೆ ತಾವು ಒಪ್ಪಬೇಕು. ರೈತನು ಬೆಳೆದ ಸಾಮಾನುಗಳನ್ನು ಪಟ್ಟಣಕ್ಕೆ ತರಲಿಕ್ಕೆ, ಮನೆಗೆ ತರಲಿಕ್ಕೆ ರಸ್ತೆ ಅನುಕೂಲ ಮಾಡಿಕೊಡದಿದ್ದರೆ ರೈತನಿಗೆ ಬಹಳ ಕಷ್ಟವುಂಟಾಗುತ್ತದೆ. ಕಾಫಿ, ಕಿತ್ತಳೆ ಬೆಳೆಯುವುದಕ್ಕೆ ಹೆಚ್ಚು ಖರ್ಚು ಮಾಡುತ್ತಾರೆ. ಅದನ್ನು ಸಾಗಿಸುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಮಲೆನಾಡಿಗೆ ರಸ್ತೆ ಮಾಡಿಕೊಡುವುದಕ್ಕೆ ಕೋಟಿಗಟ್ಟಲೆ ರೂಪಾಯಿ ಖರ್ಚಾಗುವುದಿಲ್ಲ ; 50-60 ಲಕ್ಷ ರೂಪಾಯಿ ಖರ್ಚಾಗಬಹುದು. ಮಲೆನಾಡಿನವರು ಅಗ್ರಿಕಲ್‌ಚರ್ ಇನ್-ಕಂ ಟ್ಯಾಕ್ಸ್ 70-80 ಲಕ್ಷ ರೂಪಾಯಿ ಕೊಡುತ್ತಾರೆ. ಸರ್ಕಾರಕ್ಕೆ ಹೇರಳವಾದ ಉತ್ಪತ್ತಿ ಮಾಡಿಕೊಡುತ್ತಿರುವ ಮಲೆನಾಡಿಗೆ ರಸ್ತೆ ಅನುಕೂಲ ಮಾಡಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಆ ಅನುಕೂಲವನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಸರ್ಕಾರವನ್ನು ಅತಿ ವಿನಯದಿಂದ ಕೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಮೆಂಬರನ್ನು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಚೇರ್ಮನ್ನಾಗಿ ಮಾಡಬೇಕು.

ಶ್ರೀ ಕೆ. ಎಂ. ದೇವಯ್ಯ.—ಕಾಫಿ ಬೆಳೆಯುತ್ತೇವೆ. ಆದರೆ ನಮ್ಮ ಸ್ಥಿತಿ ಏನಾಗಿದೆಯೆಂದರೆ, ವೇಜಸ್ ಕೊಡುವುದಕ್ಕೆ ಜಾಸ್ತಿ ಹಣ ಹೋಗುತ್ತಿದೆ ; ಇದಲ್ಲದೆ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕು. ಕಾಫಿ ಬೆಳೆಯುವವರು ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ

ಕಾಫಿ ಜಾಸ್ತಿ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು; ಏಕೆಂದರೆ ಇದು ಫಾರೆನ್ ಎಕ್ಸ್‌ಚೇಂಜ್ ದೊರಕಿಸಿಕೊಡುವ ಒಂದು ಕಮೋಡಿಟಿ. ಇದನ್ನು ಜಾಸ್ತಿ ಬೆಳೆಯುವಂತೆ ಉತ್ತೇಜನ ಕೊಡಲು ಇಂಡಿಯಾ ಸರ್ಕಾರದವರು ಕಾಫಿ ಬೆಳೆಯುವವರಿಗೆ ಎರಡು ಕೋಟಿ ರೂಪಾಯಿ ಸಾಲಕೊಡಲಿಕ್ಕೆ ಏರ್ಪಾಡು ಮಾಡಿದ್ದಾರೆ. ಈ ಹಣವನ್ನು ಕಾಫೀಬೋರ್ಡ್ ಮೂಲಕ ಕೊಟ್ಟಿದ್ದಾರೆ. ಕೊಟ್ಟು ಎರಡು ವರ್ಷವಾಯಿತು. ಅದರಲ್ಲಿ 25 ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ; ಇನ್ನೂ 1 ಕೋಟಿ 25 ಲಕ್ಷರೂಪಾಯಿ ಹಾಗೆಯೆ ಉಳಿದಿದೆ. ಮೈಸೂರು ಸೀಮೆಯವರು ಜಾಸ್ತಿ ಕಾಫಿ ಬೆಳೆಯುತ್ತಿದ್ದರೂ ಹಣ ವಿನಿಯೋಗವಾಗದೆ ಏಕೆ ಉಳಿದಿದೆಯೆಂದರೆ, ಸಾಲದ ಬಗ್ಗೆ ಸರಿಯಾದ ವಿವರಗಳಿಲ್ಲ. ಮಾಡಿರುವ ಕಾನೂನು, ನಿಯಮಗಳು ಬಹಳ ಕಠಿಣವಾಗಿವೆ, ಇದರಿಂದ ಜನರಿಗೆ ಸಾಲ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಈ ಹಣವನ್ನು ಸೆಂಟ್ರಲ್ ಗೌವರ್ನಮೆಂಟಿನಿಂದ ಮೈಸೂರು ಸರ್ಕಾರ ತೆಗೆದು ಕೊಂಡು, ಅದನ್ನು ಸೊಸೈಟಿಗಳಿಗೆ ಕೊಟ್ಟು, ಅವರ ಮೂಲಕ ಜನರಿಗೆ ತಲುಪುವ ಏರ್ಪಾಡು ಮಾಡಬೇಕು.

ನಾವು ಏಲಕ್ಕಿಯನ್ನೂ ಬೆಳಸುತ್ತಾ ಇದ್ದೇವೆ. ಏಲಕ್ಕಿ ಪರಿಸ್ಥಿತಿ ಏನಾಗಿದೆಯೆಂದರೆ, ಯಾವ ಕಾಲಕ್ಕೆ ಮಣಕ್ಕೆ 250 ರೂಪಾಯಿ ಇತ್ತೋ, ಅದು ಇವತ್ತು 80-90-100 ರೂಪಾಯಿಗೆ ಇಳಿದಿದೆ. ಇಂಥ ಪರಿಸ್ಥಿತಿಯಲ್ಲಿ ಅವನ್ನು ಬೆಳೆಯುವವರಿಗೆ ಬಹಳ ಕಷ್ಟ ಒದಗಿದೆ. ಕಾಫೀಬೋರ್ಡಿನ ಹಾಗೆಯೇ ನಮಗೆ ಒಂದು ಏಲಕ್ಕಿ ಬೋರ್ಡ್ ಮಾಡಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡೆವು, ಅದು ಫಲಕಾರಿಯಾಗಲಿಲ್ಲ. ಈಗ ಒಂದು ಕಮಿಟಿ ಮಾಡಬೇಕೆಂದು ದೆಹಲಿಗೆ ಸಜೆಷನ್ ಹೋಗಿದೆ ಶೀಘ್ರದಲ್ಲಿಯೇ ಏಲಕ್ಕಿ ಬೋರ್ಡು ಆಗಬೇಕು, ಇಲ್ಲದಿದ್ದರೆ ಚಿಕ್ಕಮಗಳೂರು ಕಡೆ ಮತ್ತು ನಮ್ಮ ಕಡೆ ರೈತರು ಕೆಟ್ಟುಹೋಗುವ ಸಂಧರ್ಭ ಬಂದೀತು. ಇದು ಜೂನ್ ತಿಂಗಳಿಗೆ ಮೊದಲೇ ಆಗುವ ಏರ್ಪಾಡುಮಾಡಬೇಕು.

ನಮ್ಮ ಹಾರಂಗಿ ನದಿಗೆ ಅಡ್ಡಲಾಗಿ ಕಟ್ಟೆಕಟ್ಟಿ ಎಂಬ ಒಂದು ಕೂಗು, ನಿನ್ನೆಯದಲ್ಲ; ಅದು 60 ವರ್ಷದಿಂದ ಇರುವ ಕೂಗು. ಹಾರಂಗಿಗೆ ಕಟ್ಟೆ ಶೀಘ್ರವಾಗಿ ಆಗಬೇಕು. ಕೊಡಗಿನ ಜನರು ಇದಕ್ಕೆ ಹಿಂದಿನಿಂದಲೂ ಬೇಕೆಂಬ ಗುಲ್ಲು ಎಬ್ಬಿಸುತ್ತಿದ್ದಾರೆ. ಬ್ರಿಟಿಷ್ ಸರ್ಕಾರವಿದ್ದಾಗ, ಕೊಡಗು ಸಣ್ಣ ಸ್ಟೇಟಾಗಿ ದುಡ್ಡು ಇರಲಿಲ್ಲ. 1947ನೇ ಇಸವಿಯಲ್ಲಿ ಸೆಂಟ್ರಲ್ ಗೌರ್ನಮೆಂಟಿನವರು ಬಂದು ಈ ಯೋಜನೆಯನ್ನು ಪರಿಶೀಲನೆಮಾಡಿದರು. 1952ನೇ ಇಸವಿಯಲ್ಲಿ ಪ್ರಜಾಪ್ರಭುತ್ವ ಸರ್ಕಾರ ಬಂದ ಮೇಲೆ, ನಮ್ಮ ಆಗಿನ ಸರ್ಕಾರದವರು ಅದನ್ನು ತೆಗೆದುಕೊಳ್ಳಬೇಕೆಂದು ಬಹಳ ಪ್ರಯತ್ನ ಪಟ್ಟು ಮೈಸೂರು ಸರ್ಕಾರದ ಜೊತೆಯಲ್ಲಿ ವ್ಯವಹಾರ ನಡೆಸಿದರು, ಕೇಳಿದರು ; ಆದರೆ ಮೈಸೂರು ಸರ್ಕಾರ ಒಪ್ಪದೆ, ಅದನ್ನು ಅಲ್ಲಿಯೇ ಬಿಟು ಬಿಟ್ಟಿದ್ದಾಯಿತು. ಅಂದರೆ ನಮ್ಮ ಕೊಡಗಿನ ಸರ್ಕಾರ ದವರು ಪ್ರಯತ್ನಪಟ್ಟರು, ಆಗಿನ ಮೈಸೂರು ಸರ್ಕಾರ ಒಪ್ಪಲಿಲ್ಲ. ಕೊಡಗು ಮೈಸೂರಿನಲ್ಲಿ ವಿಲೀನವಾದಮೇಲೆ ಕೊಡಗಿನ ಜನರು ಅಸೆಂಬ್ಲಿಯಲ್ಲಿ ಮತ್ತು ಹೊರಗಡೆ ಪ್ರಾಜೆಕ್ಟನ್ನು ಕೂಡಲೇ ತೆಗೆದುಕೂಳ್ಳಬೇಕೆಂದು ಒತ್ತಾಯಪಡಿಸಿದರು. ಕರ್ಣಾಟಕ ಪ್ರಾಂತ್ಯರಚನೆಯಾಗಿ, ಕೊಡಗು ಅದಕ್ಕೆ ಸೇರಿದ ತಕ್ಷಣ ಮೈಸೂರು ಸರ್ಕಾರ ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡುತ್ತದೆಂಬ ದೊಡ್ಡ ಆಶೆ ಕೊಡಗಿನವರಿಗೆ ಇತ್ತು ; ನಮ್ಮ ಫ್ರೇಸರ್‌ಪೇಟೆ ಹೋಬಳಿಗೆ ನೀರು ಒದಗುತ್ತದೆಂದು ಜನರು ಕಾತುರರಾಗಿದ್ದರು ; ಈ ಒಳ್ಳೆಯ ಯೋಜನೆಯನ್ನು ಶೀಘ್ರದಲ್ಲಿಯೇ ಮೈಸೂರು ಸರ್ಕಾರ ಮಾಡಿ ಕೊಡುತ್ತದೆಂದು ನಂಬಿದ್ದೆವು. 1956ನೇ ಇಸವಿಯಲ್ಲಿ ನಮ್ಮಲ್ಲಿ ಆದ ಬೈ-ಎಲೆಕ್ಷನ್ನಿಗೆ ನಾನು ನಿಂತೆ. ಆವಾಗ ನಮ್ಮ ಈಗಿನ ಚೀಫ್-ಮಿನಿಸ್ಟರೇ ಚೀಫ್-ಮಿನಿಸ್ಟರಾಗಿದ್ದರು ಅವರು ಅಲ್ಲಿಗೆ ಬಂದಾಗ, ನಾವು ಬಹಳ ಕಷ್ಟದಲ್ಲಿದ್ದೇವೆ, ನಮ್ಮ ಭೂಮಿಗಳು ಫಲವತ್ತಾದುವು, ನೀರು ಇಲ್ಲವೆ ಕೊರತೆ ಯಾಗಿದೆ, ನೀರು ಒದಗಿಸಿಕೊಡಬೇಕು ಎಂದು ಅವರನ್ನು ಜನರೆಲ್ಲಾ ಕೇಳಿಕೊಂಡರು. ಹಾರಂಗಿ ಕಟ್ಟೆ ಮಾಡಿಕೊಡುತ್ತೇವೆಂದು ಆಗ ಭರವಸೆ ಕೊಟ್ಟಿದ್ದಾರೆ. ಇದು ಆಗಬೇಕೆಂದು ಹಿಂದಿನಿಂದಲೂ ಒತ್ತಾಯವಿದೆ. ಇದಕ್ಕೆ ಎರಡು ವರ್ಷ ಪರಿಶೀಲನೆ ನಡೆಯಿತು. ಸೆಂಟ್ರಲ್ ಗವರ್ನಮೆಂಟಿನವರು ನಮಗೆ ಭರವಸೆ ಕೊಟ್ಟರು.

ಆದರೂ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾರಂಗಿ ಬಗ್ಗೆ ಒಂದನೇ ವರ್ಷ ಒಂದು ಕೋಟಿ ರೂಪಾಯಿ ಮಂಜೂರು ಮಾಡಿ ಇಟ್ಟಿದ್ದರು. ಈಗಲೂ 10 ಲಕ್ಷ ರೂಪಾಯಿ ಇಟ್ಟಿದ್ದಾರೆ. ಆದರೆ ಅದು ಇವತ್ತಿಗೂ ಕಾರ್ಯಗತವಾಗಿಲ್ಲ. ಮೊನ್ನೆ ಚೀಫ್ ಮಿನಿಸ್ಟರ್ ಅವರು ಮಾಡುತ್ತೇವೆ ಎಂದು ಹೇಳಿದರು. Re-investigate ಮಾಡಿಸುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಕೊಡಗಿನಲ್ಲಿ ಕಂಬದಕಡ ಹಾರಂಗಿ ಎರಡು ಕಟ್ಟೆ ಆಗಬೇಕೆಂದು ಹೇಳಿದ್ದಕ್ಕೆ ಜನರು ವಿರೋಧಮಾಡಿದ್ದು ನಿಜ. ಆದರೆ ಹಾರಂಗಿಗೆ ವಿರೋಧ ಮಾಡಲಿಲ್ಲ. ಅದು ಆಗಬೇಕೆಂದು ಮೊದಲಿನಿಂದಲೂ ತಿಳಿಸುತ್ತಾ ಇದ್ದಾರೆ. ಕಂಬದ ಕಡ ಹೊಸದು, ಅಲ್ಲಿ 7,000 ಎಕರೆ ಮುಳುಗುವಂಥ ಯೋಜನೆ ಆದದ್ದರಿಂದ ಜನರಿಗೆ ಗಾಬರಿ ಆಯಿತು. ಇದು ಒಂದಕ್ಕೆ ವಿರೋಧ ಬರುತ್ತಾ ಇದ್ದದ್ದು ಇದೇ ವಾಸ್ತವಾಂಶ.

(ಶ್ರೀ ಕೆ. ಎಂ. ದೇವಯ್ಯ)

ಶ್ರೀಮಾರ್ಜ್ ಅಪ್ಪಣ್ಣನವರೂ ಇದ್ದಾರೆ ಅವರನ್ನು ಕೇಳಬಹುದು. ಹಾರಂಗಿಯಲ್ಲಿ 5 ಸಾವಿರ ಎಕರೆ ಮುಳುಗಡೆಯಾಗುತ್ತದೆ. 1 ಲಕ್ಷ 5 ಸಾವಿರ ಎಕರೆ ನೀರಾವರಿಯಾಗುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಹಾರಂಗಿಯಲ್ಲಿ ಸಣ್ಣ ಪ್ರಮಾಣದ ಕಟ್ಟೆ ಕಟ್ಟುವ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಕೆ. ಎಂ. ದೇವಯ್ಯ.—ನನ್ನ ಸ್ವಂತ ಅಭಿಪ್ರಾಯ ನಮಗೆ ನೀರು ಆಗಬೇಕು ಪಿರಿಯಾ ಪಟ್ಟಣದ ಜನರು ಮಂಡ್ಯ ಡಿಸ್ಟ್ರಿಕ್ಟಿನ ಜನರ ಹಾಗೆ ಉತ್ತಮ ರೀತಿಯಿಂದ ಬದುಕಬೇಕು.

ಶ್ರೀ ಎಸ್ ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಹಾರಂಗಿಯಲ್ಲಿ 180 ಅಡಿ ಕಟ್ಟೆ ಕಟ್ಟಬೇಕೆಂದು ಆಗಿದೆಯಲ್ಲಾ ಅದು ಆಗಬೇಕೆ ? ಬೇಡವೇ ?

ಶ್ರೀ ಕೆ. ಎಂ. ದೇವಯ್ಯ.—ಸ್ವಾಮಿ, 180 ಅಡಿ ಕಟ್ಟೆ ಹೆಚ್ಚು ಕಮ್ಮಿ ಕಡಿಮೆ ಮಾಡಿದರೂ ಹೆಚ್ಚಿನ ಭಾಗಕ್ಕೆ ನೀರಾವರಿಯಾಗುತ್ತದೆ. ತಾವು ಯಾವುದು ಮಾಡಿದ್ದೀರಿ ಅದನ್ನು ವಿವರಿಸುತ್ತೇನೆ. 120 ಅಡಿ ಕಟ್ಟೆ ಹಾಕಿದರೆ 4,000 ಎಕರೆ ಮುಳುಗಡೆಯಾಗುತ್ತದೆ ಮತ್ತು ಸರ್ಕಾರದವರಿಗೆ ಹೆಚ್ಚು ಖರ್ಚಾಗುತ್ತದೆ ಎಂದು ನನಗೆ ವರ್ತಮಾನ ಬಂದಿದೆ. ನನ್ನ ವಾದ ಏನೆಂದರೆ ಆ ಕಟ್ಟೆ ಆಗಲಿಕ್ಕೇ ಬೇಕು. ಜನರು ಅಲ್ಲಿ ನೀರಿಲ್ಲದೇ ಸಾಯುತ್ತಾ ಇದ್ದಾರೆ. ನೀವು ಹಿಂದೆ ಏನು ಹೇಳಿದ್ದೀರಿ ಆ ಪ್ರಕಾರ ಮಾಡುತ್ತೀರಿ ಎಂದು ನಂಬಿದ್ದರು. ಈಗ ಸ್ವಲ್ಪ ಜಿಗುಪ್ಸೆ ಹೊಂದಿದ್ದಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಕಂಬದಕಡ ಬೇಡ ಅನ್ನುತ್ತೀರಾ ?

ಶ್ರೀ ಕೆ. ಎಂ. ದೇವಯ್ಯ.—ಕಂಬದಕಡ ಬೇಡ ಎಂದು ನಾನು ಹೇಳಿದರೆ ಬಿಡುತ್ತಾರೆಯೇ ? ಅದರಲ್ಲಿ ಒಂದು ದೋಷ ಏನಿದೆ ಅದಕ್ಕೇ ಜನ ವಿರೋಧ ಮಾಡುತ್ತಾ ಇದ್ದಾರೆ. 7,000 ಎಕರೆ ಮುಳುಗಡೆ ಆದರೆ ಬಹಳ ಕಷ್ಟವಾಗುತ್ತದೆ ಎಂದು ಹೇಳುವುದು ನ್ಯಾಯವಾಗಿದೆ. ನನ್ನ ಅಭಿಪ್ರಾಯ ಕಂಬದಕಡ, ಹೇಮಾವತಿ ಬಿಟ್ಟರೆ ಹಾರಂಗಿ ಏನಿದೆ ಇದು ಬಹಳ ಒಳ್ಳೆಯದು. 1 ಲಕ್ಷ 50 ಸಾವಿರ ಎಕರೆ ನೀರಾವರಿಯಾಗುತ್ತದೆ. ಯಾರೂ ಕೂಡ ತಕರಾರು ಮಾಡಲಿಕ್ಕೆ ಇಲ್ಲ. ಅದೂ ಅಲ್ಲದೆ ಹಾರಂಗಿ ಕಟ್ಟೆ ಬರುವುದು ನಾನ್ ಷೆಡ್ಯೂಲ್ ರಿವರ್‌ನಲ್ಲಾದ್ದರಿಂದ ಕಟ್ಟೆ ಹಾಕಕೂಡದೆಂದು ಯಾರಿಂದಲೂ ತಕರಾರು ಬರುವುದಿಲ್ಲ. ಇದನ್ನು ಆದಷ್ಟು ಶೀಘ್ರವಾಗಿ ತಗೆದುಕೊಳ್ಳಬೇಕು. ಹೊಗೇನಕಲ್ ಕಟ್ಟೆ ಆಗುವ ಸಂಭವ ಬೇರೆ ಇದೆ. ಅದು ಆದ ಪಕ್ಷದಲ್ಲಿ ನಮಗೆ ನೀರು ಕಡಿಮೆ ಯಾಗುತ್ತದೆ ಎಂಬ ಹೆದರಿಕೆ ಜನರಲ್ಲಿ ಇದೆ. ಜನರ ಅಭಿಪ್ರಾಯ ಯಾವರೀತಿ ಇದೆ ಎಂಬುದನ್ನು ನೋಡಿದರೆ 54 ನೇ ಇಸವಿಯಲ್ಲಿ ನಮಗೆ ದುಡ್ಡು ಇಲ್ಲದ ಕಷ್ಟ ಬಂದಿತ್ತು. ಈಗ ಆ ಕಷ್ಟ ಇಲ್ಲ ಎಂದು ಯೋಚಿಸುವಷ್ಟರಲ್ಲಿಯೇ ಕಂಬದಕಡ, ಹಾರಂಗಿ ಅಂತ ಹೇಳಿ ಎರಡುಕಡೆ ಕಟ್ಟಬೇಕೆಂದು ಅಭಿಪ್ರಾಯ ಬಂದದ್ದರಿಂದ ಜನರ ಕಡೆಯಿಂದ ವಿರೋಧ ಹೀಗೆ ಅಪಶಕುನ ಬರುತ್ತಾ ಇದೆ. ಇದಕ್ಕೆ ಅವಕಾಶ ಕೊಡಬಾರದು. ಶೀಘ್ರದಲ್ಲಿಯೆ ಆ ಕೆಲಸ ತೆಗೆದುಕೊಳ್ಳಬೇಕು ಎಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಇವೆರಡನ್ನೂ ಬೇರೆ ಬೇರೆಯಾಗಿ ಬೈಫರ್ಕೇಟ್ ಮಾಡುತ್ತಾರೆ ಎಂಬ ವರ್ತಮಾನ ಕೇಳುತ್ತಾ ಇದ್ದೇನೆ. ನಮ್ಮಲ್ಲಿ ಎರಡು ಕ್ಷೇತ್ರಗಳು ಇವೆ. ಇಂಥಾ ಕ್ಷೇತ್ರಗಳು ಇಡೀ ಹಿಂದೂ ದೇಶದಲ್ಲಿ 10–20 ಕೇಂದ್ರಗಳು ಇರಬಹುದು ಎಂದು ನನಗೆ ತೋರುತ್ತದೆ. ಬೆಂಗಳೂರಿನಲ್ಲಿ ಹೂವಿನ ತೋಟ, ನಮ್ಮಲ್ಲಿ ಕಿತ್ತಳೆ, ಮಾವಿನ ಹಣ್ಣು ಇತ್ಯಾದಿಗಳನ್ನು ವಿಶೇಷವಾಗಿ ಬೆಳೆಯುತ್ತಾರೆ. ಇದರಲ್ಲಿ ನಮಗೆ ಬಹಳ ದೊಡ್ಡ ಉತ್ಪನ್ನ ಬರುತ್ತಾ ಇದೆ. ನಮ್ಮ ದುರ್ದೈವ, ಕಿತ್ತಳೆಗೆ ರೋಗ ಬಂದರೆ ಅದನ್ನು ನಿವಾರಣೆ ಮಾಡಲಿಕ್ಕೆ ಸಾಕಷ್ಟು ಸಹಾಯವಿಲ್ಲದೇ ಅದನ್ನು ಬಿಟ್ಟೇ ಬಿಡೋಣ ಎನ್ನುವಷ್ಟು ಜಿಗುಪ್ಸೆ ಬಂದಿತ್ತು. ಆದರೆ ಕೇಂದ್ರದವರು ಸಹಾಯ ಮಾಡಿದರು. ಇವತ್ತು ತಾವು ನೋಡಬಹುದು. ಒಂದು ಒಳ್ಳೆಯ ಸಂಶೋಧನಾ ಕೇಂದ್ರ ಅಲ್ಲಿ ಏನಿದೆ ಅದರಿಂದ ನಾವು ಯಾರು ಜಿಗುಪ್ಸೆ ಪಟ್ಟುಕೊಂಡಿದ್ದೆವು ನಾವೆಲ್ಲಾ ಅನೇಕ ವಿಷಯಗಳನ್ನು ಕಲಿತುಕೊಂಡಿದ್ದೇವೆ. ಅದಕ್ಕೆ ಎಲ್ಲಿ ಧಕ್ಕೆ ಬಂದೀತೋ ಎಂದು ಸಂಶಯ. ಸಂಶೋಧನಾ ಕೇಂದ್ರ ಮಾಡಬೇಕಾದರೆ ಲ್ಯಾಬೊರೇಟರಿ ಬೇಕು. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ ಹಾರ್ಟಿಕಲ್ಚರನ್ನು ತೆಗೆದು ಬೇರೆ ಡಿಪಾರ್ಟ್‌ಮೆಂಟಾಗಿ ಮಾಡಿದರೆ ಅಷ್ಟೆಲ್ಲಾ ಆಗುವುದು ಕಷ್ಟ. ಆದ್ದರಿಂದ ಇದನ್ನು ಪುನರ್ವಿಮರ್ಶೆ ಮಾಡಿ, ಆ ರೀತಿ ಬೈಫರ್ಕೇಟ್ ಮಾಡದೆ ಅದಕ್ಕೆ ಬದಲಾಗಿ ಜಾಯಿಂಟ್ ಡೈರೆಕ್ಟರುಗಳನ್ನಿಟ್ಟು ಒಂದೇ ಇಲಾಖೆಯ ಮೂಲಕ ಈ ಕೆಲಸ ನಡೆಸಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಸ್ವಾಮಿ, ನಾನು ಇನ್ನೂ ಒಂದು ವಿಷಯವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವಿದ್ಯಾಭ್ಯಾಸದ ವಿಷಯದಲ್ಲಿ ಈಗ ಬಹಳ ಮಾರ್ಪಾಡಾಗಿದೆ. ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ವರ್ಷಕ್ಕೆ 2,400 ರೂಪಾಯಿಗಳಿಗಿಂತ ಕಡಮೆ ವರಮಾನವಿದ್ದರೆ ಆ ವಿದ್ಯಾರ್ಥಿಗಳಿಗೆ ಸ್ಕೂಲು ಫೀ ಯನ್ನು ಮಾಫಿ ಮಾಡಿದ್ದಾರೆ. ಇದರ ಜೊತೆಗೆ ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನೂ ಕೂಡ ಜಾರಿಗೆ ತಂದಿದ್ದಾರೆ. ಇದರಲ್ಲಿ ಒಂದು ವಿಷಯ ಕಡ್ಡಾಯ ಶಿಕ್ಷಣವನ್ನೇನೋ ಜಾರಿಗೆ ತಂದಿದ್ದಾರೆ. ಆದರೆ ಆ ಶಾಲೆಗಳಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗವೇ ಇಲ್ಲ. ಆದರೆ ನಮ್ಮ ಕಡೆ ಒಂದು ಕೋಣೆ ಕಟ್ಟಡ ಕಟ್ಟಲು ಕನಿಷ್ಟಪಕ್ಷ 3 ಸಾವಿರ ರೂಪಾಯಿಗಳಾದರೂ ಬೇಕು. ಏತಕ್ಕೆಂದರೆ ಅಲ್ಲಿ ಮಳೆ ಬಹಳ ಬೀಳುತ್ತೆ. ಕಟ್ಟಡ ಬಂದೋಬಸ್ತಾಗಿಲ್ಲದಿದ್ದರೆ ಅವು ಮಳೆಗೆ ಬಿದ್ದುಹೋಗುತ್ತವೆ. ನಮ್ಮ ಕಡೆ ನಾವು ಈ ಶಾಲಾ ಕಟ್ಟಡಗಳಿಗೆ ನಮ್ಮ ಸ್ವಂತ ಮರದ ಸಾಮಾನುಗಳನ್ನು ಕೊಟ್ಟರೂ ಮೇಲೆ 3 ಸಾವಿರ ರೂಪಾಯಿಗಳು ಬೇಕೇ ಬೇಕು. ಅದಕ್ಕೆ ಸರ್ಕಾರದವರಿಗೀಗ ಜನರು 2 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರು ಒಂದು ಸಾವಿರ ಗ್ರ್ಯಾಂಟ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಇಷ್ಟು ಹಣ ಕೊಡಲು ಜನಗಳಿಗೆ ಶಕ್ತಿಯಿಲ್ಲ. ಆದುದರಿಂದ ಸರ್ಕಾರದ ಗ್ರ್ಯಾಂಟ್ ಒಟ್ಟು ಖರ್ಚಿನಲ್ಲಿ $\frac{2}{3}$ ಭಾಗವಿರಬೇಕೆಂತಲೂ, ಜನರ ಭಾಗ $\frac{1}{3}$ ಭಾಗವಿರಬೇಕೆಂತಲೂ ಒಂದು ವಿಧಾಯಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಡಗಿನಲ್ಲಿ ಹೈಸ್ಕೂಲುಗಳೇನೋ ಜಾಸ್ತಿಯಾಗಿವೆ. ಅವೆಲ್ಲವೂ ಖಾಸಗೀ ಹೈಸ್ಕೂಲುಗಳೇ. ಅಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರತಕ್ಕ ಅಗತ್ಯವೇನಿಲ್ಲ. ಈಗ ಅಲ್ಲಿ ಹತ್ತು ಹೈಸ್ಕೂಲುಗಳಿವೆ. ಆದರೆ ಖಾಸಗಿಯವರು ಹೈಸ್ಕೂಲನ್ನು ಸ್ಥಾಪಿಸಿದರೆ ಮೊದಲನೆಯ ಐದು ವರ್ಷಗಳು ಅವರಿಗೆ ಸರ್ಕಾರದವರು ಗ್ರ್ಯಾಂಟೇನನ್ನೂ ಕೊಡುವುದಿಲ್ಲವಂತೆ. ಹೀಗಾದರೆ ಬಹಳ ಕಷ್ಟ. ಇಂಥ ಕಂಡೀಷನ್‌ಗಳನ್ನು ಬೇರೆ ಭಾಗಗಳಿಗೆ ಮಾಡದೆ ಕೇವಲ ನಮ್ಮ ಜಿಲ್ಲೆಗೆ ಮಾತ್ರ ಮಾಡಿದ್ದಾರೆ. ಸರ್ಕಾರದವರು ಕೂಡಲೆ ಇದನ್ನು ಪುನರ್ವಿಮರ್ಶೆ ಮಾಡಬೇಕು. ಸರ್ಕಾರದವರು ಈ ವಿಚಾರದಲ್ಲಿ ಹಿಂದೂ ಮುಂದೂ ನೋಡದೆ ಖಾಸಗೀ ಹೈಸ್ಕೂಲುಗಳಿಗೆ ಸ್ಥಾಪನೆಯಾದ ರಾಗಾಯಿತು ಅವುಗಳಿಗೆ ಗ್ರ್ಯಾಂಟನ್ನು ಕೊಟ್ಟೇ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise and meet again at 1 P.M. on 7th March 1963.

The House adjourned at Twenty-five Minutes past Six of the Clock to meet again at One of the Clo·k on Thursday, the 7th March 1963.